ಹೋರಾಟದ ಪರಿಭಾಷೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ನಿಬಂಧ

: ಸಂಶೋಧಕ :
ಬಿ. ಬಸವರಾಜ

: ಮಾರ್ಗದರ್ಶಕರು :
ಡಾ|| ಪಿ. ಮಹಾದೇವಯ್ಯ
ಮುಖ್ಯಸ್ಥರು, ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬.

ಸೆಪ್ಟಂಬರ್ ೨೦೦೮

ಹೋರಾಟದ ಪರಿಭಾಷೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ನಿಬಂಧ

: ಸಂಶೋಧಕ :
ಬಿ. ಬಸವರಾಜ

: ಮಾರ್ಗದರ್ಶಕರು :
ಡಾ॥ ಪಿ. ಮಹಾದೇವಯ್ಯ
ಮುಖ್ಯಸ್ಥರು, ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬.

ಸೆಪ್ಟಂಬರ್ ೨೦೦೮

ದೃಢೀಕರಣ ಪತ್ರ

ಶ್ರೀ ಬಿ. ಬಸವರಾಜ ಇವರು **'ಹೋರಾಟದ ಪರಿಭಾಷೆ'** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಭಾಷಾನಿಕಾಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೦-೦೯-೦೮

(ಡಾ॥ ಪಿ. ಮಹಾದೇವಯ್ಯ)
ಮಾರ್ಗದರ್ಶಕರು
ಮುಖ್ಯಸ್ಥರು,
ಕನ್ನಡ ಭಾಷಾಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ-೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಹೋರಾಟದ ಪರಿಭಾಷೆ ಎಂಬ ಈ ನಿಬಂಧವನ್ನು **ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಎಂ.ಫಿಲ್ ಪದವಿಗಾಗಿ ಡಾ॥ ಪಿ. ಮಹಾದೇವಯ್ಯ** ಅವರ ಮಾರ್ಗದರ್ಶ-ನದಲ್ಲಿ ಸಿದ್ಧಪಡಿಸಿ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೦-೦೯-೦೮

(ಬಿ. ಬಸವರಾಜ)
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ **ಡಾ|| ಎ. ಮುರಿಗೆಪ್ಪ** ಮತ್ತು ಮಾನ್ಯ ಕುಲಸಚಿವರಾದ **ಡಾ|| ಹೀ.ಚಿ. ಬೋರಲಿಂಗಯ್ಯ** ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ **ಡಾ|| ಡಿ. ಪಾಂಡುರಂಗಬಾಬು** ಅವರಿಗೆ,

ಎಂ.ಫಿಲ್ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ನನ್ನ ಗುರುಗಳಾದ **ಶ್ರೀ ಎಸ್.ಬಿ. ಮುದ್ದಿಯವರು**, ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ನಮ್ಮ **ವಿ.ವಿ.ಸಂಘದ ಪಾ ಪೇಪಾಜಿ ಹಸ್ತಿಮಲ್ ಜೈನ್ ಪದವಿಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು, ಪ್ರಾಚಾರ್ಯರು** ಮತ್ತು **ಸಿಬ್ಬಂದಿವರ್ಗ**ದವರಿಗೆ, ಗ್ರಂಥಾಲಯದಲ್ಲಿ ಪುಸ್ತಕಗಳನ್ನು ನೀಡಿ ಸಹಕರಿಸಿದ **ಗ್ರಂಥಾಲಯ ಸಿಬ್ಬಂದಿ** ಅವರಿಗೆ,

ಈ ನಿಬಂಧವನ್ನು ಸಿದ್ಧಪಡಿಸಲು ಮಾರ್ಗದರ್ಶಕರಾಗಿ ದೊರೆತು ನಿಬಂಧ ರೂಪಗೊಳ್ಳಲು ಅನುವು ಮಾಡಿಕೊಟ್ಟ ಮುಖ್ಯಸ್ಥರಾದ **ಡಾ|| ಪಿ. ಮಹಾದೇವಯ್ಯ**ನವರಿಗೆ, ಅಧ್ಯಯನ ಸಂದರ್ಭದಲ್ಲಿ ಸಂಶೋಧನೆಗೆ ನೆರವು ನೀಡಿದ ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ|| ಕೆ.ವಿ. ನಾರಾಯಣ, ಡಾ|| ಅಶೋಕ ಕುಮಾರ ರಂಜೇರೆ, ಡಾ|| ಸಾಂಬಮೂರ್ತಿ** ಹಾಗೂ ಗುಮಾಸ್ತರಾದ **ಶ್ರೀ ವೀರೇಶ** ಅವರಿಗೆ,

ಪ್ರಾರಂಭದಿಂದಲೂ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ ತಂದೆಯವರಾದ **ಶ್ರೀ ಬಿ. ನಿಂಗಪ್ಪ**, ತಾಯಿಯವರಾದ **ಶ್ರೀಮತಿ ಬಿ. ನಿಂಗಮ್ಮ**, ಮಾವಂದಿರಾದ **ಶ್ರೀ ಬಿ.ಆರ್. ಈಶ್ವರಪ್ಪ**, ಅಕ್ಕಂದಿರಾದ **ಶ್ರೀಮತಿ ಬಿ.ಆರ್. ವನಜಾಕ್ಷಿ**, ಎಷ್ಟೇ ಕೌಟುಂಬಿಕ ಒತ್ತಡಗಳಿದ್ದರೂ, ನನ್ನ ವಿದ್ಯಾಭ್ಯಾಸದ ಬೆಳವಣಿಗೆಗೆ ಸಹಕರಿಸಿದ ಹೆಂಡತಿಯಾದ **ಬಿ. ಅಕ್ಕಮಹಾದೇವಿ** ಅವರಿಗೆ,

ಅಧ್ಯಯನ ಸಂದರ್ಭದಲ್ಲಿ ಅನೇಕ ಸಲಹೆ–ಸಹಕಾರ ನೀಡಿದ **ಡಾ|| ಕೆ. ರುದ್ರಪ್ಪ**, **ಪ್ರೊ|| ಡಿ.ಬಿ. ಬಡಿಗೇರ** ರಾಜ್ಯ ಸಮುದಾಯ ಸಂಘಟನೆಯ ಮುಖಂಡರು, ಬಂಡಾಯ ಸಾಹಿತಿಗಳು, **ಪ್ರೊ|| ಎಸ್.ಎಸ್. ಹಿರೇಮಠ, ಶ್ರೀ ಜ್ಯೋತಿ ಲಿಂಗರಾಜ** ಎ.ಐ.ಎಸ್.ಎಫ್. ದಾವಣಗೆರೆ ಜಿಲ್ಲಾ ಸಂಚಾಲಕರು, **ಶ್ರೀ ಹೆಚ್.ಎಂ. ಸಂತೋಷ** ಎ.ಐ.ಎಸ್.ಎಫ್. ದಾವಣಗೆರೆ ಜಿಲ್ಲಾ ಕಾರ್ಯದರ್ಶಿ, **ಶ್ರೀ ಇಸ್ಮಾಯಿಲ್ ಎಲಿಗಾರ್, ಶ್ರೀ ಬಿ. ಬಸವರಾಜ** ಇಪ್ಟಾ ಮುಖಂಡರು, **ಶ್ರೀ ಹೇಮಂತ ಮೋರಿಗೇರಿ, ಶ್ರೀ ಇದ್ಲಿ ರಾಮಪ್ಪ, ಶ್ರೀ ವೀರೇಶ್ ಉತ್ತಂಗಿ, ಶ್ರೀ ಶೇಖರಾಚಾರಿ, ಶ್ರೀ ಗವಿಸಿದ್ದಪ್ಪ, ಶ್ರೀ ಎನ್.ಎಂ. ವಾಗೀಶ, ಶ್ರೀ ಸುದೀಪ್, ಶ್ರೀ ಕೆ. ಜಗದೀಶ, ಶ್ರೀ ಪಿ. ಜಗದೀಶ, ಶ್ರೀ ಜಬ್ಬೀರ್, ಶ್ರೀ ಬಿ. ಯರಿಯಪ್ಪ** ಅವರಿಗೆ.

ಒತ್ತಡದ ಪರಿಸ್ಥಿತಿಯಲ್ಲಿ ಅಚ್ಚುಕಟ್ಟಾಗಿ ಅಕ್ಷರ ಸಂಯೋಜಿಸಿದ **ಶ್ರೀ ಟಿ. ರವೀಂದ್ರ, ಗ್ಲೋರಿಯಸ್ ಕಂಪ್ಯೂಟರ್ಸ್**, ಹರಪನಹಳ್ಳಿ ಅವರಿಗೆ,

ಪ್ರೀತಿಯ ಕೃತಜ್ಞತೆಗಳು.

ಬಿ. ಬಸವರಾಜ

ಪರಿವಿಡಿ

ಅಧ್ಯಾಯ-೧

ಹೋರಾಟದ ಪರಿಭಾಷೆಯ ಸ್ವರೂಪ, ಉದ್ದೇಶ ಮತ್ತು ಪ್ರಾಮುಖ್ಯತೆ

ಅಧ್ಯಾಯ-೧

ಹೋರಾಟದ ಪರಿಭಾಷೆಯ ಸ್ವರೂಪ, ಉದ್ದೇಶ ಮತ್ತು ಪ್ರಾಮುಖ್ಯತೆ

ಪಾರಿಭಾಷಿಕ ಪದಗಳ ರಚನೆ ಮತ್ತು ಬಳಕೆ ತುಂಬ ಕ್ಲಿಷ್ಟ ಮತ್ತು ಸಂದಿಗ್ಧತೆಯಿಂದ ಕೂಡಿರುತ್ತದೆ. ಹಲವಾರು ಪಾರಿಭಾಷಿಕ ಪದಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾನ್ಯತೆಗಳನ್ನು ಪಡೆದಿವೆ. ಇಂತಹ ಪದಗಳನ್ನು ದೇಶೀಯ ಮತ್ತು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸುವುದು ತುಂಬ ಕಷ್ಟದಾಯಕ ಕೆಲಸವಾಗುತ್ತದೆ. ಹೊಸ ಪದಗಳ ಅವಶ್ಯಕತೆ ಕಂಡುಬಂದಾಗ, ಅನ್ಯ ಭಾಷಾ ಪದಗಳನ್ನು ಉಪಯೋಗಿಸುವುದು ಎಲ್ಲಾ ಭಾರತೀಯ ಭಾಷೆಗಳ ಸಂಪ್ರದಾಯವಾಗಿದೆ. ಇನ್ನು ಕೆಲವು ವೇಳೆ ಮೂಲಪದಗಳೇ ಜನಸಾಮಾನ್ಯರಲ್ಲಿ ಬಳಕೆಗೆ ಬಂದಿದ್ದು; ಹೆಚ್ಚು ಸುಲಭವಾಗಿರುವುದು. ಸಾಮಾನ್ಯವಾಗಿ ವೈಜ್ಞಾನಿಕ ಪರಿಕರಗಳ ಹೆಸರುಗಳನ್ನು ಮತ್ತು ಪರಿಕಲ್ಪನೆಗಳನ್ನು ದೇಶೀಯ ಭಾಷೆಗೆ ಭಾಷಾಂತರಿಸುವುದು ತುಂಬಾ ಕ್ಲಿಷ್ಟವಾದ ಕೆಲಸವಾಗಿದೆ. ಆಗ ಚಿರಪರಿಚಿತವಾದ ಕೆಲವು ವಸ್ತುಗಳನ್ನು ಬಿಟ್ಟರೆ, ಉಳಿದವುಗಳ ಹೆಸರುಗಳನ್ನು ಹಾಗೆಯೇ ಬರೆಯುವುದು ಅನಿವಾರ್ಯವಾಗುತ್ತದೆ. ಅದೇ ರೀತಿ ಕೆಲವು ವಿಶಿಷ್ಟ ಉಪಕರಣಗಳ ಹೆಸರುಗಳನ್ನು ಮತ್ತು ಪರಿಕಲ್ಪನೆಗಳನ್ನು ಭಾಷಾಂತರಿಸುವುದು ಕಷ್ಟಸಾಧ್ಯ. **ಉದಾಹರಣೆಗೆ** : e-mail, Fax, CD-ROM ಇತ್ಯಾದಿ. ಇಂತಹ ಸಂದಿಗ್ಧ ಸಂದರ್ಭಗಳಲ್ಲಿ ದೇಶೀಯ ಭಾಷೆಗೆ ಭಾಷಾಂತರಿಸಲು ಸಾಧ್ಯವಾದ ಪರಿಕಲ್ಪನೆಗಳನ್ನು ಲಿಪ್ಯಂತರ (Transliteration) ಮಾಡಿ ಬಳಸುವುದು ರೂಢಿಯಾಗಿದೆ. ಕಾಲ ಕ್ರಮೇಣ ಈ ಪಾರಿಭಾಷಿಕ ಪದಗಳು ಜನಸಾಮಾನ್ಯರಲ್ಲಿ ಜನಜನಿತವಾಗುತ್ತವೆ.

ಆಡಳಿತದ ಯಾವುದೇ ಒಂದು ವಿಭಾಗವು ತನ್ನದೇ ಆದಂತಹ ವಿಶೇಷವಾದ, ವಿಶಿಷ್ಟವಾದ ಪರಿಭಾಷೆಯನ್ನು ಬಳಕೆ ಮಾಡುತ್ತದೆ. ಅಂದರೆ ಎಲ್ಲಾ ವಲಯಗಳಲ್ಲೂ ಒಂದೇ ರೀತಿಯ ಪದಬಳಕೆ ಇರುವುದಿಲ್ಲ. **ಉದಾಹರಣೆಗೆ** : ಕಂದಾಯ ವಿಭಾಗದಲ್ಲಿ ಬಳಕೆಯಾಗುವ ಪದಗಳನ್ನು ತಾಂತ್ರಿಕ ವಿಭಾಗದಲ್ಲೊ ಇಲ್ಲವೇ ಶಿಕ್ಷಣ ವಿಭಾಗದಲ್ಲೊ ಬಳಸುವುದು ಸಾಧ್ಯವಿಲ್ಲ. ಕಾರಣ ಪ್ರತಿಯೊಂದು ಇಲಾಖೆಯ ಕೆಲಸ ಕಾರ್ಯಗಳು ವಿಭಿನ್ನವಾಗಿರುತ್ತವೆ. ಹಾಗಾಗಿ ಪ್ರತಿಯೊಂದು ವಲಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ಕಾಣಬಹುದು.

ಜನಸಾಮಾನ್ಯರು ಬಳಸುವ ಶಬ್ದಕೋಶದಲ್ಲಿ ಸಾಮಾನ್ಯ ಪದಗಳನ್ನು ಕಾಣಬಹುದು. ಅವು ಸಾಮಾನ್ಯ ಅರ್ಥಗಳಲ್ಲಿ ಬಳಕೆಯಾಗುವುದನ್ನು ಕಾಣಬಹುದು. ಜನಸಾಮಾನ್ಯರ ಭಾಷೆಯಲ್ಲಿ ಬಳಕೆಯಾಗದೆ ನಿರ್ಧಿಷ್ಟ ಕ್ಷೇತ್ರದಲ್ಲಿ ಬಳಕೆಯಾಗುವ ಪದಗಳನ್ನು ಅಸಮಾನ್ಯ ಪದಗಳೆಂದು ಕರೆಯಲಾಗುತ್ತದೆ. ಕಾರಣ ಆ ಪದಗಳಿಗೆ ತನ್ನದೇ ಆದ ಬಳಕೆಯ ವಲಯವಿರುತ್ತದೆ. ಅಂತಹ ಪದಗಳು ನಿರ್ಧಿಷ್ಟಪಡಿಸಿದ ಅರ್ಥದಲ್ಲಿ ಬಳಕೆಯಾಗುತ್ತಿರುತ್ತವೆ. ಅಷ್ಟೇ ಅಲ್ಲದೆ ಜನಸಾಮಾನ್ಯರಿಗೆ ಅರ್ಥವಾಗದೆ ಹೋಗಬಹುದು. **ಉದಾಹರಣೆಗೆ** 'ತಂತಿ' ಎಂಬ ಪದ ಜನಸಾಮಾನ್ಯರ ಅರ್ಥದಲ್ಲಿ ದಾರದಂತಿರುವ, ಕೈಯಿಂದ ತುಂಡರಿಸಲಾದ ಲೋಹದ ವಸ್ತು. ನಿರ್ಧಿಷ್ಟ ವಲಯದಲ್ಲಿ ಇದರ ಅರ್ಥವೇ ಬೇರೆಯಾಗಿದೆ. ಇದು ಆಂಗ್ಲ ಭಾಷೆಯ 'ಟೆಲಿಗ್ರಾಂ' ಎಂಬುದರ ಸಂವಾದಿ ಕನ್ನಡ ರೂಪವಾಗಿದೆ.

ಯಾವುದೇ ಒಂದು ಪದ ಅಥವಾ ಪಾರಿಭಾಷಿಕ ಪದಗಳನ್ನು ರಚಿಸುವಲ್ಲಿ ಆ ಭಾಷಾ ಸಮುದಾಯದ ಭಾಷಿಕರನ್ನು ಗಮನದಲ್ಲಿಟ್ಟುಕೊಂಡು ರಚಿಸಬೇಕು. ಅಂದರೆ ಯಾವುದೇ ಒಂದು ಭಾಷಾ ಸಮುದಾಯವು ಅಲಿಖಿತ ಒಪ್ಪಂದವನ್ನು ಮಾಡಿಕೊಂಡು ಸಂವಹನ ಪ್ರಕ್ರಿಯೆಗೆ ಸಹಾಯ ಮಾಡುತ್ತದೆ. ಯಾವುದೇ ಭಾಷೆಯಲ್ಲಿ ಪಾರಿಭಾಷಿಕ ಪದಗಳನ್ನು ರಚಿಸುವಾಗ ಭಾಷಾ ಸಮುದಾಯ, ವ್ಯಾಕರಣ ಪದ್ಧತಿ, ಭಾಷಾ ಜಾಯಮಾನವನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕು. ಪ್ರತಿಯೊಂದು ಭಾಷಾ ಸಮುದಾಯವು ತನ್ನ ಅನುಕೂಲಕ್ಕೆ ತಕ್ಕಂತೆ ಮತ್ತು ಸಹಜವಾದ ಸಂವಹನ ಕ್ರಿಯೆಯನ್ನು ನಡೆಸಿಕೊಂಡು ಹೋಗಲು ಅಲಿಖಿತ ಒಪ್ಪಂದವನ್ನು ಮಾಡಿಕೊಂಡಿರುತ್ತದೆ. ಈ ನಿಟ್ಟಿನಲ್ಲಿ ನೋಡುವುದಾದರೆ ಯಾವುದೇ ಪಾರಿಭಾಷಿಕ ಪದ ಬಳಕೆಗೆ ಬರಬೇಕಾದರೆ ಸಾಮಾಜಿಕ ಪಾತ್ರ ಬಹಳ ಮುಖ್ಯವಾಗಿರುತ್ತದೆ. **ಉದಾಹರಣೆಗೆ** : 'ಇಂಜಿನಿಯರ್' ಪದವು 'ಅಭಿಯಂತರ' ಎನ್ನುವುದಕ್ಕಿಂತ ಹೆಚ್ಚು ಬಳಕೆಯಲ್ಲಿ ಪ್ರಚಲಿತವಾಗಿದೆ. 'ಡಾಕ್ಟರ್' ಎನ್ನುವುದು 'ವೈದ್ಯ' ಎನ್ನುವುದಕ್ಕಿಂತ ಹೆಚ್ಚು ಬಳಕೆಯಲ್ಲಿ ಪ್ರಚಲಿತವಾಗಿದೆ. 'ಯುನಿವರ್ಸಿಟಿ' ವಿಶ್ವವಿದ್ಯಾಲಯಕ್ಕಿಂತ ಹೆಚ್ಚು ಪ್ರಚಲಿತವಾಗಿದೆ. ಇಲ್ಲಿ ಅಭಿಯಂತರ, ವೈದ್ಯ, ವಿಶ್ವವಿದ್ಯಾಲಯ ಎನ್ನುವ ಪದಗಳನ್ನು ಬಳಸಿದರೂ ಅವುಗಳು ನಿರರ್ಗಳವಾಗಿ ಜನಸಾಮಾನ್ಯರಿಂದ ಒಪ್ಪಿಗೆಯನ್ನು ಪಡೆದಿಲ್ಲ. ರಚನೆಯ ನೆಲೆಯಲ್ಲಿ ಅಲೋಚನೆ ಮಾಡಿದಾಗ ಭಾಷೆ ಯಾವುದಾದರೇನು ಜನಸಾಮಾನ್ಯರ ಗ್ರಹಿಕೆಗೆ ಸರಳವಾಗುತ್ತದೆ. ಹಾಗೆಯೇ 'ಸಿನಿಮಾ' ಎನ್ನುವುದು ಜನಸಾಮಾನ್ಯರಲ್ಲಿ ಜನಜನಿತವಾಗಿದೆ. ಆದರೆ 'ಚಲನಚಿತ್ರ' ಎನ್ನುವುದು ಅನ್ಯ ದೇಶೀಯ ಭಾಷಾ ಘಟಕವಾಗಿದೆ. ಅದೇ ರೀತಿ ಮೊಬೈಲ್ (ಜಂಗಮವಾಣಿ), ಕಂಪ್ಯೂಟರ್ (ಗಣಕಯಂತ್ರ), ಪೆನ್ (ಲೇಖನಿ), ಟೆಲಿವಿಜನ್ (ದೂರದರ್ಶನ), ರೇಡಿಯೋ (ಆಕಾಶವಾಣಿ), ಫೋನ್ (ದೂರವಾಣಿ) ಇತ್ಯಾದಿ ಅನೇಕ ಅನ್ಯದೇಶೀಯ ಪದಗಳು ಒಂದೊಂದು ಭಾಷಾ ಸಮುದಾಯದಲ್ಲಿ ಅದರದೇ ಭಾಷಾ ಪದಗಳಾಗಿ ತೋರುತ್ತವೆ. ಇಲ್ಲಿ ದೇಶೀಯತೆಯ ಬಗ್ಗೆ ಹೋರಾಟ ಮಾಡುವವರು ಅಲ್ಪಸಂಖ್ಯಾತರಾಗಿ ಆ ಒಂದು ಭಾಷೆಯ ಭಾಷಿಕರು ಬಹುಸಂಖ್ಯಾತರಾದಾಗ ಜನಸಾಮಾನ್ಯರದೇ ಮೇಲುಗೈಯಾಗುತ್ತದೆ. ಆದ್ದರಿಂದ ಜನಸಾಮಾನ್ಯರಿಗೆ ಅನುಕೂಲವಾದಂತೆ, ಹೆಚ್ಚು ಪರಿಚಯಾತ್ಮಕವಾದಂತೆ, ಸರಳವಾಗಿ ಉಚ್ಚಾರಣೆ ಮಾಡಲು ಬರುವಂತಹ 'ಪಾರಿಭಾಷಿಕ' ಪದಗಳು ಆ ಭಾಷಾ ಸಮುದಾಯದಿಂದ ಸಮ್ಮತಿಯನ್ನು ಪಡೆದುಕೊಂಡು ಆಯಾ ವಲಯಗಳ ಪದಗಳನ್ನು ಆಯಾ ವಲಯಗಳ ಪಾರಿಭಾಷಿಕ ಪದಗಳನ್ನಾಗಿ ಸ್ವೀಕರಿಸಬೇಕು.

ಹೀಗೆ ನಿರ್ಧಿಷ್ಟ ವಲಯದಲ್ಲಿ ನಿರ್ಧಿಷ್ಟ ಅರ್ಥದಲ್ಲಿ ಬಳಕೆಯಾಗುವ ಈ ಅಸಮಾನ್ಯ ಪದಗಳು ಜನರ ಬಳಕೆಯಿಂದಾಗಿ ಕೆಲವು ಸಂದರ್ಭಗಳಲ್ಲಿ ಸಾಮಾನ್ಯ ಪದಗಳಾಗಬಹುದು. **ಉದಾಹರಣೆಗೆ** : ಕಂದಾಯ ಇಲಾಖೆಯಲ್ಲಿ ಬಳಕೆಯಾಗುವ ಜಮೀನು, ತರಿ, ಖುಷ್ಕಿ, ತೆರಿಗೆ, ಪಾಣಿ, ಸಬ್ಸಿಡಿ, ಎಕರೆ, ಮನ್ನ ಮುಂತಾದವುಗಳು ಒಂದು ಕಾಲದಲ್ಲಿ ಅಸಮಾನ್ಯ ಪದಗಳಾಗಿದ್ದು; ಆನಂತರ ಸಾರ್ವಜನಿಕರಲ್ಲಿ ಬಳಕೆಗೆ ಬಂದು ಇಂದು ಸಾಮಾನ್ಯ ಪದಗಳಾಗಿ ಬಳಕೆಯಲ್ಲಿವೆ. ಅಷ್ಟೇ ಅಲ್ಲದೆ ಇವು ಪಾರಿಭಾಷೆಗಳಾಗಿ ಬಳಕೆಯಲ್ಲಿವೆ.

ಆಡಳಿತದ ಭಾಗವಾದ ಯಾವುದಾದರೊಂದು ಕಛೇರಿಯ ಕಾರ್ಯಚಟುವಟಿಕೆಗಳನ್ನು ಅವಲೋಕಿಸಿದಾಗ ನಾವು ದಿನಂಪ್ರತಿ ಮಾತನಾಡುವಾಗ ಬಳಸುವ ಭಾಷೆಯನ್ನೇ ಅಲ್ಲಿಯ ಜನರು ಬಳಸಿದರೂ ಅನೇಕ ಪದಗಳು ನಮಗೆ ಅರ್ಥವಾಗುವುದಿಲ್ಲ. ಅಲ್ಲಿ ಬಳಕೆಯಾಗುವ ಭಾಷೆಯಲ್ಲಿ ನಿರ್ಧಿಷ್ಟವಾದ ವಲಯದ ಬಳಕೆಗೆಂದೇ ನಿರ್ಮಿಸಿಕೊಂಡ ಅನೇಕ ಪದಗಳಿರುತ್ತವೆ. **ಉದಾಹರಣೆಗೆ** ಸುತ್ತೋಲೆ, ಕರಡುಪ್ರತಿ, ಜ್ಞಾಪನ ಪತ್ರ, ಅಧಿಸೂಚನೆ, ಮಂಜೂರು, ಫೈಲು, ಬಡ್ತಿ, ಭತ್ಯೆ, ವರದಿ, ಹುದ್ದೆ, ನೇಮಕಾತಿ, ಮುಂಗಡ, ಪಾವತಿ ಹೀಗೆ ಹಲವಾರು ಪದಗಳ ಬಳಕೆ ನಡೆಯುತ್ತಿರುತ್ತದೆ. ಅಂತೆಯೇ ಹುದ್ದೆಗಳ ಹೆಸರುಗಳನ್ನು ಗಮನಿಸಿದಾಗಲೂ ನಿರ್ದೇಶಕರು, ನಿಲಯ ಪಾಲಕರು, ನಿರೀಕ್ಷಕರು, ನಿಬಂಧಕರು, ಆಯುಕ್ತರು, ದಂಡಾಧಿಕಾರಿಗಳು, ಪರಿವೀಕ್ಷಕರು, ಜಾಗೃತದಳ ಇತ್ಯಾದಿಗಳು ನಾವು ಸಾಮಾನ್ಯವಾಗಿ ಬಳಸುವ ಮಾತುಗಳಿಗೆ ಹೊರತಾಗಿರುತ್ತವೆ. ಪದಕೋಶ ನಮ್ಮ ಕಿವಿಗೆ ಬಿದ್ದ ತಕ್ಷಣ ಇದು ಇಂತಹ ವಲಯದ ಪರಿಭಾಷೆ ಎಂಬ ನಿರ್ಧಾರಕ್ಕೆ ಬರಬಹುದಾಗಿದೆ. ಇದು ಯಾವುದರಿಂದ ಸಾಧ್ಯವೆಂದರೆ ಭಾಷಾಬಳಕೆಯಿಂದ ಸಾಧ್ಯ. ಅಂದರೆ ಕನ್ನಡ ಭಾಷೆ ಬೇರೆ ಬೇರೆ ಉದ್ದೇಶಕ್ಕೆ ಬಳಕೆಯಾಗುವ ಹಾಗೆ ಹೋರಾಟ, ಚಳುವಳಿ, ಕಾನೂನು, ರಾಜಕೀಯ, ಶಿಕ್ಷಣ ಹೀಗೆ ಅನೇಕ ವಲಯಗಳಿಗೆ ಒಗ್ಗಿಕೊಳ್ಳುವ ಸ್ವರೂಪವನ್ನು ಕುರಿತು ಅಧ್ಯಯನ ಮಾಡುವ ಜರೂರು ಇದೆ.

ಪರಿಭಾಷೆಯ ಕುರಿತು ವ್ಯಾಖ್ಯಾನಗಳು :

ಪರಿಭಾಷೆ ಎಂದರೆ ನಿಘಂಟುಗಳಲ್ಲಿ ಪರಿಭಾಷೆಗೆ ಸಮನಾರ್ಥಕವಾಗಿ ಪಾರಿಭಾಷಿಕ ನುಡಿಗಟ್ಟು ಎಂಬ ಅರ್ಥ ಇದೆ. ಯಾವುದಾದರೊಂದು ವಲಯಕ್ಕೆ ಸಂಬಂಧಪಟ್ಟ ಹಾಗೆ ವಿಶಿಷ್ಟವಾಗಿ ಬಳಕೆಯಾಗುವ ಭಾಷಾ ಚಟುವಟಿಕೆಯೊಳಗಿನ ಪದಗಳು ಎಂದು ಹೇಳಬಹುದು.

ಕನ್ನಡ ಮತ್ತು ಕನ್ನಡ ನಿಘಂಟುವಿನಲ್ಲಿ ಪುಟ ಸಂಖ್ಯೆ ೫೩೪೮ ರಲ್ಲಿ ದಾಖಲೆಯಾಗಿರುವಂತೆ ಪರಿಭಾಷೆ ಎಂದರೆ (ನಾ) ೧. ಲಕ್ಷಣ, ನಿರೂಪಣೆ, ವ್ಯಾಖ್ಯ : ವಿವರಣೆ. ೨. (ಕಲೆ, ಶಾಸ್ತ್ರ, ವಿಜ್ಞಾನ, ಮುಂತಾದ) ತಾಂತ್ರಿಕ ವಿಷಯಗಳಿಗೆ ವಿಶಿಷ್ಟವಾದ ಪದವಿನ್ಯಾಸ ಪಾರಿಭಾಷಿಕ ನುಡಿಗಟ್ಟು ಎಂದು ದಾಖಲಿಸಲಾಗಿದೆ.

ಪರಿಭಾಷೆ ಎಂದರೆ ಯಾವುದೇ ಜ್ಞಾನ ಕ್ಷೇತ್ರದಲ್ಲೂ ಕೆಲವು ವಿಶೇಷವು ವಿಶಿಷ್ಟವೂ ಆಗಿರುವಂಥ ಪದಗಳು ಬಳಕೆಯಾಗುತ್ತಿರುತ್ತವೆ. ಆ ಪದಗಳು ಸಾಮಾನ್ಯವಾದ ಅರ್ಥಕ್ಕಿಂತ ವಿಶೇಷವಾದ ಅರ್ಥ ವಿಸ್ತಾರತೆಯನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುತ್ತವೆ. ಪ್ರತಿಯೊಬ್ಬ ಚಿಂತಕನಲ್ಲೂ ಈ ಬಗೆಯ ಪರಿಭಾಷೆಗಳು ಕಾಲಕಾಲದ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷವನ್ನು, ಒತ್ತಡವನ್ನು ಹೊತ್ತುಕೊಂಡು ರೂಪಗೊಳ್ಳುತ್ತಿರುತ್ತವೆ. ಹಳೆಯ ಪರಿಭಾಷೆಗಳು ಹಿಂದಕ್ಕೆ ಬಿದ್ದು ಹೊಸ ಪರಿಭಾಷೆಗಳು ರೂಪಗೊಂಡಿರುವುದೂ ಉಂಟು. ಅಥವಾ ಕೆಲವು ಹಳೆಯ ಪರಿಭಾಷೆಗಳು ಹೊಸ ಅರ್ಥದ ಮೈಯನ್ನು ಪಡೆದಿರುವುದು ಉಂಟು. ಹೀಗಾಗಿ ಪಾರಿಭಾಷಿಕ ಪದಗಳ ಚರಿತ್ರೆ ಕುರಿತಾದ ಅಧ್ಯಯನ ತುಂಬಾ ಕುತೂಹಲವನ್ನುಂಟು ಮಾಡುತ್ತದೆ. ಹಾಗೆಯೇ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಅವುಗಳದ್ದೇ ಆದ ಪರಿಭಾಷೆ ಇರುವಂತೆ ಪ್ರತಿಯೊಂದು ಹೋರಾಟದ ವಲಯಕ್ಕೂ ಅವುಗಳದ್ದೇ ಆದ ಪರಿಭಾಷೆ

ಇರುತ್ತದೆ. ಇಂತಹ ಪರಿಭಾಷೆಗಳು ಬದ್ಧರೂಪಗಳಾಗಿರುತ್ತವೆ. (bound morpleme) ಕೆಲವರು ಪರಿಭಾಷೆಗಳನ್ನು 'register' ಎಂದು ಕರೆಯುತ್ತಾರೆ. ಈ ಹಿನ್ನೆಲೆಯಿಂದ ಪರಿಭಾಷೆಗೆ ಅದರದ್ದೇ ಆದ ಸ್ವರೂಪ ಕೂಡ ಇರುತ್ತದೆ.

ಪರಿಭಾಷೆಯಲ್ಲಿನ ಪದಗಳ ಸ್ವರೂಪ :

೧) ಪಾರಿಭಾಷಿಕ ಪದಗಳು ಮೂಲತಃ ಸಾಮಾನ್ಯವಾಗಿ ಇಂಗ್ಲೀಷ್‌ನಲ್ಲಿರುತ್ತವೆ. ಅಥವಾ ಇಂಗ್ಲೀಷಿನಿಂದ ಅನುವಾದಗೊಂಡಿರುತ್ತವೆ. ಇದಕ್ಕೆ ಕಾರಣ ಬ್ರಿಟೀಷರು ಭಾರತದಲ್ಲಿ ಆಳ್ವಿಕೆಯ ಸಂದರ್ಭದಲ್ಲಿ ಹೇರಲ್ಪಟ್ಟ ಇಂಗ್ಲೀಷ್ ಭಾಷೆಯ ಪಾತ್ರ ಪ್ರಮುಖವಾದುದು. ಅಲ್ಲದೆ ಕೆಲವೊಂದು ಪರಿಕಲ್ಪನೆಗಳನ್ನು ಸೃಷ್ಟಿಸುವಾಗ ಅದನ್ನು ಇಂಗ್ಲೀಷ್ ಭಾಷೆಯಲ್ಲಿ ತರಲಾಗುತ್ತದೆ. **ಉದಾರಹಣೆಗೆ** : ಕಂಪ್ಯೂಟರ್, ಟೆಲಿಪ್ರಿಂಟರ್, ಫ್ಯಾಕ್ಸ್, ಮೊಬೈಲ್, ಇಂಟರ್‌ನೆಟ್ ಇತ್ಯಾದಿ. ಇಂಗ್ಲೀಷ್ ಭಾಷೆಯಲ್ಲದೆ, ಫಾರಸಿ, ಉರ್ದು, ಮರಾಠಿ ಮೂಲದಿಂದಲೂ ಪರಿಭಾಷೆಗಳು ವಿವಿಧ ವಲಯಗಳಲ್ಲಿ ಬಳಕೆಯಲ್ಲಿವೆ.

೨) ಪಾರಿಭಾಷಿಕ ಪದಗಳು ಸಾಮಾನ್ಯ ಪದಗಳಂತೆ ಗೋಚರಿಸುವುದಿಲ್ಲ. ಅಲ್ಲದೆ ಆಯಾ ವಲಯಗಳಲ್ಲಿ ಮಾತ್ರ ಬಳಕೆಯಲ್ಲಿರುತ್ತವೆ. ಹೊರತು ಬೇರೆ ಎಲ್ಲೆಡೆಯು ಬಳಕೆಯಾಗುವುದಿಲ್ಲ. ಆಯಾ ವಲಯದಲ್ಲಿ ವಿಶೇಷವಾಗಿ, ವಿಶಿಷ್ಟವಾಗಿ ಬಳಕೆಯಾಗುವ ಪದಗಳನ್ನು ಆ ವಲಯದ ಪರಿಭಾಷೆಗಳೆಂದು ಗುರುತಿಸುತ್ತೇವೆ. **ಉದಾಹರಣೆಗೆ** : ೧) ಸ್ತ್ರೀತ್ವ, ಹೆಣ್ಣುತನ, ಮಹಿಳಾ ಆಂದೋಲನ, ಸ್ತ್ರೀವಾದ, ಅತ್ಯಾಚಾರ, ದೇವದಾಸಿ ಪದ್ಧತಿ, ಸ್ತ್ರೀಯಾತ್ಮಕತೆ, ಮಹಿಳಾ ಅಧ್ಯಯನ, ೨) ಬಂಡ್ವಾಳಶಾಹಿ, ಬ್ರಾಹ್ಮಣಶಾಹಿ, ವೈದಿಕಶಾಹಿ, ಸಾಮ್ರಾಜ್ಯಶಾಹಿ, ಪುರೋಹಿತಶಾಹಿ, ಪಟ್ಟಭದ್ರಹಿತಾಸಕ್ತಿ, ದಲಿತತ್ವ, ಅಸ್ಪ್ರಶ್ಯತೆ, ಜಾತಿನಿಂದನೆ, ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಇತ್ಯಾದಿ.

೩) ಪರಿಭಾಷೆಯಲ್ಲಿನ ಪದಗಳ ಅರ್ಥ ಮತ್ತು ಬಳಕೆ ಆಯಾ ವಲಯ ಇಲ್ಲವೇ ಕ್ಷೇತ್ರಗಳಲ್ಲಿರುವವರಿಗೆ ಹೆಚ್ಚು ತಿಳಿದಿರುತ್ತದೆ. ಕಾನೂನು ವಲಯ, ರಾಜಕೀಯ ವಲಯ, ಶೈಕ್ಷಣಿಕ ವಲಯ ಇತ್ಯಾದಿ.

೪) ಕೆಲವು ಪಾರಿಭಾಷಿಕ ಪದಗಳು ಸನ್ನಿವೇಶ, ಸಂದರ್ಭಗಳಿಗನುಗುಣವಾಗಿ ಹುಟ್ಟಿಕೊಳ್ಳುತ್ತವೆ. **ಉದಾಹರಣೆಗೆ** : ಸಮಿತಿಗಳು ನೀಡುವ ವರದಿಗಳನ್ನು ಉಲ್ಲೇಖಿಸುವಾಗ (ಗೋಕಾಕ್ ವರದಿ, ಮಹಿಷಿ ವರದಿ, ಮಹಾಜನ್ ವರದಿ, ಕೊಠಾರಿ ಸೂತ್ರ, ತ್ರಿಭಾಷೆ ಸೂತ್ರ, ವೈದ್ಯನಾಥನ್ ಸಮಿತಿ ವರದಿ ಇತ್ಯಾದಿ) ಇಂತಹ ಪದಗಳು ಸೃಷ್ಟಿಯಾಗುತ್ತವೆ.

೫) ಪಾರಿಭಾಷಿಕ ಪದಗಳು ಒಂದೇ ಅರ್ಥವನ್ನು ಸೂಚಿಸುತ್ತವೆ. ನಾವು ಮಾತನಾಡುವಾಗ ಸಾಮಾನ್ಯ ಬಳಕೆಯಲ್ಲಿ ಒಂದೇ ಅರ್ಥ ಛಾಯೆಯುಳ್ಳವು. **ಉದಾಹರಣೆಗೆ** : ಆರೋಪಿ, ಅಪರಾಧಿ ಪದಗಳನ್ನು ಅದಲು ಬದಲಾಗಿ ಬಳಸಬಹುದು. ಆದರೆ ಪೋಲೀಸು, ನ್ಯಾಯಾಂಗ ಇಲಾಖೆಯಲ್ಲಿ ಇವೆರಡೂ ಭಿನ್ನಾರ್ಥಕಗಳಲ್ಲಿ ಬಳಕೆಯಲ್ಲಿವೆ.

೬) ಅಧಿಕಾರವನ್ನು ಸೂಚಿಸುವ ಪದಗಳು ಪಾರಿಭಾಷಿಕ ಪದಗಳೆ ಆಗಿರುತ್ತವೆ. **ಉದಾಹರಣೆಗೆ** : ಆಯುಕ್ತರು, ಅಧೀಕ್ಷಕರು, ಪರಿವೀಕ್ಷಕರು, ದಂಡಾಧಿಕಾರಿಗಳು, ವಿಭಾಗಾಧಿಕಾರಿಗಳು, ನಿರ್ದೇಶಕರು, ಯೋಜನಾಧಿಕಾರಿಗಳು, ಸಂಯೋಜನಾಧಿಕಾರಿಗಳು ಇತ್ಯಾದಿಗಳು. ಆಡಳಿತ ವ್ಯಾಪ್ತಿಯೊಳಗೆ ರೂಪಿಸಿದಂತಹ ಪದಗಳು ಇವುಗಳಿಗೆ ಸಾಮಾನ್ಯ ಅರ್ಥಗಳ ಮೂಲಕ ವಿವರಣೆ ಕೊಡುವುದು ಸಾಧ್ಯವಾಗುವುದಿಲ್ಲ.

೭) ಜನಾಂಗೀಯ ಅಧ್ಯಯನದ ಸಂದರ್ಭಗಳ ಹಿನ್ನೆಲೆಯಲ್ಲಿ ಕೆಲವು ಪರಿಭಾಷೆಗಳನ್ನು ಬಳಸಲಾಗುತ್ತದೆ. **ಉದಾಹರಣೆಗೆ** : ಉಪಸಂಸ್ಕೃತಿ, ಪ್ರತಿ ಸಂಸ್ಕೃತಿ ಇತ್ಯಾದಿ.

೮) ರಾಜಕೀಯ ವಲಯದಲ್ಲಿ ಜನತೆಯ ಗಮನ ಸೆಳೆಯಲು ಕೆಲವು ಪರಿಭಾಷೆಗಳನ್ನು ಬಳಸಲಾಗುತ್ತದೆ. ಇದನ್ನೇ ರಾಜಕೀಯ ಪ್ರೇರಿತ ಪರಿಭಾಷೆ ಎಂದು ಗುರುತಿಸಲಾಗಿದೆ. **ಉದಾಹರಣೆಗೆ** : ನಾಯಕ, ನಿರ್ಮಾಪಕ, ಸುಧಾರಕ, ನೇತಾರ, ಪ್ರವರ್ತಕ, ಚಿಂತಕ, ಬಂಧು, ಕಣ್ಮಣಿ, ಧೃವತಾರೆ ಇತ್ಯಾದಿ.

೯) ಧಾರ್ಮಿಕ ವಲಯದಲ್ಲಿ ದೈವತ್ವದ ಹಿನ್ನೆಲೆಯಲ್ಲಿ ಕೆಲವೊಂದು ಪರಿಭಾಷೆಗಳನ್ನು ಬಳಸಲಾಗುತ್ತದೆ. **ಉದಾಹರಣೆಗೆ** : ಮಡಿ, ಮೈಲಿಗೆ, ಹೋಮ, ಅಗ್ನಿ, ತೀರ್ಥ ಪ್ರಸಾದ ಇತ್ಯಾದಿ.

೧೦) ಕಾಂಗ್ರೆಸ್ ಪಕ್ಷದ ಮುಖಂಡರಾದ ಸಿದ್ರಾಮಯ್ಯನವರು **'ಅಹಿಂದ'** ಎನ್ನುವ ಹೊಸ ಪಾರಿಭಾಷಿಕ ಪದವನ್ನು 'ಅಹಿಂದು ಸಮಾವೇಶ'ದಲ್ಲಿ ಈ ಹಿಂದೆ ಬಳಸಿರುವುದನ್ನು ನೋಡಬಹುದು. ಈ ಪದದ ಅರ್ಥ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತ ಎಂದು ಸಾಮಾಜಿಕವಾಗಿ ತುಳಿತಕ್ಕೊಳಗಾದ ಸಮುದಾಯಗಳ ಪರ ಹೋರಾಟ ಎಂಬರ್ಥದಲ್ಲಿ ಹುಟ್ಟಿಕೊಂಡರೂ, ಅದು ರಾಜಕೀಯ ಪ್ರೇರಿತ ಪರಿಭಾಷೆಯಾಗಿ ಬಳಕೆಯಾಗಿದೆ. ಅಂದರೆ ಇಂತಹ ಪದಗಳು ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಹುಟ್ಟಿದರೂ, ಅದು ಹೇಗೆ ಜನಸಾಮಾನ್ಯರ ನಡುವೆ ಬಳಕೆಯಲ್ಲಿದೆ ಎಂಬುದು ಗಮನಿಸುವಂತಹ ಅಂಶ. ಅಹಿಂದ ಪದ ಸಮಾಜದಲ್ಲಿ ಉಂಟು ಮಾಡುವ ಪರಿಣಾಮವನ್ನು ಹಿಂದೆ ಬೇರೆ ಪದಗಳು ನಿರ್ವಹಿಸಿರಬಹುದು. ಆದರೆ 'ಅಹಿಂದ' ಪದದಷ್ಟು ಪರಿಣಾಮ ಉಂಟು ಮಾಡಿಲ್ಲ ಎಂದೆನಿಸುತ್ತದೆ. ಇದರಿಂದ ತಿಳಿದು ಬರುವ ಸಂಗತಿಯೆಂದರೆ ಪರಿಭಾಷೆಗಳು ಸುಮ್ಮನೆ ಚಾಲನೆಗೆ ಬರದೆ ಅವುಗಳ ಹಿಂದೆ ಒಂದು ಉದ್ದೇಶವಿರುತ್ತದೆ. ಅವುಗಳು ಸೃಷ್ಟಿಸುವ ಸಂದರ್ಭವನ್ನು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ. ಈ ಸ್ವರೂಪದ ಚರ್ಚೆಯೇ ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಪರಿಭಾಷೆಯ ಪದಗಳ ಗುಣಲಕ್ಷಣಗಳು :

ಸಾಮಾನ್ಯ ಪದಕೋಶದ ಅಥವಾ ಬೇರೆ ಬೇರೆ ಆಕರಗಳಿಂದ ಪರಿಭಾಷೆಯ ಪದಗಳನ್ನು ಪಡೆದು ಅದೇ ಪದಗಳನ್ನು ಬಳಸಿಕೊಳ್ಳುವುದು ಒಂದು ರೀತಿಯಾದರೆ, ಹೊಸದಾಗಿ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವುದು ಅಥವಾ ರೂಪಿಸುವುದು ಇನ್ನೊಂದು ರೀತಿಯಾಗಿದೆ. ಒಂದೇ ಪದಕ್ಕೆ ಹಲವರು ಹಲವು ಪದಗಳನ್ನು ಸೃಷ್ಟಿಸುವುದೂ ಉಂಟು **ಉದಾಹರಣೆಗೆ** : 'ಎನ್ವಿರಾನ್‌ಮೆಂಟ್ ಫ್ರೆಂಡ್ಲಿ' ಎಂಬ ಇಂಗ್ಲೀಷ್ ಪದಕ್ಕೆ ಪರ್ಯಾವರಣ ಪ್ರಿಯ, ಪರಿಸರ ಸ್ನೇಹಿ, ಪರಿಸರ ಪ್ರೇಮಿ ಇತ್ಯಾದಿ

ಪದಗಳನ್ನು ಸೃಷ್ಟಿಸುವುದು ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಒಂದು ಸಾಮಾನ್ಯ ಸೂತ್ರಕ್ಕೆ ಬದ್ಧರಾಗುವುದು ಅವಶ್ಯವಾಗುತ್ತದೆ. ಆದ್ದರಿಂದ ಉತ್ತಮ ಪಾರಿಭಾಷಿಕ ಪದರಚನೆ ಮಾಡುವಾಗ ಕೆಲವೊಂದು ಅಂಶಗಳನ್ನು ಗಮನಿಸುವುದು ಅವಶ್ಯವಾಗಿದೆ. ಅವು ಇಂತಿವೆ.

೧) ನಿಖರತೆ ೨) ಪಾರದರ್ಶಕತೆ ೩) ಉತ್ಪಾದಕತೆ
೪) ಧ್ವನಿ ವ್ಯವಸ್ಥೆ ೫) ನಿರಂತರತೆ(ಖಾಯಂ ಬಳಕೆ) ೬) ವ್ಯಾಪಕತೆ ಮತ್ತು ಪ್ರಮಾಣೀಕರಣ

೧) **ನಿಖರತೆ** : ಪಾರಿಭಾಷಿಕ ಪದಗಳಲ್ಲಿ (ನಿಖರತೆ ಇರಬೇಕು) ನಿಖರವಾದ ಅರ್ಥವಿರಬೇಕು. ಒಂದು ಪದಕ್ಕೆ ಹಲವಾರು ಅರ್ಥಗಳಿದ್ದರೂ ನಿರ್ಧಿಷ್ಟ ಕ್ಷೇತ್ರದಲ್ಲಿ ಬಳಸುವಾಗ ಅದಕ್ಕೆ ಒಂದೇ ಒಂದು ಅರ್ಥವಿರುವಂತೆ ಬಳಸಬೇಕು. ಅಂದರೆ ಅರ್ಥ ಸ್ಪಷ್ಟತೆ ಇರಬೇಕು. ಯಾವುದೇ ದ್ವಂದ್ವಕ್ಕೆ ಅಥವಾ ಇನ್ನಾವುದೇ ಅರ್ಥಕ್ಕೆ ಎಡೆ ಮಾಡಿಕೊಡಬಾರದು. ಪಾರಿಭಾಷಿಕ ಪದಗಳಲ್ಲಿ ನಿಖರತೆ ಮುಖ್ಯವಾಗಿರುತ್ತದೆ. ಇಲ್ಲವಾದರೆ ಪಾರಿಭಾಷಿಕ ಪದವೆಂದು ಕರೆಸಿಕೊಳ್ಳದೆ ಸಾಮಾನ್ಯ ಪದವಾಗಿ ರೂಪ ತಾಳುತ್ತದೆ.

೨) **ಪಾರದರ್ಶಕತೆ** : ಪಾರದರ್ಶಕತೆ ಪಾರಿಭಾಷಿಕ ಪದಕ್ಕೆ ಇರಬೇಕಾದ ಮತ್ತೊಂದು ಗುಣ. ಒಂದು ಪದ ಪ್ರಯೋಗವಾದಾಗ ಅದು ಏನು ಹೇಳುತ್ತದೋ ಎಂಬುದು ಕೂಡಲೇ ಅರ್ಥವಾಗುವಂತಿರಬೇಕು. ಅಂದರೆ ಆ ಪದವನ್ನು ಕೇಳಿದೊಡನೆಯೇ ಅದು ಹೊರಹೊಮ್ಮಿಸುವ ಅರ್ಥ ಸ್ಪಷ್ಟವಾಗುವಂತಿರಬೇಕು. ಪದಕೋಶ ನಮ್ಮ ಕಿವಿಗೆ ಬಿದ್ದ ತಕ್ಷಣ ಇದು ಇಂಥ ವಲಯದ ಪರಿಭಾಷೆಯೆಂಬ ನಿರ್ಧಾರಕ್ಕೆ ಬರಬಹುದಾಗಿದೆ. ಇದು ಭಾಷಾ ಬಳಕೆಯಿಂದ ಮಾತ್ರ ಸಾಧ್ಯ. **ಉದಾರಹಣೆಗೆ** : ಲೆಕ್ಕ ಪರಿಶೋಧಕ, ಸಾಂದರ್ಭಿಕ ರಜೆ, ಗಳಿಕೆ ರಜೆ, ಸಾರ್ವತ್ರಿಕ ರಜಾದಿನ, ರಜಾ ಸಂಬಳ ಇತ್ಯಾದಿ.

೩) **ಉತ್ಪಾದಕತೆ** : ಪಾರಿಭಾಷಿಕ ಪದಗಳ ಇನ್ನೊಂದು ಬಹುಮುಖ್ಯ ಗುಣವೆಂದರೆ ಉತ್ಪಾದಕತೆ. ಒಂದು ಮೂಲಪದದಿಂದ ಸಂಬಂಧಿಸಿದ ಅನೇಕ ಪದಗಳು ರೂಪಗೊಳ್ಳಲು ಸಾಧ್ಯವಾಗುವಂತೆ ಮಾಡುವ ಗುಣ ಪಾರಿಭಾಷಿಕ ಪದಗಳಲ್ಲಿ ಇರಬೇಕು. **ಉದಾಹರಣೆಗೆ** : ೧. 'ಮತ' –ಮತದಾನ, ಮತಗಟ್ಟೆ, ಮತಕ್ಷೇತ್ರ, ಮತಬ್ಯಾಂಕ್, ಮತಕೇಂದ್ರ, ಮತಶಿಬಿರ, ಮತಚೀಟಿ, ಮತಎಣಿಕೆ, ಮತದಾರ, ಮತಾಧಿಕಾರಿ, ಮತಪತ್ರ, ಮತಪೆಟ್ಟಿಗೆ, ಮತಪ್ರಚಾರ ಮುಂತಾದವುಗಳು ಬೇರೆ ಬೇರೆ ಕಾರ್ಯನಿರ್ವಹಿಸುವುದರ ಹಿನ್ನೆಲೆಯಲ್ಲಿ ಚುನಾವಣಾ ಪರಿಭಾಷೆಗಳಾಗಿ ಬಳಕೆಯಲ್ಲಿವೆ. ಇದು ಹೇಗೆ ಸಾಧ್ಯವೆಂದರೆ ಭಾಷೆಗೆ ಒಂದು ಉತ್ಪಾದಕ ಗುಣವಿದೆ. ಅದು ಒಂದು ಮೂಲ ಪದದಿಂದ ಬೇರೆ ಬೇರೆ ಪದಗಳನ್ನು ಸೃಷ್ಟಿಸುವ ಕ್ರಿಯೆ ಇರುತ್ತದೆ. ಅಂತಹ ಸೃಷ್ಟಿಸುವ ಕ್ರಿಯೆಯನ್ನು 'ಮತ' ಪದ ಪಡೆದುಕೊಂಡಿದೆ. **ಉದಾಹರಣೆಗೆ** : ೨) 'ದಲಿತ' ದಲಿತ ಸಾಹಿತ್ಯ, ದಲಿತನ ಕೊಲೆ, ದಲಿತನ (ರ) ಮೇಲೆ ಹಿಂಸೆ, ದಲಿತರ ಮೇಲೆ ದೌರ್ಜನ್ಯ, ದಲಿತರ ಮೇಲೆ ದಬ್ಬಾಳಿಕೆ, ದಲಿತರ ಪ್ರತಿಭಟನೆ, ದಲಿತ ಚಳುವಳಿ, ದಲಿತ ವರ್ಗ, ದಲಿತ ಮಹಿಳೆಯ ಮೇಲೆ ಅತ್ಯಾಚಾರ, ದಲಿತರ ಹೋರಾಟ

ಇತ್ಯಾದಿ ಪಾರಿಭಾಷಿಕ ಪದಗಳು ದಲಿತ ಹೋರಾಟದಲ್ಲಿ ಬಳಕೆಯಾಗುತ್ತಿವೆ. ಇದರಿಂದ ಭಾಷೆಗೆ ಉತ್ಪಾದಕತೆಯ ಗುಣವಿದೆ ಎಂದು ಹೇಳುತ್ತೇವೆ. ಆದರೆ ಎಲ್ಲಾ ಸಂದರ್ಭಗಳಲ್ಲೂ ಇದು ಸಾಧ್ಯವಾಗುವುದಿಲ್ಲ.

೪) **ಧ್ವನಿ ವ್ಯತ್ಯಾಸ** : ನಾವು ಯಾವುದೇ ಭಾಷೆಯ ಪದಗಳನ್ನು ನೇರವಾಗಿ ಸ್ವೀಕರಿಸಿಕೊಂಡಾಗ ಆ ಭಾಷೆಯ ಜಾಯಮಾನಕ್ಕೆ ಹೊಂದುವ ಹಾಗೆ ಬದಲಾವಣೆ ಮಾಡಿಕೊಳ್ಳಬೇಕು. ಒಂದು ಭಾಷೆಯಲ್ಲಿರುವ ಎಲ್ಲಾ 'ಧ್ವನಿಮಾ' ಗಳನ್ನು ಇನ್ನೊಂದು ಭಾಷೆಯಲ್ಲಿ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಆ ಭಾಷೆಯ 'ಧ್ವನಿ' ಮತ್ತು 'ಧ್ವನಿಮಾ' ವ್ಯವಸ್ಥೆಗೆ ಅನುಸಾರವಾಗಿ ಸ್ವೀಕರಿಸಬೇಕು.

ಉದಾಹರಣೆಗೆ :

ಕಾಫಿ ಮತ್ತು ವ್ಯಾನ್ (Coffee & Van)
ಫೈನಾನ್ಸ್ – Finance
ಫುಡ್ – Food
ಆಫೀಸ್ – Office

೫) **ನಿರಂತರತೆ (ಖಾಯಂ ಬಳಕೆ)** : ಯಾವುದೇ ಒಂದು 'ಪಾರಿಭಾಷಿಕ ಪದ' ದ ಖಾಯಂ ಬಳಕೆಯನ್ನು ಅಥವಾ ನಿರಂತರವಾದ ಬಳಕೆಯನ್ನು ಹೇಗೆ ನಿರ್ಧರಿಸುವುದೆಂದರೆ, ಆ ಪದದ ವ್ಯಾಪಕ ಬಳಕೆಯನ್ನು ನೋಡಿ ಅಂದರೆ ನಿಯತಕಾಲಿಕೆಗಳಲ್ಲಿ, ಸಮೂಹ ಮಾಧ್ಯಮಗಳಲ್ಲಿ ಶೈಕ್ಷಣಿಕ ರಂಗ ಮತ್ತು ಜನಸಾಮಾನ್ಯರ ದೈನಂದಿನ ಬಳಕೆಯನ್ನು ಆಧರಿಸಿಕೊಂಡು ಅದರ ಖಾಯಂ ಬಳಕೆಯನ್ನು ನಿರ್ಧರಿಸಬಹುದು. **ಉದಾಹರಣೆಗೆ:** ದಿಕ್ಕಾರ.....ದಿಕ್ಕಾರ, ಹೋರಾಟ....ಹೋರಾಟ, ಜಿಂದಾಬಾದ್.... ಜಿಂದಾಬಾದ್, ಇತ್ಯಾದಿ ಹೋರಾಟದ ಅಥವಾ ಚಳುವಳಿಯ ಪಾರಿಭಾಷಿಕ ಪದಗಳು ವಿಶೇಷವಾಗಿ, ವಿಶಿಷ್ಟವಾಗಿ ಪ್ರತಿಯೊಂದು ಪುರಷ ಮತ್ತು ಮಹಿಳಾ ಹೋರಾಟಗಳಲ್ಲಿ ನಿರಂತರವಾಗಿ ಖಾಯಂ ಆಗಿ ಬಳಕೆಯಾಗುತ್ತವೆ. ಹೋರಾಟಗಳ ವಸ್ತು, ವಿಷಯವನ್ನಾಧರಿಸಿ ಅಂದಿನ ಸರಕಾರ, ಅಧಿಕಾರಿವರ್ಗ ಇತ್ಯಾದಿಗಳ ವಿರುದ್ಧ ಘೋಷಣೆಗಳನ್ನು ಕಟ್ಟಿ ಹೇಳುವಾಗ ಹೆಚ್ಚು ಬಳಕೆಯಾಗುತ್ತವೆ. ಅಲ್ಲದೆ ಆಕ್ರೋಶವನ್ನು, ಅನ್ಯಾಯವನ್ನು ವ್ಯಕ್ತಪಡಿಸುವ ಸಲುವಾಗಿ ಮಂತ್ರಿ, ಸಚಿವರುಗಳ, ಅಧಿಕಾರಗಳ, ಸಂಘ ಸಂಸ್ಥೆಗಳ ಹೆಸರುಗಳನ್ನು ಬಳಸಿಕೊಂಡು ದಿಕ್ಕಾರ ಹಾಕುವುದು ನಮಗೆ ಕಂಡುಬರುತ್ತದೆ.

ಉದಾಹರಣೆಗೆ :

೧) ಗೊಬ್ಬರ ಕೊಡದ ಗಬ್ಬು ಸರಕಾರಕ್ಕೆ ದಿಕ್ಕಾರ......ದಿಕ್ಕಾರ.

೨) ಕೋಮುವಾದಿ ಬಿ.ಜೆ.ಪಿ. ಸರಕಾರಕ್ಕೆ ದಿಕ್ಕಾರ......ದಿಕ್ಕಾರ.

೩) ಹಾವೇರಿಯಲ್ಲಿ ರೈತನ ಮೇಲೆ ಗೋಲಿಬಾರ್ ಮಾಡಿದ ಸರಕಾರಕ್ಕೆ ದಿಕ್ಕಾರ......ದಿಕ್ಕಾರ.

೬) **ವ್ಯಾಪಕತೆ ಮತ್ತು ಪ್ರಮಾಣೀಕರಣ** : ಒಂದು ನಿರ್ಧಿಷ್ಟವಾದ ಪದದ ಬಳಕೆಯನ್ನಾಧರಿಸಿ ಅದರ ವ್ಯಾಪಕತೆ ಮತ್ತು ಪ್ರಮಾಣೀಕರಣದ ಬಗ್ಗೆ ಯೋಚಿಸಬೇಕು. ಒಂದು ಭಾಷಾ ಸಮುದಾಯದಲ್ಲಿ ಹಲವಾರು ಪ್ರಾದೇಶಿಕ ಸಾಮಾಜಿಕ ಭಾಷೆಗಳಿರುವುದರಿಂದ ಅವುಗಳಲ್ಲಿ ಏಕತೆಯನ್ನು ತಂದು, ಅವುಗಳಲ್ಲಿ ಪ್ರಮಾಣೀಕೃತ ಪಾರಿಭಾಷಿಕ ಪದಗಳನ್ನು ಬಳಸುವಂತೆ ವ್ಯವಸ್ಥೆ ಮಾಡಬೇಕು. **ಉದಾಹರಣೆಗೆ** : Data base ಮಾಹಿತಿ ಖನಿಜ ಮತ್ತು ದತ್ತ ಖನಿಜ. ಪಾರಿಭಾಷಿಕ ಪದಗಳು ಆಡಳಿತದ ಒಳಭಾಗಕ್ಕೆ ಸಂಬಂಧಿಸಿದವು. ಈ ಪದಗಳಿಗೆ ಕಛೇರಿಯೊಳಗೆ ನಿರ್ಧಿಷ್ಟವಾದ ಅರ್ಥವಿದ್ದು, ಅವು ಅದನ್ನು ಬಳಕೆ ಮಾಡುವ ಇಲಾಖೆಗೆ ಮಾತ್ರ ತಿಳಿದಿರುತ್ತದೆ. ಒಂದು ವಲಯದಲ್ಲಿದ್ದ ಕೆಲವೊಂದು ಪಾರಿಭಾಷಿಕ ಪದಗಳು ಇನ್ನೊಂದು ವಲಯದಲ್ಲೂ ಬಳಕೆಯಾಗಬಹುದು. **ಉದಾಹರಣೆಗೆ** : ಅಧಿಕಾರ ವ್ಯಾಪ್ತಿ, ಸಾರ್ವತ್ರಿಕ ರಜಾದಿನ, ಇವು ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಲ್ಲೂ ಕಂಡುಬರುತ್ತವೆ. ಆದರೆ ಕೆಲವೊಂದು ಪದಗಳು **ಉದಾಹರಣೆಗೆ** : ಠೇವಣಿ, ಕೆಲವು ಇಲಾಖೆಗಳಿಗೆ ಮಾತ್ರ ಸೀಮಿತ. ದೈನಂದಿನ ಕಾರ್ಯ-ಚಟುವಟಿಕೆಗಳಿಗೆ ಸಂಬಂಧಿಸಿದಂತಹ ಪದಗಳು ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಲ್ಲೂ ಒಂದೇ ರೀತಿಯಾಗಿರುತ್ತವೆ. **ಉದಾಹರಣೆಗೆ** : ಸಿಬ್ಬಂದಿ ವರ್ಗಕ್ಕೆ ಸಂಬಂಧಿಸಿದ ಪದಗಳಾದ ಸಾಂದರ್ಭಿಕ ರಜೆ, ಗಳಿಕೆ ರಜೆ, ಹಬ್ಬದ ಮುಂಗಡ, ಪ್ರವಾಸ ಭತ್ಯೆ, ಕರಡು ಪತ್ರ, ಶುದ್ಧ ಪ್ರತಿ, ಹಾಜರಾತಿ, ಸುತ್ತೋಲೆ, ದಿನಭತ್ಯೆ, ದಿನಗೂಲಿ, ರಜಾ ಸಂಬಳ ಇತ್ಯಾದಿ. ಎಲ್ಲಾ ಇಲಾಖೆಗಳಲ್ಲೂ ಒಂದೇ ರೀತಿಯಾಗಿ ಬಳಕೆಯಲ್ಲಿರುತ್ತವೆ.

ರಾಜಕೀಯ ಪಕ್ಷಗಳು ಆಡಳಿತದಲ್ಲಿ ಸುಧಾರಣೆ ತರಲು ಹೊಸ ಹೊಸ ಪರಿಭಾಷೆಗಳನ್ನು ಬಳಕೆ ಮಾಡುತ್ತಾರೆ ಅಂತವುಗಳನ್ನು ದಾಖಲಿಸಬೇಕು. ಅಂದರೆ ಬೇರೆ ಬೇರೆ ಕಾರ್ಯ ಯೋಜನೆಗಳಲ್ಲಿ ಹೇಗೆ ವಿಶಿಷ್ಟವಾದ ಪರಿಭಾಷೆಯನ್ನು ಬಳಕೆ ಮಾಡುತ್ತಾರೆ ಎಂಬುದು ಗಮನಿಸುವಂತಹ ಅಂಶ.

ಹೋರಾಟದ ಪರಿಭಾಷೆ ಸಾಂದರ್ಭಿಕ ಭಾಷೆ ಹೇಗೆ ?

ಕೆಲವು ಸಂದರ್ಭಗಳಲ್ಲಿ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವುದು, ರಚಿಸುವುದು ತುಂಬಾ ಕಷ್ಟದಾಯಕವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಆಯಾ ಸಂದರ್ಭದಲ್ಲಿ ಬಳಕೆಯಾಗುವ ಭಾಷೆಯನ್ನು ಪರಿಭಾಷೆ ಎಂದು ಪರಿಗಣಿಸಲಾಗಿದೆ ಎಂಬುದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ. ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಹೋರಾಟದ ಹಾಡುಗಳು ಮತ್ತು ಹೋರಾಟದ ಸಂದರ್ಭದಲ್ಲಿ ಆಗುವ ಘೋಷಣೆಗಳಲ್ಲಿ ಬಳಕೆಯಾಗುವ ವಿಶಿಷ್ಟ ಆಕೃತಿಮಾ, ಧ್ವನ್ಯಾಕೃತಿಮಾ ರೂಪಗಳನ್ನು ಇಲ್ಲಿ ಪರಿಭಾಷೆಗಳೆಂದು ಗುರುತಿಸಿಕೊಳ್ಳಲಾಗಿದೆ. ಅಂದರೆ ಒಂದರ್ಥದಲ್ಲಿ ಪರಿಭಾಷೆ ಎಂಬುದು ಸಾಂದರ್ಭಿಕ ಭಾಷೆಯು ಹೌದು ಎಂಬುದನ್ನು ಹೋರಾಟದ ಹಾಡುಗಳು ಮತ್ತು ಘೋಷಣೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಭಾಷೆಗಳನ್ನು ದಾಖಲಿಸುವುದು ಪ್ರಸ್ತುತ ಭಾಗದ ಉದ್ದೇಶವಾಗಿದೆ.

ಹೋರಾಟದ ಸ್ವರೂಪ :

ಹೋರಾಟವೆಂದರೆ ಸಾಮಾನ್ಯವಾಗಿ ಕದನ, ಯುದ್ಧ ಎಂದು ಕರೆಯುತ್ತೇವೆ. ಸಮಸ್ಯೆಗಳನ್ನು, ಬೇಡಿಕೆಗಳನ್ನು, ವಿಷಯಗಳನ್ನು ಇಟ್ಟುಕೊಂಡು ಒಂದು ಇಲ್ಲವೆ ಹಲವು ಗುಂಪುಗಳು ಹೂಡಿರುವ ದೀರ್ಘಕಾಲದ ಪ್ರತಿಭಟನೆಯ ನಿರಂತರವಾದ ಪ್ರಕ್ರಿಯೆಯನ್ನು ನಾವು ಹೋರಾಟ ಎಂದು ಕರೆಯುತ್ತೇವೆ. ಈ ಹೋರಾಟವು ವ್ಯಕ್ತಿ ನೆಲೆಯಲ್ಲಾಗಿರಬಹುದು ಇಲ್ಲವೆ ಒಂದು ವರ್ಗದ ಗುಂಪಿನ ನೆಲೆಯಲ್ಲಾಗಿರಬಹುದು. ಒಂದು ಘಟನೆ, ಒಂದು ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ವ್ಯಕ್ತಿ ಇಲ್ಲವೆ ನಿರ್ಧಿಷ್ಟವಾದ ಗುಂಪೊಂದು ತೋರಿಸುವ ಒಂದು ರೀತಿಯ ಪ್ರತಿಕ್ರಿಯೆಯನ್ನು ನಾವು ಪ್ರತಿಭಟನೆ ಎಂದು ಹೇಳುತ್ತೇವೆ. ಪ್ರತಿಭಟನೆ ಸಂಕುಚಿತಾರ್ಥವಾದರೆ ಹೋರಾಟ ವಿಶಾಲಾರ್ಥವನ್ನು ಹೊಂದಿರುತ್ತದೆ. ಹೋರಾಟದಲ್ಲಿ ವ್ಯಕ್ತಿ ನೆಲೆಯ ಹಿತಾಸಕ್ತಿಗಿಂತ ಒಂದು ಗುಂಪಿನ ಹಿತಾಸಕ್ತಿಯೇ ಪ್ರಧಾನವಾಗಿರುತ್ತದೆ. ನಾವು ವ್ಯಕ್ತಿ ನೆಲೆಯಲ್ಲಿ ಹೋರಾಟವನ್ನು ಗುರುತಿಸುವುದಾದರೆ ವ್ಯಕ್ತಿಯು ತನ್ನ ಜೀವನದುದ್ದಕ್ಕೂ ಪ್ರತಿಭಟನೆಯ ನಿರಂತರವಾದ ಪ್ರಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದರೆ ಹೋರಾಟವೆನ್ನಬಹುದು. ಅಂತಹ ವ್ಯಕ್ತಿಯನ್ನು ಹೋರಾಟಗಾರನೆಂದು ಕರೆಯಬಹುದು.

ಯಾವುದೇ ಒಂದು ಹೋರಾಟವು ನಡೆಯುತ್ತಿದೆ ಎಂದರೆ ಅದು ವ್ಯವಸ್ಥೆಯಲ್ಲಿನ ಅಸಮಾನತೆಗಳ ವಿರುದ್ಧವೇ ನಡೆಯುತ್ತಿರುತ್ತದೆ. ಈ ಅಸಮಾನತೆಗಳ ಸ್ವರೂಪವನ್ನು ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹೀಗೆ ಹಲವಾರು ದೃಷ್ಟಿಕೋನಗಳಲ್ಲಿ ನೋಡಬಹುದು. ನಾವು ಅಸಮಾನತೆಯನ್ನು ಜಾತಿಯ ನೆಲೆಯಲ್ಲಿ ಗುರುತಿಸುವುದಾದರೆ ಅದು ಜಾತಿ ಪ್ರಧಾನವಾದ ಹೋರಾಟವಾಗಿ ಪರಿಣಮಿಸುತ್ತದೆ. ಲಿಂಗಾಧಾರಿತ ನೆಲೆಯಲ್ಲಿ ಗುರುತಿಸುವುದಾದರೆ ಪುರುಷ ವಿರೋಧಿ ಸ್ತ್ರೀಯರ ಹೋರಾಟವಾಗಿರುತ್ತದೆ.

ಹೋರಾಟ ಯಶಸ್ವಿಯಾಗಿ ನಡೆಯಬೇಕಾದರೆ ಅದಕ್ಕೆ ಪ್ರಧಾನವಾದ ಶಕ್ತಿ ಜನತೆ, ಈ ಜನಶಕ್ತಿಯಿಲ್ಲದ ಹೋರಾಟ ಎಂದಿಗೂ ಗುರಿಮುಟ್ಟುವುದಿಲ್ಲ. ಜನತೆಯ ಸಮಸ್ಯೆಗಳು ನೂರಾರಿರಬಹದು ಅವುಗಳಲ್ಲಿ ಯಾವುದು ಮುಖ್ಯ ಯಾವುದು ಅಮುಖ್ಯ ಎಂಬುದನ್ನು ಹೋರಾಟವು ಕೈಗೊಳ್ಳುತ್ತದೆ. ಯಾವುದೇ ಹೋರಾಟವು ಜನತೆಯ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಅದು ದೀರ್ಘಕಾಲ ಅಸ್ತಿತ್ವದಲ್ಲಿ ಇರುವುದಿಲ್ಲ. ಸಾಮಾಜಿಕ ಸುಧಾರಣೆಯನ್ನು ಬಯಸುವ ಹೋರಾಟದ ಚಿಂತನೆಗಳು ವರ್ತಮಾನಕಾಲದ ಬೇಡಿಕೆಗಳನ್ನು, ಸಮಸ್ಯೆಗಳನ್ನು ಪೂರೈಸುವ ನೆಲೆಯಲ್ಲಿರಬೇಕು.

'ಹೋರಾಟಕ್ಕೆ ಜನತೆ ಪ್ರಧಾನ ಶಕ್ತಿ ಒಂದಾದರೆ, ಮತ್ತೊಂದು ಶಕ್ತಿ ಅದು ನಂಬಿರುವ ಆಲೋಚನೆ ಮತ್ತು ಚಿಂತನೆ. ಈ ಆಲೋಚನೆ ಮತ್ತು ಚಿಂತನೆಗಳು ವರ್ತಮಾನದ ಚಲನಶೀಲತೆಯ ಸಂಕೀರ್ಣ ಸ್ಥಿತಿಯಲ್ಲಿ ಇರುವಿಕೆಯನ್ನು ಹಾಗೂ ಆಗುವಿಕೆಯನ್ನು ಏಕಕಾಲಕ್ಕೆ ಗ್ರಹಿಸುವಂತಿರಬೇಕು. ಸಾಂಪ್ರದಾಯಿಕ ಆಲೋಚನೆ, ಯಾಂತ್ರಿಕ ಚಿಂತನೆಗಳು ಹೋರಾಟವನ್ನು ಒಂದು ಹೆಜ್ಜೆ ಮುಂದೆ ಕೊಂಡೊಯ್ಯಲಾರವು. ಮಾನವ ಸಮಾಜದ ಬದಲಾವಣೆಯನ್ನು ಸುಧಾರಣೆಯನ್ನು ಬಯಸುವ ಹೋರಾಟದ ಆಲೋಚನೆಗಳು ನಿರಂತರವಾಗಿ ಪುನರ್ ನವೀಕರಣಕ್ಕೆ ಒಳಗಾಗಬೇಕು. ಇಲ್ಲದಿದ್ದರೆ

ವ್ಯವಸ್ಥೆಯನ್ನು ವಕ್ರವಾಗಿ, ಪಾರ್ಶ್ವಿಕವಾಗಿ ಗ್ರಹಿಸಿದಂತಾಗುತ್ತದೆ. ಮುಖ್ಯವಾದುದನ್ನು ಅಮುಖ್ಯವಾದುದನ್ನಾಗಿಯೂ ಅಮುಖ್ಯವಾದುದನ್ನು ಮುಖ್ಯವಾದುದನ್ನಾಗಿಯೂ ತಿರುಗುಮುರುಗಾಗಿ ಗ್ರಹಿಸುವ ತೊಡಕು ಉಂಟಾಗುತ್ತದೆ. ಆದ್ದರಿಂದ ಯಾವುದೇ ಹೋರಾಟಕ್ಕೆ ಹರಿತವಾದ ಮತ್ತು ಖಚಿತವಾದ ಚಿಂತನೆಗಳು ಮುಖ್ಯ[೧].

ಸಮಾಜದಲ್ಲಿ ಚಳುವಳಿಗಳು ಕಾಣಿಸಿಕೊಳ್ಳುವುದು ಸಾಮುದಾಯಿಕ ಕ್ರಿಯೆಯಾಗಿಯೇ ಜನಸಮುದಾಯದಲ್ಲಿ ಕಾಣಿಸಿಕೊಳ್ಳುವ ದೌರ್ಜನ್ಯ, ದಬ್ಬಾಳಿಕೆ, ಅಸಮಾನತೆಗಳು, ಶೋಷಿತವರ್ಗದ ಪ್ರತಿಭಟನಾತ್ಮಕ ಪ್ರತಿಕ್ರಿಯೆಯನ್ನು ಪಡೆದುಕೊಂಡಾಗ ಚಳುವಳಿಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಸಾಮಾಜಿಕ ಬದಲಾವಣೆಗಾಗಿಯೇ ಚಳುವಳಿಗಳು ಹುಟ್ಟಿಕೊಳ್ಳುತ್ತವೆ. ಈ ಚಳುವಳಿಗಳು ಸಾಮಾಜದಲ್ಲಿ ಜನಸಾಮಾನ್ಯರಲ್ಲಿ ಅರಿವನ್ನು, ತಿಳುವಳಿಕೆಯನ್ನು ಜಾಗೃತಿ, ಎಚ್ಚರಗಳನ್ನು ಮೂಡಿಸುತ್ತವೆ. ಇಂತಹ ಜಾಗೃತಿ, ಎಚ್ಚರಗಳು ಜನತೆಯಲ್ಲಿ ಹೊಸಬದುಕನ್ನು ಸೃಷ್ಟಿಸುತ್ತವೆ. ಚಳುವಳಿಗಳ ಮೂಲಕ ಉಂಟಾಗುವ ಬದಲಾವಣೆ ಒಂದು ಸಿದ್ಧಾಂತದ ನೆಲೆಗಟ್ಟಿನ ಆಧಾರದ ಮೇಲೆ ಸಂಘಟನೆಯನ್ನು ಮಾಡುತ್ತ ಸಮುದಾಯದ ಬದಲಾವಣೆಯನ್ನು ಮಾಡುತ್ತಿರುತ್ತದೆ. ಚಳುವಳಿಗಳು ಯಾವಾಗಲೂ ಶೋಷಣೆಗೊಳಗಾದವರ, ನೊಂದವರ, ಅಸಮಾನತೆಗೊಳಗಾದವರ ಪರವಾಗಿಯೇ ನಡೆಯುತ್ತವೆ. ದಲಿತರು, ಮಹಿಳೆಯರು, ಆದಿವಾಸಿಗಳು, ರೈತರು, ಕೂಲಿಕಾರ್ಮಿಕರು ಒಟ್ಟಾರೆ ದುಡಿಯುವ ವರ್ಗದವರು ಸಂಘಟನೆಗೊಂಡು ತಮಗಾದ ಅನ್ಯಾಯದ ವಿರುದ್ಧ ನ್ಯಾಯಕ್ಕಾಗಿ ಹೋರಾಡುತ್ತಾರೆ.

ಪ್ರತಿಭಟನೆ, ಹೋರಾಟ, ಚಳುವಳಿ, ಸಂಘಟನೆಯನ್ನು ಮುನ್ನಡೆಸಿಕೊಂಡು ಹೋಗುವ ನಾಯಕರ ಪಾತ್ರವು ಬಹಳ ಪ್ರಮುಖವಾದುದು. ಯಾವುದೇ ಒಂದು ಚಳುವಳಿಯು, ಹೋರಾಟವು ತನ್ನ ಗುರಿಯನ್ನು ಯಶಸ್ವಿಯಾಗಿ ಮುಟ್ಟಬೇಕಾದರೆ ನಿರ್ಧಿಷ್ಟವಾದ ಸಿದ್ಧಾಂತದ ನಿಲುವುಗಳನ್ನು ಪಡೆದಿರಬೇಕಾಗುತ್ತದೆ. ಖಚಿತವಾದ ಸೈದ್ಧಾಂತಿಕ ನಿಲುವುಗಳನ್ನು ಪಡೆಯದಿದ್ದರೆ ಅಂತಹ ಚಳುವಳಿಗಳು ಹೆಚ್ಚು ಕಾಲ ಉಳಿಯುವುದಿಲ್ಲ. ಅದು ಕೇವಲ ಗುಂಪು ಗಲಭೆ, ಘರ್ಷಣೆಗಳಲ್ಲಿ ಕೊನೆಗೊಳ್ಳುತ್ತವೆ. ಸುಸಜ್ಜಿತವಾದ ನಾಯಕರಿಲ್ಲದ ಚಳುವಳಿಯು ಅರಾಜಕತೆಯಿಂದ ಕೂಡಿದ್ದು, ಅರಾಜಕತೆಯಲ್ಲಿ ಮುಕ್ತಾಯವಾಗುತ್ತದೆ. ಚಳುವಳಿಯು ಬದ್ಧತೆಯಿಂದ ಕೂಡಿದ್ದು, ಮಾನವೀಯ ಮೌಲ್ಯಗಳಾದ ಸತ್ಯ, ನ್ಯಾಯ, ನೀತಿಗಳಿಗನುಗುಣವಾಗಿರಬೇಕು. ಇಂತಹ ಚಳುವಳಿಯ ನೇತೃತ್ವವಹಿಸಿಕೊಳ್ಳುವ ನಾಯಕರಾಗಲಿ ಮತ್ತು ಚಳುವಳಿಯಲ್ಲಿ ಭಾಗವಹಿಸುವ ವ್ಯಕ್ತಿಗಳಿಗೆ ಪ್ರಮಾಣೀಕತೆ ಇರಬೇಕು. ಚಳುವಳಿಯ ಸೈದ್ಧಾಂತಿಕ ನಿಲುವುಗಳಿಗೆ ಬದ್ಧರಾಗಿರಬೇಕು. ನಾಯಕನ ಬಗೆಗೆ ನಂಬಿಕೆ, ವಿಶ್ವಾಸವಿರಬೇಕು. ತಮ್ಮ ಚಳುವಳಿಯ ಮೂಲಕ ಸಮಾಜದಲ್ಲಿ ಮಹತ್ವಪೂರ್ಣವಾದ ಘಟನೆಯೊಂದು ಸಂಭವಿಸುತ್ತದೆಂಬ ತಿಳುವಳಿಕೆ ಇರಬೇಕು. ಆದ್ದರಿಂದ ಪ್ರಜ್ಞಾವಂತ ಜನಸಮುದಾಯವು ಚಳುವಳಿಯೊಳಗೆ ತಮ್ಮನ್ನು ತಾವು ತೊಡಗಿಸಿಕೊಂಡಾಗ ಮಾತ್ರ ಅದಕ್ಕೆ ನಿರ್ಧಿಷ್ಟವಾದ, ಸುಗಮವಾದ ದಿಶೆಯತ್ತ ಚಾಲನೆ ದೊರೆಯುತ್ತದೆ.

---

೧ ದಲಿತ ಅಧ್ಯಯನ. ಸಂ: ಟಿ.ಆರ್. ಚಂದ್ರಶೇಖರ. ಪುಟ ಸಂಖ್ಯೆ ೩೧೬

ಸಾಮಾಜಿಕ ಚಳುವಳಿಗಳು ಕೇವಲ ಒಂದು ಘಟ್ಟದಲ್ಲಿ ಸಂಭವಿಸುವುಂತಹದಲ್ಲ. ಅನೇಕ ಘಟ್ಟಗಳಲ್ಲಿ, ಹಂತಗಳಲ್ಲಿ ಸಂಭವಿಸಿ ಸಾಮಾಜಿಕ ಬದಲಾವಣೆಯನ್ನುಂಟುಮಾಡುವುದೇ ಅವುಗಳ ಮೂಲ ಉದ್ದೇಶವಾಗಿರುತ್ತದೆ.

ಸಾಮಾಜಿಕ ಚಳುವಳಿಯು ಸಮಕಾಲೀನ ಸಮಾಜದ ವಿಶಿಷ್ಟ ಮಾದರಿಯ ಸಮುದಾಯದ ಕ್ರಿಯೆಯಾಗಿದೆ. ದಲಿತ, ಮಹಿಳೆ, ಕಾರ್ಮಿಕ, ರೈತ, ಆದಿವಾಸಿ, ಕೂಲಿಕಾರರು ಇತ್ಯಾದಿ ಹಲವು ವಿಭಿನ್ನ ಸಮುದಾಯಗಳ ಸಂಘಟನೆಯ ಚಟುವಟಿಕೆಗಳು ಸಮಕಾಲೀನ ಭಾರತದ ಅವಿಭಾಜ್ಯ ಲಕ್ಷಣವಾಗಿದೆ. ಪ್ರಾರಂಭದ ದಿನಗಳಲ್ಲಿ ಈ ರೀತಿಯ ಸಂಘಟನೆಯ ಪ್ರಯತ್ನಗಳಿಗೆ ಆಂದೋಲನ, ಕ್ರಾಂತಿ, ದಂಗೆ, ಕದನ, ಯುದ್ಧ, ಹೋರಾಟ ಇತ್ಯಾದಿ ಹಲವು ಪರಿಭಾಷೆಗಳನ್ನು ಬಳಸುತ್ತಿದ್ದರು. ಆಗಿನ ಸಂದರ್ಭಗಳಲ್ಲಿ ಬಳಸಲಾದ ಈ ಎಲ್ಲಾ ಪದಗಳಿಗೂ ಅವುಗಳದ್ದೇ ಆದ ನಿರ್ಧಿಷ್ಟ ಪದಕೋಶವಿದ್ದು, ಅದು ಪದ ಬಳಕೆಯ ಹಿಂದಿನ ದೃಷ್ಟಿಕೋನವನ್ನು ಚಿತ್ರಿಸುತ್ತದೆ. **ಉದಾಹರಣೆಗೆ** : ಕ್ರಾಂತಿ, ಹೋರಾಟ ಮುಂತಾದ ಪದಗಳು ಮಾರ್ಕ್ಸ್‌ವಾದ ಧೋರಣೆ ಹಿನ್ನೆಲೆಯಲ್ಲಿ ಬಳಸಿದ್ದರೆ, ಆಂದೋಲನ, ಚಳುವಳಿ ಇತ್ಯಾದಿ ಪದಗಳು ಸಮಾಜವಾದಿ ಚಿಂತಕರು ಬಳಸಿರುವ ಪರಿಭಾಷೆಗಳಾಗಿವೆ. ಈ ಎಲ್ಲ ಪ್ರಯೋಗಗಳ ನಂತರ ಇಂದು 'ಚಳುವಳಿ' ಎಂಬ ಪದ ಚಾಲ್ತಿಯಲ್ಲಿದೆ. ಆಂಗ್ಲಭಾಷೆಯ 'MOVEMENT' ಎಂಬ ಪದಕ್ಕೆ ಸಮನಾರ್ಥಕ ಶಬ್ದವಾಗಿ ಬಳಕೆಯಾಗುತ್ತಿದ್ದು, ಅದು ನಿರಂತರವಾದ ಪ್ರಕ್ರೀಯೆ ಅಥವಾ ಚಾಲನೆಯನ್ನು ಸೂಚಿಸುವುದಾಗಿದೆ.

ಹೋರಾಟ ಕುರಿತ ವ್ಯಾಖ್ಯಾನಗಳು : ಚಳುವಳಿಯ ಬಗ್ಗೆ ಅನೇಕ ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನ ನೀಡಲು ಪ್ರಯತ್ನ ಮಾಡಿದ್ದಾರೆ. ಆದರೆ ಈ ಪ್ರಯತ್ನಗಳು ಚಳುವಳಿಯ ಸ್ವರೂಪವನ್ನು ಕಟ್ಟಿಕೊಡುತ್ತವೆ.

೧) **'ಹರ್‌ಬರ್ಟ್ಸ್ ಬ್ಲೂಮರ್‌ನ ಪ್ರಕಾರ** : 'ಹೊಸ ಜೀವನ ಕ್ರಮವನ್ನು ರೂಢಿಸುವುದಕ್ಕಾಗಿ ಮಾಡುವ ಸಾಮುದಾಯಿಕ ಪ್ರಯತ್ನ'ವೇ ಚಳುವಳಿಯಾಗಿದೆ.

೨) **ಲಿವಿಸ್ ಕಿಲ್ಲಿಯನ್ ಪ್ರಕಾರ** : 'ಸಮಾಜೋ ಸಾಂಸ್ಕೃತಿಕ ಕ್ರಮವನ್ನು ಬದಲಿಸಲು ಅಥವಾ ಬದಲಾಗುತ್ತಿರುವುದನ್ನು ತಡೆಗಟ್ಟಲು ಕೈಗೊಳ್ಳುವ ಸಾಮುದಾಯಿಕ ಶ್ರಮವನ್ನು ಚಳುವಳಿ ಎನ್ನಬಹುದಾಗಿದೆ.

೩) **ಜೇಮ್ಸ್‌ವುಡ್ ಮತ್ತು ಜಾಕಸನ್ ಮೊಲಿಸ್‌ರು** : ಸಾಮಾಜಿಕ ಚಳುವಳಿಗಳ ಸಂಘಟನೆಯ ಸ್ವರೂಪವನ್ನಾಧರಿಸಿ 'ಕ್ರಾಂತಿಕಾರಕ ಅಥವಾ ಸುಧಾರಣಾತ್ಮಕವಾದ ಬದಲಾವಣೆಯನ್ನು ರೂಪಿಸುವ ಅಥವಾ ತಡೆಗಟ್ಟುವ ದಿಕ್ಕಿನಲ್ಲಿ ಯಾವುದೇ ರಾಜಿಗೊಳಪಡದ ಗುಂಪುಗಳ ಸಂಘಟನಾತ್ಮಕ ಪ್ರಯತ್ನವನ್ನು ಚಳುವಳಿ' ಎನ್ನುತ್ತಾರೆ.

೪) **ಟಿ.ಕೆ.ಓಮನ್:** ಭಾರತದ ಚಳುವಳಿಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ ಈತ 'ಪರಿಧಿಯಲ್ಲಿರುವ ಮನುಷ್ಯನು ಕೇಂದ್ರದೆಡೆಗೆ ಚಲಿಸಲು ವ್ಯವಸ್ಥಿತವಾಗಿ ರೂಪಿಸಿಕೊಳ್ಳುವ ಸಾಮೂಹಿಕ ಕ್ರಿಯೆಯನ್ನು ಚಳುವಳಿ' ಎನ್ನುತ್ತಾನೆ[೨].

ಈ ಮೇಲಿನ ವಿದ್ವಾಂಸರ ಅಭಿಪ್ರಾಯಗಳು ಚಳುವಳಿಯ ಸ್ವರೂಪವನ್ನು ಮತ್ತು ಸಮಾಜದ ಬದಲಾವಣೆಯನ್ನು ಗುರುತಿಸುತವೆ. ಇಂತಹ ಹಲವಾರು ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತ ಈ ವಿವರಣೆಗಳನ್ನು ನಾವು ಮತ್ತೊಮ್ಮೆ ಸೂತ್ರ ರೂಪದಲ್ಲಿ ಹೇಳುವುದಾದರೆ, ಒಂದು ನಿರ್ಧಿಷ್ಟ ಗುರಿಯನ್ನು ತನ್ನದೇ ಆದಂತಹ ಸಿದ್ಧಾಂತದೊಂದಿಗೆ ಇಟ್ಟುಕೊಂಡು ಸಾಮಾಜಿಕ ಬದಲಾವಣೆಗಾಗಿ ಬೇಡಿಕೆಗಳನ್ನು ಮಂಡಿಸುವ ಸಮುದಾಯದ ಕ್ರಿಯೆಯನ್ನು ಚಳುವಳಿ ಎಂದು ಕರೆಯಬಹುದಾಗಿದೆ.

ಹೋರಾಟ ಅಥವಾ ಚಳುವಳಿಯ ಲಕ್ಷಣಗಳು :

೧) **ನಿರ್ಧಿಷ್ಟವಾದ ಸಿದ್ಧಾಂತ ಅಥವಾ ತಾತ್ವಿಕತೆ :**

ಯಾವುದೇ ಹೋರಾಟ ಅಥವಾ ಚಳುವಳಿಯು ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಸಿದ್ಧಾಂತ ಅಥವಾ ತತ್ವ ಅತ್ಯವಶ್ಯಕವಾಗಿರಬೇಕು. ತತ್ವ ಸಿದ್ಧಾಂತದ ಹಿನ್ನೆಲೆಯಿಲ್ಲದೆ ತತ್‌ಕ್ಷಣದಲ್ಲಿ ಘಟಿಸಿದ್ದಾದರೆ ಅದು ಗುಂಪುಗಲಭೆಯಾಗಿ, ಘರ್ಷಣೆಯಾಗಿ, ಪ್ರತಿಭಟನೆಯಾಗಿ ಮುಕ್ತಾಯಗೊಳ್ಳುವ ಸಂಭವವಿರುತ್ತದೆ. ತತ್ವ ಸಿದ್ಧಾಂತದ ಹಿನ್ನೆಲೆಯಿಲ್ಲದೆ ತತ್‌ಕ್ಷಣದ ಸಮುದಾಯದ ಕ್ರಿಯೆ ದೀರ್ಘಕಾಲದ ಬಾಳಿಕೆಯನ್ನು ಹೊಂದಿರುವುದಿಲ್ಲ. ಸ್ಪಷ್ಟವಾದ ಹೋರಾಟದ ಮಾರ್ಗವನ್ನಾಗಲಿ, ನಿಖರವಾದ ಗುರಿಯನ್ನಾಗಲಿ ಆ ಗುರಿಯನ್ನು ತಲುಪುವ ಬದ್ಧತೆಯನ್ನಾಗಲಿ ಹೊಂದದಿರುವ ಇಂತಹ ಸಾಮೂಹಿಕ ಕ್ರಿಯೆಗಳು ಅರಾಜಕತೆ, ಗುಂಪುಗಲಭೆ, ಘರ್ಷಣೆಯಲ್ಲಿ ಕೊನೆಗೊಳ್ಳುತ್ತವೆ. ಅದಕ್ಕಾಗಿ ಯಾವುದೇ ಒಂದು ಚಳುವಳಿಗೆ ನಿರ್ಧಿಷ್ಟವಾದ ಸಿದ್ಧಾಂತದ ಹಿನ್ನೆಲೆಯಿದ್ದು, ಅದು ಚಳುವಳಿಯ ಗುರಿಯನ್ನು ನಿರ್ಧರಿಸುತ್ತ ಅವುಗಳಿಗೆ ಬದ್ಧರಾಗುವ ಜನತೆಯನ್ನು ಒಳಗೊಳ್ಳಬೇಕಾಗುತ್ತದೆ.

೨) **ತ್ಯಾಗ, ನಿಷ್ಠೆ, ಪ್ರಮಾಣೀಕತೆ :**

ಚಳುವಳಿಕಾರರು ತಮ್ಮನ್ನು ತಾವು ಚಳುವಳಿಯಲ್ಲಿ ತೊಡಗಿಸಿಕೊಂಡಾಗ ತ್ಯಾಗ, ನಿಷ್ಠೆ, ಪ್ರಮಾಣೀಕತೆ ಮುಂತಾದ ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಗಳಾಗಿರಬೇಕು. ಚಳುವಳಿಯ ಬದ್ದತೆಯ ಪ್ರಶ್ನೆ ಬಹಳ ಪ್ರಮುಖ ಅಂಶವಾಗಿರುತ್ತದೆ. ಆಗ ಚಳುವಳಿಕಾರರು ತಾವು ನಂಬಿದ ಆದರ್ಶ ತಲುಪಬೇಕಾದ ಗುರಿ ಇವುಗಳಿಗಾಗಿ ಎಂತಹ ಕಷ್ಟಗಳನ್ನಾದರು ಎದುರಿಸುವ ಅರ್ಪಣಾ ಭಾವ, ತ್ಯಾಗ ನಿಷ್ಠೆಗಳು ಇರಬೇಕಾಗುತ್ತದೆ. ನಿಷ್ಠಾವಂತ, ಪ್ರಮಾಣೀಕ ಚಳುವಳಿಗಾರರೇ ಚಳುವಳಿಯೊಂದರ ಯಶಸ್ಸಿಗೆ ಕಾರಣೀಭೂತರಾಗಿರುತ್ತಾರೆ. ಹಾಗೂ ನಿಷ್ಠೆಗೆ ಅನುಗುಣವಾಗಿ

---

೨ ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು. ಡಾ॥ ಎಂ. ಉಷಾ. ಪುಟ ಸಂಖ್ಯೆ ೩.

ಚಳುವಳಿಯ ನಾಯಕತ್ವವಿದ್ದು, ನಾಯಕರು ತಮ್ಮ ಚಳುವಳಿಯ ಬದ್ಧತೆಯನ್ನು ನಿರೂಪಿಸುವ ಮೂಲಕ ಜನರನ್ನು ಪ್ರಭಾವಿಸಬೇಕಾಗುತ್ತದೆ. **ಉದಾಹರಣೆಗೆ** : ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಸಂದರ್ಭವನ್ನು ಅಹಿಂಸಾ ಮಾರ್ಗಕ್ಕೆ ತೋರಿಸಿದ ನಿಷ್ಠೆ, ಚಿಪ್ಕೋ ಚಳುವಳಿಯ ಸಂದರ್ಭದಲ್ಲಿ ಕಡಿಯಲು ಬಂದ ಮರಗಳನ್ನು ತಟ್ಟಿ ನಿಲ್ಲುವ ವಿಧಾನ, ಪಾನ ನಿಷೇಧ ಚಳುವಳಿಯ ಸಂದರ್ಭದಲ್ಲಿ ಮಹಿಳಾ ಚಳುವಳಿ ಗುರುತಿಸಿಕೊಂಡ ಕೌಟುಂಬಿಕ ನೆಲೆಯ ಹೋರಾಟ.

೩) ಚಳುವಳಿಯ ನಾಯಕತ್ವ :

ಯಾವುದೇ ಒಂದು ಚಳುವಳಿಯ, ಸಂಘಟನೆಯ, ಯಶಸ್ವಿಗೆ ಸಮರ್ಥವಾದ ನಾಯಕತ್ವವು ಅತಿ ಪ್ರಮುಖವಾಗಿರುತ್ತದೆ. ಸರಿಯಾದ ನಾಯಕತ್ವ ಇಲ್ಲದೆ ಹೋದರೆ ಯಾವುದೇ ಸಂದರ್ಭದಲ್ಲಾದರೂ ಚಳುವಳಿ ದಮನಗೊಳ್ಳುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ನಿರ್ದಿಷ್ಟವಾದ ಸಿದ್ಧಾಂತದ ನಿಲುವುಗಳನ್ನು ಹೊಂದಿದ ಹೋರಾಟವು ಕೂಡ ಗಲಭೆಯಾಗಿ, ಗುಂಪು ಘರ್ಷಣೆಯಾಗಿ ಪರಿವರ್ತನೆಗೊಳ್ಳುತ್ತದೆ. ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ ಸಾಮ್ರಾಜ್ಯಶಾಹಿ, ವಸಾಹತುಶಾಹಿ, ರಾಜಕೀಯ ಪ್ರಕ್ರಿಯೆಗಳೆಲ್ಲದರ ಹಿಂದೆ ನಾಯಕತ್ವದ ಗುಣ ಪ್ರಮುಖವಾಗಿದೆ. ಎಷ್ಟೋ ಬಾರಿ ಸಮರ್ಥ ನಾಯಕರ ಸಂಘಟನೆಯ ಶ್ರಮದ ಫಲವೇ ಚಳುವಳಿಗಳು ಯಶಸ್ವಿಯಾಗಿವೆ. ಚಳುವಳಿಯ ಪ್ರತಿಯೊಬ್ಬ ಸದಸ್ಯನಿಗೂ ಚಳುವಳಿಯ ತತ್ವ ಸಿದ್ಧಾಂತದ ನಿಲುವುಗಳನ್ನು ಸಂಪೂರ್ಣ ತಿಳುವಳಿಕೆಯನ್ನು ಒದಗಿಸುವುದು ಚಳುವಳಿಯ ನಾಯಕತ್ವವಹಿಸಿಕೊಂಡ ನಾಯಕನ ಜವಾಬ್ದಾರಿಯಾಗಿರುತ್ತದೆ. ಅಲ್ಲದೆ ಇಡೀ ಚಳುವಳಿಯ ಸಂಚಾಲಕನಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಸ್ವಂತ ಅಭಿಪ್ರಾಯವನ್ನು ಒತ್ತಾಯಪೂರ್ವಕ-ವಾಗಿ ಹೇರುವ ಮತ್ತು ಸದಸ್ಯರ ಅಭಿವ್ಯಕ್ತಿ ಸ್ವಾತಂತ್ರವನ್ನು ಗಾಳಿಗೆ ತೂರುವ ಅವಕಾಶ ಅವನಿಗಿರುವುದಿಲ್ಲ.

೪) ಜನರ ಭಾಗವಹಿಸುವಿಕೆ :

ಸಾಮಾಜಿಕ ಬದಲಾವಣೆಯು ಉತ್ತಮ ಚಿಂತನೆಯಿಂದ ಹೋರಾಟ, ಚಳುವಳಿಯಾಗಿ ರೂಪಗೊಳ್ಳಬೇಕಾದರೆ ಜನ ಸಮುದಾಯವೊಂದನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅಧಿಕ ಪ್ರಮಾಣ ಜನ ಯಾರ ಒತ್ತಾಯ, ವಿರೋಧವು ಇಲ್ಲದೆ ಒಬ್ಬರಿಗೊಬ್ಬರು ಪರಸ್ಪರ ಪ್ರಭಾವಿತರಾಗಿ ರೂಢಿಸಿಕೊಳ್ಳುವ ವರ್ತನೆಗಳು ಕೂಡ ಸಾಮಾಜಿಕ ಬದಲಾವಣೆಯನ್ನು ತರುತ್ತವೆ. ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದ ಮಾರ್ಕ್ಸ್‌ವಾದವು ಒಂದು ಚಳುವಳಿಯಾಗಿ ರೂಪಗೊಂಡಿತು. ಚಳುವಳಿಗಳಲ್ಲಿ ಸಮುದಾಯದ ಕ್ರಿಯೆ ಮತ್ತು ಪ್ರತಿಕ್ರಿಯೆ ಚಳುವಳಿಯ ಪ್ರಮುಖ ಲಕ್ಷಣವಾಗಿದೆ. ಚಳುವಳಿಗಳಲ್ಲಿ ಗುರುತಿಸಿಕೊಂಡ ಸಮುದಾಯ ಪ್ರಜ್ಞಾವಂತ ಸಮುದಾಯವಾಗಿದ್ದು ಚಳುವಳಿಯ ಸಿದ್ಧಾಂತ, ಗುರಿಗಳು ಹಾಗೂ ನಾಯಕತ್ವದ ವಿಚಾರದಲ್ಲಿ ನಿಖರವಾದ, ಸ್ಪಷ್ಟವಾದ ನಿಲುವುಗಳನ್ನು ಹೊಂದಿರುತ್ತದೆ. ಚಳುವಳಿಯ ನಿಲುವುಗಳಿಗೆ ಜನತೆ ಬದ್ಧರಾಗಿ ನಿಲ್ಲದೆ ಚಳುವಳಿಯ

ಧೋರಣೆಗಳನ್ನು ಕಡೆಗಣಿಸುವುದು, ಸ್ವಾರ್ಥದಿಂದ ವೈಯಕ್ತಿಕ ಲಾಭಕ್ಕಾಗಿ ಪ್ರಯತ್ನಿಸುವುದು. ಮುಂತಾದ ಅಂಶಗಳು ಜನತೆಯಲ್ಲಿ ಕಂಡುಬರಬಹುದು. ಜನತೆಯ ಈ ಮನೋಭಾವವನ್ನು ಕುರಿತು ಪುನಃ ರೂಪಿಸುವ ಮತ್ತು ಸಂಘಟಿಸುವ ಜವಾಬ್ದಾರಿ ನಾಯಕತ್ವಕ್ಕೆ ಮುಂದಿನ ಸವಾಲಾಗಿ ಪರಿಣಮಿಸುತ್ತದೆ. ಕಾರಣ ನಾಯಕತ್ವವು ಅದನ್ನು ಸರಿಯಾಗಿ ಅರಿತು ಪ್ರತಿಕ್ರಿಯಿಸದಿದ್ದರೆ ಆಗ ಚಳುವಳಿ ಸಿಥಿಲಗೊಳ್ಳುತ್ತದೆ. ಇಂತಹ ಸ್ವರೂಪ ಮತ್ತು ಲಕ್ಷಣಗಳನ್ನು ಹೊಂದಿರುವ ಚಳುವಳಿಗಳ ಪರಿಭಾಷೆ ಒಂದೇ ರೀತಿ ಇರುವುದಿಲ್ಲ. ಆಯಾ ಚಳುವಳಿಯ ಆಶಯಕ್ಕೆ ತಕ್ಕಂತೆ ಪರಿಭಾಷೆ ಬೇರೆ ಬೇರೆಯಾಗಿದೆ. ಅಂತಹ ಪರಿಭಾಷೆಗಳ ಸ್ವರೂಪ ಎಂತಹದು, ಅದರ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಅಡಿ ಟಿಪ್ಪಣಿಗಳು

೧) ದಲಿತ ಅಧ್ಯಯನ ಸಂ : ಟಿ.ಆರ್. ಚಂದ್ರಶೇಖರ. ಲೇಖನ: ಪ್ರತಿಭಟನೆಯ ವ್ಯವಸ್ಥೆ ಜಾಗತಿಕ ಸಂದರ್ಭ ಹಾಗೂ ವೈಚಾರಿಕ ಸಂಘರ್ಷಗಳು; ಭಾರತೀಯ ಪರಂಪರೆ. ಡಾ॥ ಬಿ.ಎಂ. ಪುಟ್ಟಯ್ಯ, ಪುಟ ಸಂಖ್ಯೆ : ೩೧೬

೨) ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು. ಡಾ॥ ಎಂ. ಉಷಾ ಪ್ರಕ.ವಿ.ವಿ. ಹಂಪಿ ೨೦೦೪. ಪುಟ ಸಂಖ್ಯೆ-೩.

ಅಧ್ಯಾಯ-೨

ದಲಿತ ಹೋರಾಟದ ಪರಿಭಾಷೆಯ ಸ್ವರೂಪ

ಅಧ್ಯಾಯ-೨

ದಲಿತ ಹೋರಾಟದ ಪರಿಭಾಷೆಯ ಸ್ವರೂಪ

ದಲಿತ ಪದದ ನಿಷ್ಪತ್ತಿ :

ದಲಿತ ಪದವು ಭಾರತೀಯ ಎಲ್ಲಾ ಭಾಷೆಗಳಲ್ಲಿ ಬಳಕೆಯಲ್ಲಿದೆ. ದಲಿತ ಪದಕ್ಕೆ ಸಂವಾದಿಯಾಗಿ ಇಂಗ್ಲೀಷ್‌ನಲ್ಲಿ Brust, Split, Scattered, Dispersed, Broken, Tron, As under, Destroged, Crushed ಮುಂತಾದ ಅರ್ಥಗಳು ಈ ಎಲ್ಲಾ ಅರ್ಥಗಳನ್ನು ಕ್ರೂಢೀಕರಿಸಿ, ಭಾರತೀಯ 'ಅಸ್ಪೃಶ್ಯ' ಮತ್ತು 'ಬುಡಕಟ್ಟು' ಜನರಿಗೆ ದಲಿತರು ಎಂದು ಗುರುತಿಸುವರು. 'ದಲಿತ' ರೂಪದ ಮೂಲಧಾತು 'ದಲ್' ಈ 'ದಲ್' ಧಾತುವಿನ ನಾಮ ವಿಶೇಷ ದಲಿತ. ಈ ದಲಿತ ಪದದ ಜೊತೆಗೆ ದಲಿತತ್ವ ಎನ್ನುವ ಇನ್ನೊಂದು ಪದವು ವ್ಯಾಪಕವಾಗಿ ಬಳಕೆಗೊಳ್ಳುವುದು. ಈ ದಲಿತತ್ವವು ಭಾರತೀಯ ಕೀಳು ಮತ್ತು ಉಪೇಕ್ಷಿತ ಜನರ ತತ್ವ ಮತ್ತು ರಾಷ್ಟ್ರೀಯತೆಗಳ ಗುರುತಿಸುವುದು.

ಪಂಚಮರು, ಅವರ್ಣೀಯರು, ಅಂತ್ಯಜರು, ಕೇರಿಜನ, ಮಾದಿಗರು, ಮಾದ್ರು, ಹೊಲ್ಯಾರು, ಹೊಲಸು ತಿನ್ನೋರು, ಸತ್ತದನ ತಿನ್ನೋರು, ಹೊಲಗೇರಿಯಾಂವ, ಹೇಲುಬಳಿಯಾಂವ, ಯಕ್ಕಡ ಮಾಡಾಂವ, ಹೇಲುತಿಂದು ಹೆಂಡಿ ಆಣೆ ಮಾಡುವ ಜನ, ಹೊಲೆಮಾದಿಗರು, ಚಪ್ಲಿ ಮಾಡಾಂವ, ಕೆರಾವಲಿಯವನು, ದನ ತಿನ್ನುವರು, ಕಟುಕರು, ಕೀಳು ಜನ, ಹೀನರು, ಅಸ್ಪೃಶ್ಯರು, ಮಲ ಹೋರುವರು, ಹೇಲು ಬಳಿಯುವರು, ಹಲಗಿ ಬಡಿಯೋರು, ತಮಟೆ ಬಡಿಯೋರು, ಸೂತಕದವರು, ಮುಟ್ಟುಚಟ್ಟು, ಮೈಲ್ಗಿಯವರು, ಎಡಗೈ, ಬಲಗೈ, ಎಡಗೈ ಹೆಬ್ಬೆರಳು ಕಿರುಬೆರಳು, ಬಲಗೈ ಹೆಬ್ಬೆರಳು ಕಿರುಬೆರಳು, ಸಣ್ಣಜನ, ದಲಿತರಲ್ಲಿ 'ಎಡಗೈನವರು' ಮತ್ತು 'ಬಲಗೈನವರು' ಎನ್ನುವ ಪದಗಳು ಕೀಳು ಮತ್ತು ಮೇಲ್‌ಜಾತಿಗಳನ್ನು ಧ್ವನಿಸುತ್ತವೆ.

ಜಾತೀಯತೆ ನಮ್ಮ ಹಿಂದೂ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟ ಒಂದು ದೊಡ್ಡ ರೋಗವಾಗಿದೆ. ಹಿಂದೂ ಧರ್ಮದ ವರ್ಣಪದ್ಧತಿಯಲ್ಲಿ ಉದ್ಭವಿಸುವ ವರ್ಗ ಸಂಘರ್ಷದಲ್ಲಿ ದಲಿತರು ಬಲಿಪಶುಗಳಾದರು. ಜಾತಿಪದ್ಧತಿಯೆಂಬ ಚಕ್ರಕ್ಕೆ ಸಿಲುಕಿ ತಮ್ಮ ಸಾಮಾಜಿಕ ಅಸ್ತಿತ್ವವನ್ನು ಕಳೆದುಕೊಂಡರು ಮನುಷ್ಯ ಮನುಷ್ಯನನ್ನೇ ಶೋಷಿಸುವ, ದಬ್ಬಾಳಿಕೆಯಲ್ಲಿ ದಲಿತರು ನಲುಗಿ ಅದೇ ಧರ್ಮದಲ್ಲಿ ಉಳಿಯಬೇಕಾಯಿತು. ಈ ಪರಂಪರಾಗತವಾದ ಶೋಷಣೆಯಿಂದ ಮುಕ್ತಿಗೊಳಿಸಲು ಅನೇಕ ಸಮಾಜ ಸುಧಾರಕರು, ಸುಧಾರಣೆಗಳು ಬಂದವು. ಅಮಾನವೀಯತೆಯಿಂದ ಕೂಡಿದ ದುಷ್ಟಪದ್ಧತಿಯನ್ನು ಯಾವ ಸುಧಾರಕರಿಂದಲೂ, ಸುಧಾರಣೆಗಳಿಂದಲೂ ಬುಡ ಸಮೇತ ಕಿತ್ತೊಗೆಯಲು ಸಾಧ್ಯವಾಗಲಿಲ್ಲ. ಆಳವಾಗಿ ಬೇರುಬಿಟ್ಟ ಜಾತಿಯಂಬ ವಿಷವೃಕ್ಷದಲ್ಲಿ ಬೆಲೆತೆತ್ತವರು ದಲಿತರು.

ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಕೇವಲ ಬೆರಳೆಣಿಕೆಯಷ್ಟು ಸಮಾಜ ಸುಧಾರಕರು ಮಾತ್ರ, ಅಂಬೇಡ್ಕರ್, ಮಹಾತ್ಮಗಾಂಧಿ, ಕೇರಳದ ನಾರಾಯಣರಾಯರು, ಮಹಾರಾಷ್ಟ್ರದ ಜೋತಿಭಾಪುಲೆ, ಲೋಹಿಯಾ, ಕಾರ್ಲಮಾರ್ಕ್ಸ್ ಮುಂತಾದ

ನಾಯಕರು ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ಹೋರಾಡಿದರೂ ಪರಿಣಾಮಕಾರಿಯಾಗಲಿಲ್ಲ. ಅಂಬೇಡ್ಕರ್ ಅವರು ಶೋಷಣೆಯ, ಅಸಮಾನತೆಯ ವಿರುದ್ಧ ಉಗ್ರ ಹೋರಾಟವನ್ನೇ ಪ್ರಾರಂಭಿಸಿದರು. ಭಾರತ ದೇಶಕ್ಕೆ ಸ್ವಾತಂತ್ರ್ಯ ಎಷ್ಟು ಮುಖ್ಯವಾಗಿತ್ತೋ, ಶತಶತಮಾನಗಳಿಂದ ದಬ್ಬಾಳಿಕೆಗೊಳಗಾದ ದಲಿತ ಸಮಾಜದ ಸ್ವಾತಂತ್ರವೂ ಅಷ್ಟೇ ಮುಖ್ಯವಾಗಿತ್ತು. ನಮಗೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳನ್ನು ದಾಟಿದರೂ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಸಂಖ್ಯೆ ಮಾತ್ರ ಇನ್ನೂ ಕಡಿಮೆಯಾಗಿಲ್ಲ. ಇಂತ ಸಂದರ್ಭಕ್ಕೆ ದಲಿತರ ಚಳುವಳಿಯ ಅನಿವಾರ್ಯವಾಗುತ್ತದೆ. ದಲಿತರ ಸ್ವಾಭಿಮಾನಕ್ಕೆ, ವ್ಯಕ್ತಿತ್ವಕ್ಕೆ ಧಕ್ಕೆಯಾದಾಗ ದಲಿತ ಸಮಾಜವೇ ಒಗ್ಗಟ್ಟಾಗಿ ಎದುರಿಸಬೇಕಾಗುತ್ತದೆ.

ಪ್ರತಿಯೊಂದು ಕ್ಷೇತ್ರಕ್ಕೂ ಅದರದ್ದೇ ಆದ ಪದಕೋಶ ಇರುವ ಹಾಗೆ ದಲಿತ ಹೋರಾಟ ವಲಯಕ್ಕೂ ಅದರದ್ದೇ ಆದಂತಹ ಪದಕೋಶವಿದೆ ಎಂಬುದನ್ನು ತಿಳಿಸುವುದು ಮತ್ತು ವಿವಿಧ ಆಯಾಮಗಳಲ್ಲಿ ಬಳಕೆಯಾಗುವ ವಿಧಾನಗಳನ್ನು ಅಧ್ಯಯನ ಮಾಡುವುದು ಈ ಅಧ್ಯಾಯದ ಮೂಲ ಉದ್ದೇಶವಾಗಿದೆ. ಈ ದಲಿತ ಹೋರಾಟದ ವಲಯದಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳು ವಿಶಿಷ್ಟವಾಗಿವೆ. ದಲಿತ ವರ್ಗವು ಸಾವಿರಾರು ವರ್ಷಗಳಿಂದ ಮೇಲ್‌ವರ್ಗದವರು ಅಥವಾ ದುಡಿಸಿಕೊಳ್ಳುವವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಅಸಮಾನತೆಯಿಂದ, ಶೋಷಣೆಯಿಂದ ಕಂಡಿರುವುದರ ವಿರುದ್ಧ ಬಂಡೆದ್ದಾಗ ಸೃಷ್ಟಿಯಾಗಿರುವ ಪದಗಳೇ ದಲಿತ ಹೋರಾಟದ ಪಾರಿಭಾಷಿಕ ಪದಗಳಾಗಿವೆ. **ಉದಾಹರಣೆಗೆ :** ದೌರ್ಜನ್ಯ, ದಬ್ಬಾಳಿಕೆ, ಪಟ್ಟಭದ್ರಹಿತಾಸಕ್ತಿ, ಗುಲಾಮರು, ಬಂಡವಾಳಶಾಹಿಗಳು, ಎಡಪಂಥೀಯರು, ದಲಿತ ವರ್ಗ, ಹಲ್ಲೆ, ಪುರೋಹಿತಶಾಹಿ, ಅವರ್ಣೀಯರು, ಅತ್ಯಾಚಾರ, ಕೆಳವರ್ಗ, ಬೆತ್ತಲೆ–ಅರೆಬೆತ್ತಲೆ, ಜೀತದಾಳು, ಜೀತಪದ್ಧತಿ, ಊರಿನಿಂದ ಬಹಿಷ್ಕಾರ, ಜೀತವಿಮುಕ್ತಿ, ದೇವಾಲಯ ಪ್ರವೇಶ ನಿಷಿದ್ಧ ಇತ್ಯಾದಿ ಪದಗಳು ಮೇಲ್‌ವರ್ಗದವರ ವಿರುದ್ಧ ಹೋರಾಟದಲ್ಲಿ ಕಂಡುಬರುವ ಪಾರಿಭಾಷಿಕ ಪದಗಳಾಗಿವೆ. ಈ ಪಾರಿಭಾಷಿಕ ಪದಗಳು ದಲಿತ ವರ್ಗದ ಅಥವಾ ಶೋಷಣೆಗೊಳಗಾದ ವರ್ಗದವರ ನೋವಿನ, ಯಾತನೆಯ, ಅವಮಾನ–ಅಪಮಾನ, ಹಿಂಸೆಯನ್ನು ಪ್ರತಿನಿಧಿಸುವ ಧ್ವನಿಗಳಾಗಿವೆ. ಈ ಧ್ವನಿಗಳಿಗೆ ಹೋರಾಟದಲ್ಲಿ ತನ್ನದೇ ಆದಂತಹ ಜೀವಂತಿಕೆಯಿದೆ. ದಲಿತರ ಹೋರಾಟದಲ್ಲಿ ಈ ಭಾಷಿಕ ರೂಪಗಳು ಜೀವಂತಿಕೆಯ ರೂಪ ಪಡೆದುಕೊಂಡು ಆವೇಶಪೂರಿತವಾಗಿ ಬಳಕೆಯಾಗುತ್ತವೆ.

ದಲಿತವರ್ಗದವರ ಪರವಾಗಿ, ದಲಿತನಾಗಿದ್ದುಕೊಂಡು ರಾಜಕೀಯವಾಗಿ ಮತ್ತು ರಾಜಕೀಯ ವಲಯದಲ್ಲಿ ರೂಪಗೊಂಡು ಬಳಸುವ ಪಾರಿಭಾಷಿಕ ಪದಗಳು ಗೌರವಾನ್ವಿತವಾಗಿಯು ಆದರ್ಶದ ಮೌಲ್ಯಗಳಿಂದ ಕೂಡಿರುತ್ತವೆ. ಇವುಗಳನ್ನು ರಾಜಕೀಯ ಪ್ರೇರಿತ ಪರಿಭಾಷೆ ಎಂದು ವರ್ಗೀಕರಿಸಬಹುದು. **ಉದಾಹರಣೆಗೆ :** ಸಮಾಜ ಸುಧಾರಕ, ದಲಿತೋದ್ಧಾರಕ, ದಲಿತರ ಕಣ್ಮಣಿ, ದಲಿತರ ಬದುಕಿನ ಧೃವತಾರೆ, ದೀನದಲಿತರ ಬಂಧು, ಹಿಂದುಳಿದ ಜನರ ನಾಯಕ, ಹರಿಜನ–ಗಿರಿಜನರ ಉದ್ಧಾರಕ, ನವಸಮಾಜ ಪ್ರವರ್ತಕ, ಮಾನವತಾವಾದಿ ಇತ್ಯಾದಿ ರಾಜಕೀಯ ವಲಯದಲ್ಲಿ ರಾಜಕಾರಣಿಗಳು ತಮ್ಮನ್ನು ಕುರಿತು ರೂಪಿಸಿಕೊಂಡ ಪಾರಿಭಾಷೆಗಳು ದಲಿತರನ್ನು ತಮ್ಮ ಕಡೆ, ತಮ್ಮ

ಪಕ್ಷದ ಕಡೆ ಗಮನ ಸೆಳೆದುಕೊಳ್ಳುವ ತಂತ್ರಗಾರಿಕೆ ಎಂಬುದು ಬಹಳ ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳು ಅಭಿವೃದ್ಧಿ ಕೆಲಸಗಳನ್ನು ತಮ್ಮ ಪಕ್ಷದ ಮೂಲ ಸಿದ್ಧಾಂತಗಳಿಗನುಗುಣವಾಗಿ ಪರಿಭಾಷೆಗಳನ್ನು ಬಳಸಿ ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಿರುವುದನ್ನು ನಾವು ಕಾಣುತ್ತೇವೆ.

ಪರಿಭಾಷೆಗಳು ಒಂದು ನಿರ್ಧಿಷ್ಟ ಆಶ್ರಯವನ್ನು ತಿಳಿಸಲು ಬಳಕೆ ಮಾಡಲಾಗುತ್ತದೆ. ಇಂತಹ ಒಂದು ನಿರ್ಧಿಷ್ಟ ವಲಯದಲ್ಲಿ ಬಳಕೆಯಲ್ಲಿರುವ ಪದ ಒಂದು ಅರ್ಥದಲ್ಲಿ ಬಳಕೆಯಲ್ಲಿದ್ದರೆ, ಅಂತಹ ಪದದ ಹಿಂದೆ ಅಥವಾ ಮುಂದೆ ಬೇರೊಂದು ವರ್ಗದ ಪದ ಬಂದು ಬೇರೊಂದು ಅರ್ಥದಲ್ಲಿ ಬಳಕೆಯಲ್ಲಿರುತ್ತದೆ. ಈ ಮಾದರಿಯ ಪರಿಭಾಷೆಯ ಪದಗಳ ಬಳಕೆ ಆಯಾ ವಲಯದವರಿಗೆ ಬೇಗ ಅರ್ಥವಾದರೆ, ಜನಸಾಮಾನ್ಯರಿಗೆ ತಿಳಿಯುವುದಿಲ್ಲ. ಆದರೂ ನಮಗೆ ಗೊತ್ತಾಗದಂತೆ ಆಯಾ ಪಾರಿಭಾಷಿಕ ಪದಗಳನ್ನು ಬಳಸುವುದು ಕಂಡುಬರುತ್ತದೆ.

ಹೋರಾಟದಲ್ಲಿ ದೌರ್ಜನ್ಯ, ದಬ್ಬಾಳಿಕೆ, ಹಲ್ಲೆ ಕೊಲೆ, ಸಜೀವ ದಹನ, ಪ್ರತಿಭಟನೆ, ಚಳುವಳಿ, ಹೋರಾಟ, ವರ್ಗ, ಜಾತಿ ನಿಂದನೆ, ಅತ್ಯಾಚಾರ ಇತ್ಯಾದಿ ಪದಗಳು ಸ್ವತಂತ್ರವಾಗಿ ಬಳಕೆಯಲ್ಲಿವೆ. ಆದರೆ ಈ ಪದಗಳ ಆದಿ ಪದಕ್ಕೆ 'ದಲಿತ' ಅಥವಾ 'ದಲಿತರ' ಎಂಬ ಪದಬಂದು ಸೇರಿಕೊಂಡು ದಲಿತರ ಮೇಲೆ ದೌರ್ಜನ್ಯ, ದಲಿತರ ಮೇಲೆ ದಬ್ಬಾಳಿಕೆ, ದಲಿತರ ಮೇಲೆ ಹಲ್ಲೆ, ದಲಿತರ ಕೊಲೆ, ದಲಿತರ ಸಜೀವ ದಹನ, ದಲಿತರ ಪ್ರತಿಭಟನೆ, ದಲಿತರ ಚಳುವಳಿ, ದಲಿತರ ಹೋರಾಟ, ದಲಿತ ವರ್ಗ, ದಲಿತರ ಜಾತಿ ನಿಂದನೆ, ದಲಿತ ಮಹಿಳೆಯ ಮೇಲೆ ಅತ್ಯಾಚಾರ ಹೀಗೆ ದಲಿತ ಪರಿಭಾಷೆಗಳಾಗಿ ಬಳಕೆಯಲ್ಲಿವೆ. ಇದು ಹೇಗೆ ಸಾಧ್ಯವೆಂದರೆ ಭಾಷೆಯಿಂದ ಮಾತ್ರ ಸಾಧ್ಯ. ಭಾಷೆಗೆ 'ಉತ್ಪಾದಕತೆ' ಎಂಬ ಒಂದು ಗುಣವಿದೆ. ಅದು ಒಂದು ಮೂಲ ಪದದಿಂದ ಬೇರೆ ಬೇರೆ ಪದಗಳನ್ನು ಸೃಷ್ಟಿಸುವ ಕ್ರಿಯೆ ಇರುತ್ತದೆ. ಅಂತಹ ಸೃಷ್ಟಿಸುವ ಕ್ರಿಯೆಯನ್ನು ಇಲ್ಲಿ 'ದಲಿತ' ಎಂಬ ಪದ ಪಡೆದುಕೊಂಡಿದೆ.

ದಲಿತ ಅಥವಾ ಪರಂಪರಾಗತವಾಗಿ ಶೋಷಣೆಗೊಳಗಾದ, ಹಿಂದುಳಿದ ಜನತೆಯ ಅಭಿವೃದ್ಧಿಗಾಗಿಯೇ ಬಳಸುವ ರಾಜಕೀಯ ಪರಿಭಾಷೆಗಳು ರೂಪಗೊಳ್ಳುತ್ತಲೇ ಇವೆ. ಇವು ಈ ವರ್ಗದ ಜನತೆಯ ಬದುಕಿನ ಆಶಾಕಿರಣಗಳಾಗಿವೆ ಎಂದರೆ ತಪ್ಪಾಗಲಾರವು. **ಉದಾಹರಣೆಗೆ** : ಕೂಲಿಗಾಗಿ ಕಾಳು ಯೋಜನೆ, ಭಾಗ್ಯಜ್ಯೋತಿ, ಆಶ್ರಯ ಯೋಜನೆ, ಅಸ್ಪೃಶ್ಯತೆಯ ನಿರ್ಮೂಲನೆ, ಸಮಾಜ ಕಲ್ಯಾಣ ಅಭಿವೃದ್ಧಿ ಯೋಜನೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಯೋಜನೆ, ಮೀಸಲಾತಿ, ಒಳಮೀಸಲಾತಿ, ಸ್ತ್ರೀ ಸಬಲೀಕರಣ, ಕೋಮುಸೌಹಾರ್ದ, ಜಾತ್ಯಾತೀತತೆ ಇತ್ಯಾದಿ ಇದೇ ರೀತಿ ದಲಿತರ ಅಭಿವೃದ್ಧಿ ಸಂಕೇತದ ಪದಗಳು ಬಳಕೆಯಲ್ಲಿವೆ.

ದಲಿತರ ಪರವಾಗಿ ಹುಟ್ಟಿಕೊಂಡು ಚಳುವಳಿಗಳು, ಸಂಘ ಸಂಸ್ಥೆಗಳು ಕೂಡ ಅನೇಕ ಪರಿಭಾಷೆಗಳನ್ನು ರೂಪಿಸಿಕೊಂಡಿರುವುದನ್ನು ನಾವು ನೋಡಬಹುದು. ಈ ಸಂಘ ಸಂಸ್ಥೆಗಳು ಅಥವಾ ಚಳುವಳಿಗಳು ದಲಿತರ ಜೀವನಾಡಿಗಳಂತೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಪಾರಿಭಾಷಿಕ ಪದಗಳು ಇಂದು ಬಳಕೆಯಲ್ಲಿವೆ.

ಉದಾಹರಣೆಗೆ : ಅಂಬೇಡ್ಕರ್ ಯುವಕ ಸಂಘ, ದಲಿತ ಸಂಘರ್ಷ ಸಮಿತಿ, ಹರಿಜನ ಸೇವಕ ಸಂಘ, ಆತ್ಮ ರಕ್ಷಣಾಪಡೆ, ಶೋಷಿತ ವರ್ಗದ ಸಮಾವೇಶ, ಕೋಮುವಾದಿ ಕರಾಳ ಘಟನೆ, ದಲಿತರ ಕಗ್ಗೊಲೆ, ಇಂಡಿಯನ್ ಲೇಬರ್ ಪಾರ್ಟಿ, ದಲಿತ ಮಹಿಳಾ ಒಕ್ಕೂಟ, ದಲಿತ ಕಲಾ ಮಂಡಳಿ, ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಲೋಹಿಯಾವಾದ, ಗಾಂಧಿವಾದ, ದಲಿತತ್ವ, ಸಾಮಾಜಿಕ ಸ್ವಾತಂತ್ರ ಇತ್ಯಾದಿ ಪರಿಭಾಷೆಗಳನ್ನು ಬಳಸುವುದು ಶೋಷಣೆ ಮಾಡುವವರ, ಪರಂಪರಾಗತವಾಗಿ ಯಜಮಾನ್ಯ ಪ್ರಭುತ್ವವನ್ನು ಸಾಧಿಸುವವರ ವಿರುದ್ಧ ಹೋರಾಡುವ ಸ್ವಾಭಿಮಾನದ ಸಂಕೇತಗಳು ಪರಿಭಾಷೆಯಾಗಿ ಬಳಕೆಯಾಗುತ್ತಿವೆ.

ಸಾಹಿತಿಗಳು, ಬುದ್ಧಿಜೀವಿಗಳು, ಹೋರಾಟಗಾರರು, ಜನಪರ ಕಾಳಜಿವುಳ್ಳ ಸಮಾಜ ಸೇವಕರು ಕೂಡಾ ತಮ್ಮದೇ ಆದ ನಿಲುವುಗಳ ಹಿನ್ನೆಲೆಯಲ್ಲಿ ಅಂತವರನ್ನು ಒಂದು ನಿರ್ಧಿಷ್ಟ ಸಾಮಾಜಿಕ ವರ್ಗದಿಂದ ನೋಡುವ ಪರಿಪಾಠವಿದೆ. **ಉದಾಹರಣೆಗೆ** : ಬಂಡಾಯ ಸಾಹಿತಿ, ದಲಿತ ಸಾಹಿತಿ, ಯಡಪಂಥೀಯವರು, ದಲಿತ ಬಂಡಾಯ ಸಮಾಜ ಕಾರ್ಯಕರ್ತ, ಜನಪರ ಚಿಂತಕ, ಪ್ರಗತಿಪರ ಚಿಂತಕ, ಅಸ್ಪೃಶ್ಯತೆಯ ವಿಮೋಚನೆಗಾಗಿ ಹೋರಾಟ ಇತ್ಯಾದಿ ಪರಿಭಾಷೆಗಳನ್ನು ನೋಡಬಹುದು. ಪ್ರಾಚೀನ ಕಾಲದಿಂದಲೂ ಕೂಡ ದಲಿತವರ್ಗದವರನ್ನು ಪರಂಪರಾಗತವಾಗಿ ಮೇಲ್ವರ್ಗದವರು ಅವರ ವೃತ್ತಿಯನ್ನು ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಿ ಕೆಲವು ಪರಿಭಾಷೆಗಳನ್ನು ಬಳಕೆ ಮಾಡಿ ಸಂಬೋಧನೆ ಮಾಡಲಾಗುತ್ತಿದೆ. **ಉದಾಹರಣೆಗೆ** : ಮಾದ್ರು, ಮಾದಿಗರು, ಹೊಲೆಮಾದಿಗರು, ಪಂಚಮರು, ಅವರ್ಣಿಯರು, ಅಂತ್ಯಜರು, ಕೇರಿಜನ, ಹೊಲ್ಯಾರು, ಹೊಲಸು ತಿನ್ನೋರು, ಸತ್ತದನ ತಿನ್ನೋರು, ಹೊಲಗೇರಿಯವನು, ಚಪ್ಲಿ ಮಾಡುವನು, ಕೆರಾವಲಿಯವನು, ಯಕ್ಕಡ ಮಾಡವನು, ಹೇಲು ಬಳಿಯವನು, ದನ ತಿನ್ನುವರು, ಕಟುಗರು, ಕೀಳು ಜನ, ಸಣ್ಣಜನ, ಹೀನರು, ಅಸ್ಪೃಶ್ಯರು, ಮಲಹೋರುವರು, ಹಲಿಗಿ ಬಡಿಯೋರು, ತಮಟೆ ಬಡಿಯೋರು, ಸೂತಕದವರು, ಮುಟ್ಟುಚಟ್ಟುನವರು, ಮೈಲ್ಗಿಯವರು, ಎಡಗೈನವರು, ಹೇಲುತಿಂದು ಹೆಂಡಿ ಆಣೆ ಮಾಡುವ ಜನ ಇತ್ಯಾದಿ ಪಾರಿಭಾಷಿಕ ಪದಗಳನ್ನು ಮೇಲ್ವರ್ಗದವರು ಕೆಳವರ್ಗದ ದಲಿತರು ಮಾಡುವ ವೃತ್ತಿಯನ್ನು ಸಾಮಾಜಿಕ ವ್ಯವಸ್ಥೆಯನ್ನಾಧರಿಸಿ ಬೈಗುಳ ಅರ್ಥದಲ್ಲಿ ಕರೆಯುತ್ತಿದ್ದರು. ಈ ಪಾರಿಭಾಷಿಕ ಪದಗಳು ದಲಿತವರ್ಗದವರಿಗೆ ಮಾತ್ರ ಮೀಸಲಾಗಿವೆ.

ಚಪ್ಲಿ ಮಾಡುವನು, ಕೆರಾವಲಿಯವನು, ಯಕ್ಕಡ ಮಾಡವನು ಈ ಪಾರಿಭಾಷಿಕ ಪದಗಳು ವೃತ್ತಿಯನ್ನಾಧರಿಸಿ ರಚಿತವಾದರೂ ಪ್ರಾದೇಶಿಕ ಭಿನ್ನತೆಯ ಅರ್ಥಗಳಲ್ಲಿ ಬಳಕೆಯಾಗುವುದು ಕಂಡು ಬರುತ್ತದೆ. ಅಂತ್ಯಜರು, ಕೇರಿಜನ, ಕೀಳುಜನ, ಸಣ್ಣಜನ, ಹೀನರು, ಹಲಿಗಿ ಬಡಿಯೋರು, ಸೂತಕದವರು, ಮುಟುಚಟ್ಟುನವರು, ಮೈಲಿಗೆಯವರು, ಎಡಗೈನವರು ಈ ಪಾರಿಭಾಷಿಕ ಪದಗಳು ಸಾವಿರಾರು ವರುಷಗಳಿಂದ ಮೇಲ್ವರ್ಗದವರಿಂದ ತುಳಿತಕ್ಕೊಳಗಾಗಿ ಶೋಷಣೆಯನ್ನು ಅನುಭವಿಸುವ ಹಿನ್ನೆಲೆಯಲ್ಲಿ ಮೇಲ್ವರ್ಗದವರು ಬಳಸುತ್ತಿದ್ದ ಪಾರಿಭಾಷಿಕ ಪದಗಳಾಗಿವೆ. ಎಡಗೈನೋರು ಮತ್ತು ಬಲಗೈನೋರು ಎನ್ನುವ ಪದಗಳು ಕೀಳು ಮತ್ತು ಮೇಲ್‌ಜಾತಿಗಳನ್ನು ಧ್ವನಿಸುತ್ತವೆ. ಎಡಗೈ ಮತ್ತು

ಬಲಗೈ ಪದಗಳು ಮನುಷ್ಯನ ದೇಹದ ಅಂಗಗಳನ್ನು ಸೂಚಿಸಿದರೂ, ಅವುಗಳನ್ನು ಒಂದು ನಿರ್ದಿಷ್ಟ ಸಾಮಾಜಿಕ ವರ್ಗಗಳಿಗೆ ಅನ್ವಯಿಸಿ ಬಳಕೆ ಮಾಡುತ್ತಿರುವುದು ನಿರ್ದಿಷ್ಟ ಪರಿಭಾಷೆಗಳಾಗಿ ಬಳಕೆಯಲ್ಲಿವೆ.

ದಲಿತಹೋರಾಟದ ಪರಿಭಾಷೆ ಸೂಚಕ ಪದಗಳು :

ರಾಜಕೀಯವಾಗಿ ರೂಪಗೊಂಡ ಪರಿಭಾಷೆಗಳು :

ದೀನದಲಿತರ ಬಂಧು
ಹಿಂದುಳಿದ ಜನರ ನೇತಾರ ಅಥವಾ ನಾಯಕ
ಹರಿಜನ ಗಿರಿಜನರ ಉದ್ಧಾರಕ
ನವಸಮಾಜ ಪ್ರವರ್ತಕ ಅಥವಾ ನಿರ್ಮಾಪಕ
ಸಮಾಜ ಸುಧಾರಕ
ಮಾನವತಾವಾದಿ
ದಲಿತೋದ್ಧಾರಕ
ದಲಿತರ ಕಣ್ಮಣಿ
ದಲಿತರ ದೃವತಾರೆ

ದಲಿತ ಅಥವಾ ಹಿಂದುಳಿದ ಜನರ ಏಳ್ಗೆಗಾಗಿ ಬಳಸುವ ಪರಿಭಾಷೆಗಳು :

ಭಾಗ್ಯಜ್ಯೋತಿ
ಆಶ್ರಯ ಯೋಜನೆ
ಕೂಲಿಗಾಗಿ ಕಾಳು
ಮೀಸಲಾತಿ
ಒಳಮೀಸಲಾತಿ
ಅಸ್ಪೃಶ್ಯತೆಯ ನಿರ್ಮೂಲನೆ
ಸಮಾಜ ಕಲ್ಯಾಣ ಯೋಜನೆ
ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ನಿಧಿ ಮತ್ತು ಯೋಜನೆ
ಸಾಮಾಜಿಕ ನ್ಯಾಯ
ಸಮಾನತೆ
ಸ್ತ್ರೀ ಸಬಲೀಕರಣ
ಜಾತ್ಯಾತೀತತೆ
ಕೋಮುಸಾಮರಸ್ಯ / ಕೋಮುಸೌಹಾರ್ದ

ಸಾಹಿತಿಗಳು ಬುದ್ಧಿಜೀವಿಗಳು ಜನಪರ ಕಾಳಜಿ ಇರುವ ಹೋರಾಟಗಾರರು ಬಳಸಿರುವ ಪರಿಭಾಷೆಗಳು :

ದಲಿತ ಸಾಹಿತಿ
ಬಂಡಾಯ ಸಾಹಿತಿ
ದಲಿತ ಬಂಡಾಯ ಸಾಹಿತಿ
ಎಡಪಂಥೀಯ ಸಾಹಿತಿ
ಸಮಾಜ ಕಾರ್ಯಕರ್ತ

ದಲಿತ ಬಂಡಾಯ
ರ್‍ಯಾಡಿಕಲ್ ಚಳುವಳಿ
ಜನಪರ ಚಿಂತಕ
ಪ್ರಗತಿಪರ ಚಿಂತಕ
ಅಸ್ಪೃಶ್ಯತೆಯ ವಿಮೋಚನೆಗಾಗಿ ಹೋರಾಟ

ಧಾರ್ಮಿಕ ವಲಯದಲ್ಲಿ ಬಳಕೆಯಾಗುವ ಪರಿಭಾಷೆಗಳು :

ಮಡಿ, ಮೈಲಿಗೆ, ದೇವದಾಸಿಯರು,
ಹೋಮ, ಅಗ್ನಿ, ತೀರ್ಥ, ಪ್ರಸಾದ
ಧೂಪ, ದೀಪ, ಮಂಗಳಾರತಿ, ಅಭಿಷೇಕ.

ದಲಿತರನ್ನು ಗುರುತಿಸುವ ಸರಕಾರಿ ಪರಿಭಾಷೆಗಳು :

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ,
ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಜಾಂಬವ,
ಚಲವಾದಿ, ಅಸ್ಪೃಶ್ಯರು.

ದಲಿತ ಸಂಘ-ಸಂಸ್ಥೆಗಳು ಬಳಸುವ ಪರಿಭಾಷೆಗಳು :

ದಲಿತ ಸಂಘರ್ಷ ಸಮಿತಿ
ಭಾರತೀಯ ಭೀಮಸೇನೆ
ದಲಿತ ಜನ ಜಾಗೃತಿ
ಪ್ರಜಾಲೋಂದನ
ಹರಿಜನ ಸೇವಕ ಸಂಘ
ಅಂಬೇಡ್ಕರ್ ಯುವಕ ಸಂಘ ಅಥವಾ ಮಿತ್ರ ಮಂಡಳಿ
ದಲಿತ ಸ್ಥಾನ
ಆತ್ಮ ರಕ್ಷಣಾ ಪಡೆ
ಶೋಷಿತ ವರ್ಗದ ಸಮಾವೇಶ/ಸಮ್ಮೇಳನ/ಆಂದೋಲನ
ಕೋಮುವಾದಿ ಕರಾಳ ಘಟನೆ
ದಲಿತರ ಕಗ್ಗೊಲೆ
ಸಾಮಾಜಿಕ ಸ್ವಾತಂತ್ರ್ಯ
ಅವೈದಿಕ ಚಿಂತನೆ
ಇಂಡಿಯನ್ ಲೇಬರ್ ಪಾರ್ಟಿ
ಬಹಿಷ್ಕೃತ ಭಾರತಿ ಹಿತಕಾರಣಿ ಸಭಾ
ದಲಿತ ಕಾರ್ಮಿಕ ಸಂಘ
ವಾಮಪಂಥೀಯರ ಸಂಘಟನೆ
ಸಾಮಾಜಿಕ ಬದ್ಧತೆ
ಅಂಬೇಡ್ಕರವಾದ
ಲೋಹಿಯಾವಾದ

ದಲಿತತತ್ವ
ದಲಿತ ವಿದ್ಯಾರ್ಥಿ ಒಕ್ಕೂಟ
ದಲಿತ ಕಲಾ ಮಂಡಳಿ
ದಲಿತ ಮಹಿಳಾ ಒಕ್ಕೂಟ
ಸಾಂಸ್ಕೃತಿಕ ಮನ್ನಣೆ

ದಲಿತರ ಹೋರಾಟ ಅಥವಾ ಚಳುವಳಿಯ ಹಿನ್ನೆಲೆಯಲ್ಲಿ ರೂಪಗೊಂಡ ಪರಿಭಾಷೆಗಳು :

ಸಂಘಟನೆ	ಹೋರಾಟ
ಬಂಡ್ವಾಳಶಾಹಿ	ಪುರೋಹಿತಶಾಹಿ
ಸಾಮ್ರಾಜ್ಯಶಾಹಿ	ಗುಲಾಮಗಿರಿ
ದಬ್ಬಾಳಿಕೆ	ದೌರ್ಜನ್ಯ
ಶೋಷಣೆ	ಅಜೆಂಡಾ
ಜಾಗತೀಕರಣ	ಉದಾರೀಕರಣ
ಖಾಸಗೀಕರಣ	ಬಹಿಷ್ಕಾರ
ಬ್ರಾಹ್ಮಣಶಾಹಿ	ವೈಧಿಕಶಾಹಿ
ರ್‍ಯಾಲಿ	ಜಾಥ
ಸಮಾಜವಾದ	ಸಮತಾವಾದ
ಶೋಷಿತವರ್ಗ	ದಲಿತವರ್ಗ
ಶ್ರಮಿಕವರ್ಗ	ಅಸಮಾನತೆ
ದಲಿತ ಚಳುವಳಿ	ದಲಿತ ಬಂಡಾಯ ಚಳುವಳಿ
ಅಧಿಕಾರ ಗದ್ದುಗೆ	ಪಟ್ಟಭದ್ರಹಿತಾಸಕ್ತಿಗಳು
ಹಸಿವು	ಕೆಳವರ್ಗ
ಬೆತ್ತಲೆ ಮೆರವಣಿಗೆ	ಹಲ್ಲೆ
ಜಾತಿನಿಂದನೆ	ಅತ್ಯಾಚಾರ
ದಲಿತರ ಕಗ್ಗೊಲೆ	ಊಳಿಗಮಾನ್ಯ ಪದ್ಧತಿ
ಅಸ್ಪೃಶ್ಯತೆಯ ವಿಮೋಚನೆಗಾಗಿ ಹೋರಾಟ	

ಈ ಎಲ್ಲಾ ಪರಿಭಾಷೆಗಳನ್ನು ಬಳಸುವುದು ಶೋಷಿತರ, ಅಸಮಾನತೆಗೊಳಗಾದವರ ಸಾಂಸ್ಕೃತಿಕವಾಗಿ ಯಜಮಾನ್ಯ ಪ್ರಾಬಲ್ಯವನ್ನು ಸಾಧಿಸುವವರ ವಿರುದ್ಧ ಹೋರಾಡುವ ಸ್ವಾಭಿಮಾನದ ಪ್ರತಿಮೆ ಅಥವಾ ಸಂಕೇತಗಳು ಪರಿಭಾಷೆಯಾಗಿ ಮೂಡಿಬರುತ್ತವೆ.

ದಲಿತ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪಾರಿಭಾಷಿಕ ಪದಗಳನ್ನು ವಿವರಿಸಲಾಗಿದೆ.

೧) ಮಾದ್ರುಗೇರಿ>ಹರಿಜನಕೇರಿ>ಅಂಬೇಡ್ಕರ ನಗರ>ಅಂಬೇಡ್ಕರ ಕಾಲೋನಿ>ಅಂಬೇಡ್ಕರ ಬಡಾವಣೆ.

ಮಾದ್ರು+ಕೇರಿ = ಮಾದ್ರುಗೇರಿ. ಮಾದ್ರು ಎಂದರೆ ಮಾದಿಗ ಜನಾಂಗ ಅಥವಾ ಮಾದಿಗ ಸಮುದಾಯ ಎಂದರ್ಥ. ಶತಶತಮಾನಗಳಿಂದ ತುಳಿತಕ್ಕೆ, ಶೋಷಣೆಗೊಳಗಾದ ಜನಾಂಗವು ವಾಸಿಸುವ ಸ್ಥಳವನ್ನು ಕೇರಿ ಎಂದು ಕರೆಯುತ್ತಿದ್ದರು. ಅಂತೆಯೆ ಇವರನ್ನು ಕೇರಿ ಜನ ಎಂತಲೂ ಕರೆಯುವರು.

ಸ್ವಾತಂತ್ರ್ಯ ಪೂರ್ವದ ಸಂದರ್ಭದಲ್ಲಿ ಮಾದ್ರುಗೇರಿ ಎನ್ನುವ ಪದ ಹೆಚ್ಚು ಬಳಕೆಯಲ್ಲಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ನಾಯಕತ್ವವಹಿಸಿಕೊಂಡ ನಾಯಕರಲ್ಲೊಬ್ಬರಾದ ಗಾಂಧೀಜಿಯವರು ಮಾದ್ರುಗೇರಿ ಎಂಬುದನ್ನು ಹರಿಜನಕೇರಿ ಎಂದು ಕರೆದರು. ೧೯೭೦ ರ ದಶಕದಲ್ಲಿ ದಲಿತ ಚಳುವಳಿ ಹುಟ್ಟಿಕೊಂಡಿತು. ಈ ಚಳುವಳಿಯ ಹಿನ್ನೆಲೆಯಲ್ಲಿ ಮಾದಿಗರನ್ನು ದಲಿತರು ಎಂದು ಕರೆದರೆ ಅವರು ವಾಸಿಸುವ ಸ್ಥಳವನ್ನು ದಲಿತರ ಕೇರಿ ಎಂದು ಕರೆಯಲಾಯಿತು. ದಲಿತವರ್ಗದವರಿಗೆ ಹಕ್ಕುಬಾಧ್ಯತೆಗಳನ್ನು, ನ್ಯಾಯವನ್ನು, ಶೋಷಣೆಯಿಂದ ಮುಕ್ತರನ್ನಾಗಿ ಮಾಡಲು ಮುಂದಾದ ನಾಯಕ ಅಂಬೇಡ್ಕರ. ಈ ದಲಿತವರ್ಗದ ನೇತಾರನಾಗಿದ್ದುದರ ಪರಿಣಾಮವಾಗಿ ಮಾದ್ರುಗೇರಿ, ಹರಿಜನಕೇರಿ ಪದಗಳು ಹೋಗಿ ಅಂಬೇಡ್ಕರ ನಗರ ಎಂದು ಬದಲಾಗಿದೆ. ಇಂದು ಪ್ರತಿಯೊಂದು ಹಳ್ಳಿಗಳಲ್ಲಿ ಹರಿಜನಕೇರಿಗೆ ಅಂಬೇಡ್ಕರ ನಗರ ಎಂಬ ನಾಮಫಲಕಗಳನ್ನು ಹಾಕಲಾಗಿದೆ. ರಚನೆಯಲ್ಲಿ ಅಂಬೇಡ್ಕರ ನಗರ ಎಂದಿದ್ದರೆ ಬಳಕೆಯಲ್ಲಿ ಮಾದ್ರುಗೇರಿ, ಕೇರಿ ಎಂದು ಕರೆಯಲಾಗುತ್ತದೆ. ಇನ್ನು ದೊಡ್ಡ ದೊಡ್ಡ ನಗರ, ಪಟ್ಟಣಗಳಲ್ಲಿ ಅಂಬೇಡ್ಕರ ಕಾಲೋನಿ, ಅಂಬೇಡ್ಕರ ಬಡಾವಣೆಗಳು ಹುಟ್ಟಿಕೊಂಡಿವೆ. ದಲಿತವರ್ಗದ ನೇತಾರರಾದ ಅಂಬೇಡ್ಕರ ಹೆಸರಿನಲ್ಲಿ ಅಂಬೇಡ್ಕರ ನಗರ, ಅಂಬೇಡ್ಕರ ಕಾಲೋನಿ, ಅಂಬೇಡ್ಕರ ಬಡಾವಣೆಗಳು ಹುಟ್ಟಿಕೊಂಡಿವೆ. ಇದೇ ಹಿನ್ನೆಲೆಯಲ್ಲಿ ಅಂಬೇಡ್ಕರ ನಗರ ಕಾಲೋನಿಗಳಲ್ಲಿ ಅಂಬೇಡ್ಕರ ಯುವಕ ಸಂಘ, ಅಂಬೇಡ್ಕರ ಕಲಾ ಮಂಡಳಿಗಳು ಹುಟ್ಟಿಕೊಂಡಿವೆ.

೨) ಬಹಿಷ್ಕಾರ :

ಧಾರ್ಮಿಕ ದೃಷ್ಟಿಯಿಂದ ತಪ್ಪು ಮಾಡಿದ ವ್ಯಕ್ತಿಯನ್ನು ಜಾತಿ, ದೇಶ, ರಾಜ್ಯ, ಸಮಾಜ ಮುಂತಾದವುಗಳಿಂದ ದೂರವಿಡುವಿಕೆ, ಹೊರಹಾಕುವಿಕೆಗೆ ಬಹಿಷ್ಕಾರ ಎನ್ನುತ್ತೇವೆ. ಆದರೆ ಈ ಪದ ದಲಿತ ಚಳುವಳಿಯಲ್ಲಿ ಸಾವಿರಾರು ವರ್ಷಗಳಿಂದ ಶೋಷಣೆಗೊಳಗಾದ ಕೆಳವರ್ಗದ ದಲಿತರಿಗೆ ಸಾರ್ವಜನಿಕ ಕೆರೆ, ಬಾವಿಗಳ ನೀರಿಗೆ ಬಹಿಷ್ಕಾರ, ದಲಿತೇತರ ದೇವಸ್ಥಾನಗಳಿಗೆ ಬಹಿಷ್ಕಾರ, ನ್ಯಾಯವನ್ನು ಕೇಳಲು ಹೋದಾಗ ಊರಿನಿಂದ ಬಹಿಷ್ಕಾರ, ಕೂಲಿಕೆಲಸಗಳಿಗೆ ಬಹಿಷ್ಕಾರ ಹಾಕಿರುವುದನ್ನು ನಾವು ನೋಡಿದ್ದೇವೆ. ಈ ರೀತಿ ಬಹಿಷ್ಕಾರಕ್ಕೊಳಗಾದ ದಲಿತರು ಒಗ್ಗಟ್ಟಾಗಿ ಧರಣಿ ನಿರತರಾದಾಗ ತಮಗಾದ ಅನ್ಯಾಯದ ವಿರುದ್ಧ ಸಾಮಾಜಿಕ ನ್ಯಾಯ ಕೇಳುವ ಸಂದರ್ಭದಲ್ಲಿ ಈ ಪದ ಬಳಕೆಯಾಗಿದೆ.

೩) ಅಸ್ಪೃಶ್ಯರು :

ಕೆಲವು ಸಾಮಾಜಿಕ ವರ್ಗಗಳ ಸಂಸರ್ಗದಿಂದ ದೂರಮಾಡಿದ್ದ ಒಂದು ಜನವರ್ಗಕ್ಕೆ ಅಸ್ಪೃಶ್ಯರೆಂದು ಕರೆಯುವರು. ಇಂಥ ಜನವರ್ಗಕ್ಕೆ ಸೇರಿದ ವ್ಯಕ್ತಿಯನ್ನು ಅಸ್ಪೃಶ್ಯನೆಂದು, ಈ ಸಮುದಾಯವನ್ನು ಅಸ್ಪೃಶ್ಯರೆಂದು ಕರೆಯುವರು. ಇವರು ಊರ ಹೊರಗೆ ತಳ್ಳಲ್ಪಟ್ಟ ಸ್ವಪಚರು, ಚಾಂಡಾಲರು, ದಸ್ಯುಗಳು, ಅಂತೆಜರು, ಅಸ್ಪೃಶ್ಯರು. ಸ್ಪೃಶ್ಯರು ಮುಟ್ಟಿಸಿಕೊಳ್ಳುವವರು. ಅಸ್ಪೃಶ್ಯರು ಮುಟ್ಟಿಸಿಕೊಳ್ಳಬಾರದವರು. ಶತಶತಮಾನಗಳಿಂದ ಊರ ಹೊರಗೆ ಕೇರಿಯಲ್ಲಿ ವಾಸಿಸುತ್ತಿರುವವರೆಂತಲೂ ಹೇಳಬಹುದು.

೪) ದಲಿತ ಸಾಹಿತಿ :

ದಮನಕ್ಕೊಳಗಾದ, ಶೋಷಣೆಗೊಳಗಾದ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವನಾಗಿದ್ದು, ಅವರ ನೋವಿನ, ಯಾತನೆಯ ಅಂತರಂಗದ ತುಮುಲಗಳನ್ನು ಬರಹದ ರೂಪದಲ್ಲಿ ಹೊರಹಾಕುವವನನ್ನು ದಲಿತ ಸಾಹಿತಿ, ಕವಿ ಎಂದು ಕರೆಯುತ್ತೇವೆ. ೧೯೭೦ ರ ದಶಕದಲ್ಲಿ ಹುಟ್ಟಿಕೊಂಡ ಚಳುವಳಿಯೆ ದಲಿತ ಚಳುವಳಿ. ಈ ಚಳುವಳಿಯಿಂದಲೇ ದಲಿತ ಸಾಹಿತಿಗಳು ಕಂಡು ಬರುತ್ತಾರೆ. ಡಾ॥ ಸಿದ್ದಲಿಂಗಯ್ಯ ದಲಿತ ಸಾಹಿತಿ/ಕವಿ ಎಂದೇ ಚಿರಪರಿಚಿತರಾಗಿದ್ದಾರೆ. ಈ ದಲಿತ ಚಳುವಳಿಯಿಂದ ದಲಿತೇತರ ಕವಿಗಳು ಕಂಡುಬರುತ್ತಾರೆ. ದಲಿತರ ಬಗ್ಗೆ ಶೋಷಣೆ, ಅಸಮಾನತೆ ಮುಂತಾದ ಕ್ರೂರ ಕೃತ್ಯಗಳನ್ನು ಕಿವಿಯಾರೆ ಕೇಳಿಯೋ, ಕಣ್ಣಾರೆ ನೋಡಿಯೋ, ಓದಿಯೋ ಅವರ ಪರ ಸಾಹಿತ್ಯವನ್ನು ರಚಿಸುವವರನ್ನು ನಾವು ದಲಿತೇತರ ಕವಿ ಎಂದು ಕರೆಯುತ್ತೇವೆ.

೫) ದಲಿತ ಚಳುವಳಿ :

೧೯೭೦ ರ ದಶಕದಲ್ಲಿ ದಲಿತರು ಆರಂಭಿಸಿದ ಚಳುವಳಿಯೇ ದಲಿತ ಚಳುವಳಿಯಾಗಿದೆ. ಈ ಸಮಾಜದ ಜಾತಿ ವ್ಯವಸ್ಥೆಯ ವಿರುದ್ಧ, ವರ್ಗ ವ್ಯವಸ್ಥೆಯ ವಿರುದ್ಧ ಬಂಡೆದ್ದ ಈ ಚಳುವಳಿ ಜನಸಾಮಾನ್ಯರ ಬದುಕನ್ನೇ ಮುಖ್ಯ ವಸ್ತುವನ್ನಾಗಿ ಮಾಡಿಕೊಂಡಿದೆ. ಈ ಚಳುವಳಿಯು ಹೋರಾಟದ ಹಾದಿಯಲ್ಲಿ ವಿದ್ಯಾರ್ಥಿಗಳನ್ನು, ನೌಕರರನ್ನು ಸಂಘಟಿಸುತ್ತ ಬೇರೆ ಬೇರೆ ಒಕ್ಕೂಟಗಳನ್ನು ರಚಿಸಿತು. ಅವು ದಸಂಸ ನಿರ್ದೇಶನದಲ್ಲಿ ಸಭೆ, ಸಮ್ಮೇಳನ, ತರಬೇತಿ ಶಿಬಿರ ಇತ್ಯಾದಿ ನಡೆಸಿದವು. ಹೋರಾಟಕ್ಕೆ ಅಣಿಗೊಳಿಸುತ್ತ ಹೋರಾಟಕ್ಕಿಳಿಸಿದ ತಂತ್ರ ದಸಂಸದಾಗಿತ್ತು. ದಲಿತ ಚಳುವಳಿಯಲ್ಲಿ ಯುವ ಬರಹಗಾರ ತಮ್ಮ ಶೋಷಣೆಯ ಹಿನ್ನೆಲೆ, ತಮ್ಮ ಒಳನೋಟಗಳನ್ನು ಕಾಲದ ಅನುಭವಗಳನ್ನು ದಾಖಲಿಸಿದರು. ಅವರ ಸಾಮಾಜಿಕ ವಾಸ್ತವತೆ ಹೆಚ್ಚು ವೈಚಾರಿಕತೆಯನ್ನು ಪಡೆಯುವಲ್ಲಿ ಸಹಕಾರಿಯಾಯಿತು. ದಲಿತ ಚಳುವಳಿ ಮೂಕವಾಗಿ ಮೇಲ್ಜಾತಿಗಳನ್ನು ಎದುರು ಹಾಕಿಕೊಳ್ಳದೆ ಎಲ್ಲಾ ಜಾತಿಗಳಲ್ಲಿನ ಬಡವರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದನ್ನು ಕಲಿಯಿತು. ದಲಿತರು ಎಂದರೆ ಎಲ್ಲಾ ಜಾತಿಯ ಬಡವರು ಎಂಬ ಅಭಿಪ್ರಾಯ ತಳೆಯಿತು. ಧರಣಿ ಮೆರವಣಿಗೆ ಪ್ರದರ್ಶನದಲ್ಲಿ ಅಂಬೇಡ್ಕರ್‌ಗೆ ಸಂಬಂಧಿಸಿದ ಘೋಷಣೆ, ಭಾವಚಿತ್ರ, ಹಾಡು ಉಪಯೋಗಿಸಲ್ಪಡುತ್ತಿದ್ದವು.

ಶೋಷಣಾಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಅಂಬೇಡ್ಕರ್ ಭಾವಿಸಿದಂತೆ ಚಳುವಳಿ ಸಹ ಭಾವಿಸಿತು. ದಲಿತರೆಂದರೆ ಎಲ್ಲಾ ಜಾತಿಯ ಬಡವರು ಅಥವಾ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶೋಷಣೆಗೆ ಒಳಗಾದವರು ಎಂಬ ಅಂಶವನ್ನು ಹಲವು ವೇದಿಕೆಗಳ ಮೇಲಿಂದ ಘೋಷಣೆಗಳ ಮೂಲಕ ಪ್ರಕಟಪಡಿಸಿತು. ಜಾತೀಯತೆಯನ್ನು ಮೀರಿ ಬಡವರು ಒಂದಾಗಬೇಕೆಂಬ ಆಶಯ ಈ ಚಳುವಳಿಯದಾಗಿತ್ತು.

ದಲಿತ ಹೋರಾಟದ ಹಾಡುಗಳಲ್ಲಿಯ ಪರಿಭಾಷೆಯ ಸ್ವರೂಪ :

ಸಾಮಾನ್ಯವಾಗಿ ಹೋರಾಟದ ಪರಿಭಾಷೆ ಆಯಾ ಸಾಮಾಜಿಕ ಸಂಘಟನೆಯ ಮೇಲೆ ನಿರ್ಧರಿತವಾಗಿರುತ್ತದೆ. ದಲಿತ ಹೋರಾಟದ ಹಾಡುಗಳಲ್ಲಿ ಬಳಕೆ ಆಗಿರುವ ಪರಿಭಾಷೆ ದೇಶಿ ನೆಲೆಯದು. ಸಾಮಾಜಿಕ ಪರಿಸರದಲ್ಲಿನ ಭಾಷೆಯನ್ನು ಗಮನಿಸಿ ಹಾಡುಗಳನ್ನು ರಚನೆ ಮಾಡಲಾಗಿದೆ. ಸಂಸ್ಕೃತದ ಪ್ರಭಾವ ತುಂಬ ಕಡಿಮೆ ಎಂದೆ ಹೇಳಬಹುದು.

ಕರ್ನಾಟಕದಲ್ಲಿ ಕಳೆದ ಮೂರು ದಶಕಗಳಿಂದ ಹಲವು ಹೋರಾಟಗಳು, ಪ್ರಗತಿಪರ ಚಳುವಳಿಗಳು ನಡೆದಿವೆ ಮತ್ತು ನಡೆಯುತ್ತಲೆ ಇವೆ. ದಲಿತ ಚಳುವಳಿಗಳು, ರೈತ ಚಳುವಳಿಗಳು, ಮಹಿಳಾ ಚಳುವಳಿಗಳು, ಕೂಲಿ ಕಾರ್ಮಿಕರ ಹೋರಾಟಗಳು, ವಿದ್ಯಾರ್ಥಿ ಹೋರಾಟಗಳು ಕರ್ನಾಟಕದ ಜನ ಸಾಮಾನ್ಯರ ಬದುಕಿನ ಪ್ರಗತಿಪರ ಬದಲಾವಣೆಗಾಗಿ ತಂತಮ್ಮ ಕೊಡುಗೆಗಳನ್ನು ನೀಡುತ್ತ ಬಂದಿವೆ. ಈ ಎಲ್ಲಾ ಹೋರಾಟ, ಚಳುವಳಿಗಳಿಗೆ ಲಾವಣಿಗಳು, ಹೋರಾಟದ ಹಾಡುಗಳು, ಕ್ರಾಂತಿ ಗೀತೆಗಳು, ಘೋಷಣೆಗಳು ಸ್ಫೂರ್ತಿತುಂಬುತ್ತ ಅವುಗಳ ಜೊತೆ ಜೊತೆಯಲ್ಲಿಯೇ ಈ ಹೋರಾಟದ ಹಾಡುಗಳು, ಕ್ರಾಂತಿ ಗೀತೆಗಳು ಜನಪ್ರೀಯವಾಗಿವೆ, ಹಲವು ಆಡಿಯೋ ಕ್ಯಾಸೆಟ್‌ಗಳು ಜನಪ್ರೀಯತೆಗಳಿಸಿವೆ.

ಆಂಧ್ರಪ್ರದೇಶದ 'ಕ್ರಾಂತಿಕಾರಿ (ನಕ್ಸಲೈಟ್ಸ್) ಚಳುವಳಿ'ಯಿಂದ 'ಜನನಾಟ್ಯ ಮಂಡಲಿ'ಯ ಹಾಡುಗಳಿಂದ ಗಾಢವಾಗಿ ಪ್ರಭಾವಕ್ಕೊಳಗಾಗಿ ಕರ್ನಾಟಕದಲ್ಲಿ ದಲಿತ ಚಳುವಳಿಯು ಅಂಥದೇ ಹಾಡು, ಲಾವಣಿ, ಕ್ರಾಂತಿಗೀತೆಗಳ ಸಂಪ್ರದಾಯವನ್ನು ರೂಡಿಸಿಕೊಂಡಿತು. ಕೆಲವು ಹೋರಾಟದ ಹಾಡುಗಳನ್ನು ಕನ್ನಡದ ಹೆಸರಾಂತ ದಲಿತ ಕವಿಗಳು, ಬಂಡಾಯ ಸಾಹಿತಿಗಳು ರಚಿಸಿದ್ದಾರೆ. ಹಲವಾರು ಹಾಡುಗಳು ಮೂಲದಿಂದ ಮಾರ್ಪಾಟು, ರೂಪಾಂತರಗಳನ್ನು ಹೊಂದಿ ಪರಿಣಾಮಕಾರಿಯಾಗಿವೆ. ಒಟ್ಟಿನಲ್ಲಿ ಈ ಹಾಡುಗಳು ಕರ್ನಾಟಕದ ಸಂಘರ್ಷಮಯ ಸಾಂಸ್ಕೃತಿಕ ಬದುಕಿನ ಆಸ್ತಿಯಾಗಿ ಉಳಿದು ಬೆಳೆದುಕೊಂಡು ಹೋಗುತ್ತಿವೆ ಎಂಬುದು ವಾಸ್ತವಿಕ. ಹಲವು ಆಡಿಯೋ ಕ್ಯಾಸೆಟ್‌ಗಳು ಜನಪ್ರೀಯತೆಗಳಿಸಿವೆ. ದಲಿತ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪ್ರಮುಖವಾದ ಹಾಡುಗಳನ್ನು ಗಮನಿಸಿರಿ.

'ಶಾಂತಿ ರಕ್ಷಕರು ನಾವು
ನಾವೆಲ್ಲಾ ಒಂದೇ ನಾವೆಲ್ಲರೂ ಒಂದೇ
ಅನ್ಯಾಯ ದಬ್ಬಾಳಿಕೆಗಳ ದಿಕ್ಕರಿಸುವವರು
ನಾವ್ ಒಂದೇ................'

'ಯಾರು ಯಾರಿಗೂ ಅನ್ಯರಲ್ಲ ಎಂದೂ ಅನ್ಯರಲ್ಲ
ಯಾರು ಯಾರಿಗೂ ಗುಲಾಮರಲ್ಲ
ಒಡೆಯರು ನಾವು ಗುಲಾಮರು ನೀವು
ಎಂಬ ವ್ಯವಸ್ಥೆಯ ಕೊನೆಗಾಣಿಸು'

'ಇರುವೆಯಂತೆ ಹರಿವ ಸಾಲು ಹುಲಿ ಸಿಂಹದ ದನಿಗಳು
ದಿಕ್ಕಾರ ದಿಕ್ಕಾರ ಅಸಮಾನತೆಗೆ
ಎಂದೆಂದಿಗೂ ದಿಕ್ಕಾರ ! ದಿಕ್ಕಾರ ದಿಕ್ಕಾರ !
ಎಂದೆಂದಿಗೂ ದಿಕ್ಕಾರ ಶ್ರೀಮಂತರ ಸೊಕ್ಕಿಗೆ........

'ಜಾತಿಧರ್ಮ ಮಡಿ ಮೈಲಿಗೆಯ ಭೇದ ಭಾವ ಈ ಮಣ್ಣಿಗಿಲ್ಲ
ಬಡವ ಬಲ್ಲಿದ ದಲಿತನೆಂಬ ಸ್ಪರ್ಶಾಸ್ಪೃಶ್ಯತೆ ಮಣ್ಣಿಗಿಲ್ಲ'

'ಅಡ್ಡ ಗೋಡೆಯನ್ನು ಒಡೆಯುತ ನಡೆದು
ಶೋಷಣೆ ಬೇರನ್ನು ಕಿತ್ತು ಎಸೆದು
ಸೋದರರೆಲ್ಲರೂ ಒಂದಾಗಿ ಕೂಡುತ
ಸವಿಯನ್ನು ಎಲ್ಲರೂ ಸವಿಯೋಣ ಬನ್ನಿ'

'ಕಂಬಾಲಪಲ್ಲಿಯ ದಲಿತರ ದಹನ ನೋಡಮ್ಮ
ಹಂಗರಹಳ್ಳಿಯಲ್ಲಿ ಬರ್ಬರ ಜೀತ ನೋಡಮ್ಮ'

'ಮಾನಭಂಗ ಅತ್ಯಾಚಾರ ನಿತ್ಯ ನೋಡಮ್ಮ
ದಲಿತ ರೈತ ಕೂಲಿಗಳ ದಮನ ನೋಡಮ್ಮ'.

ದಲಿತ ಹೋರಾಟದ ಈ ಹಾಡುಗಳಲ್ಲಿ ದಬ್ಬಾಳಿಕೆ, ಗುಲಾಮರು, ಅಸಮಾನತೆ, ದಿಕ್ಕಾರ, ಮೈಲಿಗೆ, ಸ್ಪರ್ಶಾಸ್ಪೃಶ್ಯತೆ, ಶೋಷಣೆ, ಮೊದಲಾದ ಪದಗಳು ದಲಿತ ಹೋರಾಟ ಅಥವಾ ಚಳುವಳಿಯ ಪಾರಿಭಾಷಿಕ ಪದಗಳಾಗಿ ರೂಪಗೊಂಡಿವೆ. ದಲಿತ ವರ್ಗವು ಶತಶತಮಾನಗಳಿಂದ ಅನುಭವಿಸುತ್ತ ಬಂದಿರುವ ನೋವಿನ ತುಡಿತವನ್ನು ಇವು ಧ್ವನಿಸುತ್ತವೆ. ಇಂತಹ ವಿಶಿಷ್ಟವಾದ ಪದಗಳೇ ಈ ಚಳುವಳಿಯ ಪಾರಿಭಾಷಿಕ ಪದಗಳಾಗಿ ಪರಿಣಮಿಸುತ್ತವೆ. ಇಂತಹ ಪಾರಿಭಾಷಿಕ ಪದಗಳು ಹೋರಾಟದ ಸಂದರ್ಭ, ಸನ್ನಿವೇಶಕ್ಕನುಗುಣವಾಗಿ ದಲಿತ ಹೋರಾಟಗಳಲ್ಲಿ ಬಳಕೆಯಾಗುತ್ತವೆ.

ದಲಿತ ಹೋರಾಟ ಅಥವಾ ಚಳುವಳಿಯಲ್ಲಿಯ ಘೋಷಣೆಗಳಲ್ಲಿ ಪರಿಭಾಷೆ :

ದಲಿತ ಹೋರಾಟದ ಪರಿಭಾಷೆ ಎಂದರೆ ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆ ಎಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ ಆಯಾ ಹೋರಾಟದ ವಸ್ತು, ಸಂದರ್ಭ, ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನೆಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಶೈಕ್ಷಣಿಕವಾಗಿ ಹೋರಾಟದಲ್ಲಿನ ಸಂದರ್ಭದ ಭಾಷೆ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ಯಾವುದೇ ಹೋರಾಟಕ್ಕೆ ಘೋಷಣೆಗಳು ಹೋರಾಟದ ಜೀವಾಳವಾಗಿರುತ್ತವೆ. ಈ ಘೋಷಣೆಗಳು ಹೋರಾಟದ ಮೂಲ ಧೋರಣೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಘೋಷಣೆಗಳು ಹೋರಾಟಕ್ಕೆ ತಕ್ಕಂತೆ ನಿರ್ಮಾಣವಾಗಿರುತ್ತವೆ. ಹೋರಾಟಕ್ಕೆ ತಕ್ಕಂತೆ ಘೋಷಣೆಗಳು ಕೂಡ ಪಾರಿಭಾಷಿಕ 'ಪದಗಳಿಂದ ಕೂಡಿರುತ್ತವೆ. ಘೋಷಣೆಗಳನ್ನು ಹೋರಾಟದ ಹಾಡುಗಳಲ್ಲಿಯ, ಕ್ರಾಂತಿ ಗೀತೆಗಳಲ್ಲಿಯ ಕೆಲವೊಂದು ಸಾಲುಗಳನ್ನು ಎತ್ತಿಕೊಂಡು ಎಣೆಯುವುದು ಒಂದು ರೀತಿಯಾದರೆ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿ ಮಾಡುವುದು ಇನ್ನೊಂದು ರೀತಿಯಾಗಿರುತ್ತದೆ. ನಿದರ್ಶನಕ್ಕೆ ಕೆಲವೊಂದು ಘೋಷಣೆಗಳನ್ನು ದಾಖಲಿಸಲಾಗಿದೆ.

೧) ಜಾತಿ ಬಿಡಿ ಧರ್ಮ ಬಿಡಿ ಮಾನವತೆಗೆ ಜೀವ ಕೊಡಿ.

೨) ಬುದ್ಧ ಭಾರತ ನಮ್ಮ ಕನಸಾಗಲಿ.

೩) ದಲಿತರ ಇಂದಿನ ನೋವು ಕಾಂಗ್ರೇಸಿಗರ ನಾಳೆಯ ಸಾವು.

೪) ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು.

೫) ಜಾತಿ ಮತ್ತು ಪಾಳೆಗಾರಿಕೆಯ ದಮನಕ್ಕೆ ಪ್ರಾಣವನ್ನಾದರು ಕೊಟ್ಟು ಹೋರಾಡೋಣ...... ಹೋರಾಡೋಣ.

೬) ಮನೆ ಹೊಕ್ಕ ಕಳ್ಳನನ್ನು ಹಿಡಿಯದ ಪೋಲೀಸ್ ಎಂಬ ನಾಯಿಗಳು ಬಡಜನರ ಹೋರಾಟವನ್ನು ಹತ್ತಿಕ್ಕಲು ಘರ್ಜಿಸುವ ಕೈಲಾಗದ ಹೇಡಿಗಳು......ಹೇಡಿಗಳು.

೭) ಹೋರಾಟ.......ಹೋರಾಟ ಎಲ್ಲಿಯವರೆಗೆ ಹೋರಾಟ ನ್ಯಾಯ ಸಿಗುವವರೆಗೆ ಹೋರಾಟ.

೮) ಅಂಬೇಡ್ಕರ್‌ರೇ ಕಣ್ಣು, ದಿಕ್ಕು ದಾರಿ, ಅಂಬೇಡ್ಕರ್ ಆಲೋಚನೆ ಸ್ಫೂರ್ತಿಯಾಗಲಿ, ಮಾರ್ಕ್ಸ್‌ವಾದ ಮಾರ್ಗವಾಗಲಿ.

೯) ದಲಿತರು ಬಂದರು ದಾರಿ ಬಿಡಿ.....ದಲಿತರ ಕೈಗೆ ರಾಜ್ಯ ಕೊಡಿ.

೧೦) ಹೊತ್ತಿ ಬೆಂಕಿಯಲ್ಲಿ ಬೇಯುತ್ತಿರುವ ಭಾರತಕ್ಕೆ ಬೇಕಿಲ್ಲ ಅಮೇರಿಕಾದ ಮೇಕಪ್
ನಮಗೆ ಬೇಕಾಗಿರುವುದು ಭಗತ್‌ಸಿಂಗ್‌ನಂತಹ ಬೆಳಕು.....ಬೆಳಕು.

೧೧) ಅನ್ಯಾಯದ ನೀತಿಗೆ ಕ್ರಾಂತಿ ಗೀತೆಗಳನ್ನು ಕಟ್ಟೋಣ......ಕಟ್ಟೋಣ.

೧೨) ಅನ್ಯಾಯದ ನೀತಿಗೆ ಹೋರಾಟದ ಹಾಡುಗಳನ್ನು ಕಟ್ಟೋಣ.....ಕಟ್ಟೋಣ.
ಇದರಲ್ಲಿ ಇಣುಕಿ ನೋಡಿದರೆ ರಕ್ತದ ಉತ್ತರ ನೀಡೋಣ.....ನೀಡೋಣ.

೧೩) ಶೋಷಣೆಗೆ ತುತ್ತಾಗಿರುವ ಕೋಟ್ಯಾಂತರ ಜೀವಿಗಳ ಬಿಟ್ಟು ಬಿಡಿ ನಿಮ್ಮ ಚಿಂತೆ ಚಿಂತೆ,
ಕ್ರಾಂತಿಕಾರಿಗಳಂತೆ ಘರ್ಜಿಸಲು ಹೊಸದಾಗಿ ಕಟ್ಟೋಣ ಕ್ರಾಂತಿ ಗೀತೆಗಳ ಕಂತೆ ಕಂತೆ.

೧೪) ನಾವು ಕ್ರಾಂತಿಕಾರಿಗಳು ಕೊಡುವೆವು ಪ್ರಾಣದ ಪ್ರೀತಿಯ ರೂಪ,
ಅನ್ಯಾಯ ಮಾಡಿದರೆ ಸೀಳುವೆವು ನಿಮ್ಮ ಹಣೆಬರಹದ ರೂಪ.

೧೫) ಭಾರತೀಯ ಸಮಾಜವನ್ನು ಕಾಡುತ್ತಿರುವ ವರ್ಣ ಮತ್ತು ಜಾತಿ ವ್ಯವಸ್ಥೆಯು ನಿಲ್ಲಲ್ಲಿ .... ನಿಲ್ಲಲಿ.

೧೬) ಮನುಕುಲದಲ್ಲಿ ಶೂದ್ರರು, ಅತಿಶೂದ್ರರು ಎಂಬ ಅಸಮಾನತೆಯು ತೊಲಗಲಿ .... ತೊಲಗಲಿ.

೧೭) ಸಾಮಾಜಿಕ ದೌರ್ಜನ್ಯ, ದಬ್ಬಾಳಿಕೆಯನ್ನು ಎದುರಿಸುತ್ತಿರುವ ದಲಿತರೆ ಹೆದರಬೇಡಿ .... ಹೆದರಬೇಡಿ.

೧೮) ದಲಿತರ ಮೇಲಿನ ಸಾಮಾಜಿಕ ಬಹಿಷ್ಕಾರ, ಆರ್ಥಿಕ ತಾರತಮ್ಯ ನಿಲ್ಲಲಿ .... ನಿಲ್ಲಲಿ.

೧೯) ದಲಿತರ ಬದುಕು ಸಾಮ್ರಾಜ್ಯಶಾಹಿಗಳಿಗೆ ಮೀಸಲು ಅಲ್ಲ .... ಮೀಸಲು ಅಲ್ಲ.

೨೦) ದಲಿತರ ಬದುಕಿನ ಕನಸುಗಳಿಗಾಗಿ ಪ್ರಜಾಸತ್ತಾತ್ಮಕ ಕ್ರಾಂತಿಯು ಬೇಕೆಬೇಕು .... ಬೇಕೆಬೇಕು.

೨೧) ದಲಿತರನ್ನು ಕಾಪಾಡದ ಸರ್ಕಾರಕ್ಕೆ ದಲಿತರ ಮತಗಳಿಗೆ ಮತಬ್ಯಾಂಕುಗಳನ್ನು ನಿರ್ಮಿಸುವುದು ನಾಚಿಕೆಗೇಡು .... ನಾಚಿಕೆಗೇಡು.

೨೨) ದಲಿತರ ಯೋಚನೆಗಳನ್ನು ನಿರ್ಧಯವಾಗಿ ದೌರ್ಜನ್ಯಗಳ ಮೂಲಕ ಹತ್ತಿಕ್ಕುತ್ತಿರುವ ಭೂಮಾಲೀಕರಿಗೆ ದಿಕ್ಕಾರ .... ದಿಕ್ಕಾರ.

೨೩) ಜಾತಿ ಪೂರ್ವಗ್ರಹಗಳನ್ನು ಪೋಷಿಸುತ್ತಿರುವ ಬಂಡವಾಳಶಾಹಿ ವರ್ಗಗಳನ್ನು ಕಿತ್ತುಹಾಕಿ .... ಕಿತ್ತುಹಾಕಿ.

೨೪) ಶೇಕಡ ೮೬.೨೫ ರಷ್ಟು ಭೂಹೀನರಾಗಿರುವ ದಲಿತರಿಗೆ ಭೂಮಿಯನ್ನು ನೀಡಲೇಬೇಕು .... ನೀಡಲೇಬೇಕು.

೨೫) ದಲಿತರ ಮೇಲಿನ ಶೋಷಣೆಗಳ ವಿರುದ್ಧ ಬಲಿಷ್ಠ ಹೋರಾಟ ಮಾಡೋಣ .... ಮಾಡೋಣ.

೨೬) ಗ್ರಾಮೀಣ ಬಡ ದಲಿತರಲ್ಲಿ ಶಿಕ್ಷಣದ ಪ್ರಜ್ಞೆಯನ್ನು ಮೂಡಿಸದಿರುವ ಶಿಕ್ಷಣ ಮಂತ್ರಿಗಳಿಗೆ ದಿಕ್ಕಾರ .... ದಿಕ್ಕಾರ.

೨೭) ದಲಿತರ ಮೇಲಿನ ಭೂಮಾಲೀಕ ಅಧಿಪತ್ಯವು ನಿಲ್ಲಲಿ .... ನಿಲ್ಲಲಿ.

೨೮) ರಾಜಕೀಯದಲ್ಲಿ ದಲಿತರ ಜಾತಿಯ ನಿರ್ಲಕ್ಷ ಮಾಡುತ್ತಿರುವ ನ್ಯಾಯವಾದಿಗಳಿಗೆ ದಿಕ್ಕಾರ .... ದಿಕ್ಕಾರ.

೨೯) ದಲಿತರ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ನೀಡದೇ ಬಾಲಕಾರ್ಮಿಕರ ಪದ್ಧತಿಗೆ ತಳ್ಳುತ್ತಿರುವ ಸರ್ಕಾರಗಳಿಗೆ ದಿಕ್ಕಾರ .... ದಿಕ್ಕಾರ.

೩೦) ಶೌಚಾಲಯಗಳನ್ನು ಶುಚಿಗೊಳಿಸಲು ದಲಿತರ ಮಕ್ಕಳೇಕೆ .... ಮಕ್ಕಳೇಕೆ ?

೩೧) ದಲಿತರಿಗೆ ಉದ್ಯೋಗದಲ್ಲಿ ತಾರತಮ್ಯ ಮಾಡುತ್ತಿರುವ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೩೨) ದಲಿತ ಮಹಿಳೆಯರಿಗಾಗಿ ಉದ್ಯೋಗದ ಸಂವಿಧಾನವು ಜಾರಿಯಾಗಲಿ .... ಜಾರಿಯಾಗಲಿ.

೩೩) ದುಡಿಯುವ ದಲಿತರ ಸಮಸ್ಯೆಗಳನ್ನು ಉಲ್ಬಣ ಮಾಡುತ್ತಿರುವ ಕೇಂದ್ರ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೩೪) ದಲಿತರ ಬದುಕಿಗೆ ಆಸರೆಯಾಗದೆ ದಲಿತರ ಬದುಕನ್ನು ಕಿತ್ತುಕೊಳ್ಳುತ್ತಿರುವ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೩೫) ಸರಿಯಾದ ಪೌಷ್ಟಿಕಾಂಶ ಆಹಾರ ಸಿಗದೆ ಸಾಯುತ್ತಿರುವ ದಲಿತ ಗರ್ಭಿಣಿ ಮಹಿಳೆಯರ ಸಾವುಗಳು ನಿಲ್ಲಲಿ .... ನಿಲ್ಲಲಿ.

೩೬) ಜಾತಿ ಮತ್ತು ಪಾಳೇಗಾರಿಕೆ ದಮನದ ವಿರುದ್ಧ ಹೋರಾಟ .... ಹೋರಾಟ.

೩೭) ಎಲ್ಲಾ ದೇವಸ್ಥಾನಗಳಲ್ಲೂ ದಲಿತರಿಗೆ ಪ್ರವೇಶ ನೀಡಲೇಬೇಕು .... ನೀಡಲೇಬೇಕು.

೩೮) ದಲಿತರ ಹೋರಾಟದ ಸ್ವಾತಂತ್ರ ಕಿತ್ತುಕೊಳ್ಳುವ ಸರ್ಕಾರಗಳಿಗೆ ದಿಕ್ಕಾರ .... ದಿಕ್ಕಾರ.

೩೯) ಬಡದಲಿತರ ಮಕ್ಕಳಿಗೆ ಉಚಿತ ಶಿಕ್ಷಣ ಕಡ್ಡಾಯವಾಗಲಿ .... ಕಡ್ಡಾಯವಾಗಲಿ.

೪೦) ದಲಿತರಿಗಾಗಿ ಕುಟುಂಬ ಸ್ವಯಂ ಉದ್ಯೋಗ ಜಾರಿಗೆ ತನ್ನಿ .... ಜಾರಿಗೆ ತನ್ನಿ.

೪೧) ಕೋಟ್ಯಾಂತರ ದಲಿತರ ಜೀವನದಲ್ಲಿ ಆಟವಾಡುತ್ತಿರುವ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೪೨) ದೇಶದ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುವ ಬದಲು ಬಡ ದಲಿತರಿಗೆ ಹಂಚಿಕೆಯಾಗಲಿ .... ಹಂಚಿಕೆಯಾಗಲಿ.

೪೩) ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಯ ಎಲ್ಲಾ ಅಂಶಗಳನ್ನೊಳಗೊಂಡ ಸಮಗ್ರ ಶಾಸನಗಳು ದಲಿತರ ಹಕ್ಕು .... ದಲಿತರ ಹಕ್ಕು.

೪೪) ದಲಿತರ ವಾಸ್ತವ ಸ್ಥಾನಮಾನವನ್ನು ಅಂದಾಜು ಮಾಡಲು ರಾಷ್ಟ್ರೀಯ ಆಯೋಗವನ್ನು ರಚಿಸದಿರುವ ಕೇಂದ್ರ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೪೫) ಖಾಸಗಿ ವಲಯದಲ್ಲಿ ದಲಿತರಿಗೆ ಮೀಸಲಾತಿ ಜಾರಿಗೆ ಬರಲಿ .... ಜಾರಿಗೆ ಬರಲಿ.

೪೬) ದಲಿತ ಪ್ರದೇಶಗಳಿಗೆ ಮೂಲ ಸೌಕರ್ಯಗಳನ್ನು ನೀಡದಿರುವ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೪೭) ಅಸ್ಪೃಶ್ಯತೆ ನಿರ್ಮೂಲನೆ ಕಡ್ಡಾಯವಾಗಿ ಜಾರಿಗೆ ಬರಲಿ .... ಜಾರಿಗೆ ಬರಲಿ.

೪೮) ದಲಿತರಿಗಾಗಿ ಜಿಲ್ಲಾ ಮಟ್ಟದ ಸಮುದಾಯಗಳು ಬೇಕೆ ಬೇಕು .... ಬೇಕೆ ಬೇಕು.

೪೯) ಅಂತರ್ಜಾತಿಯ ವಿವಾಹಗಳನ್ನು ಎತ್ತಿ ಹಿಡಿಯೋಣ .... ಎತ್ತಿ ಹಿಡಿಯೋಣ.

೫೦) ಜಾತಿ ಬಿಟ್ಟು ದೇಶ ಕಟ್ಟು .... ದೇಶ ಕಟ್ಟು

ಅಧ್ಯಾಯ-೩

ರೈತ ಹೋರಾಟದ ಪರಿಭಾಷೆಯ ಸ್ವರೂಪ

ಅಧ್ಯಾಯ-೩

ರೈತ ಹೋರಾಟದ ಪರಿಭಾಷೆಯ ಸ್ವರೂಪ

ನಮ್ಮ ಭಾರತ ದೇಶ ಹಳ್ಳಿಗಳಿಂದ ಕೂಡಿದ ದೇಶ. ಈ ಹಳ್ಳಿಗಳಲ್ಲಿ ಮುಖ್ಯ ಉದ್ಯೋಗ ವ್ಯವಸಾಯ. ಆದ್ದರಿಂದ ದೇಶದ ಜನಸಂಖ್ಯೆಯಲ್ಲಿ ಬಹುದೊಡ್ಡ ಪಾಲು ವ್ಯವಸಾಯಗಾರರದು. ವ್ಯವಸಾಯಕ್ಕೆ ಹೊಂದಿಕೊಂಡಂತೆ ಗ್ರಾಮೀಣ ಪ್ರದೇಶದಲ್ಲಿ ಅನೇಕ ಕಸಬುಗಳಿವೆ. ಇಂಥ ಕಸಬುಗಳನ್ನು ಮಾಡುವವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ವ್ಯವಸಾಯ ಕೂಲಿಕಾರರದು ಇನ್ನೊಂದು ದೊಡ್ಡ ವರ್ಗ. ವ್ಯವಸಾಯಗಾರರು, ಗ್ರಾಮೀಣ ಕಸಬುದಾರರು ಮತ್ತು ಬೇಸಾಯ ಕೂಲಿಕಾರರು ಈ ಮೂರು ವರ್ಗಗಳ ಜನರನ್ನು ಒಂದೇ ಗುಂಪಿಗೆ ಸೇರಿಸಿ ಅವರನ್ನು ರೈತರು ಅಥವಾ ರೈತ ಜನರು ಎಂದು ಕರೆಯಲಾಗುತ್ತದೆ.

ಕೃಷಿಯೇ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ರೈತರೆಂದರೆ ಯಾರು ಎಂಬುದು ಕುತೂಹಲದ ವಿಷಯವಾಗಿದೆ. ರೈತರಲ್ಲದವರನ್ನು ಸುಲಭವಾಗಿ ಹೇಳಿ ಬಿಡಬಹುದು. ಆದರೆ ರೈತರಾರು ಎಂಬುದನ್ನು ಹೇಳುವುದು ಅಷ್ಟೇ ಕ್ಲಿಷ್ಟವಾಗಿದೆ. ಭೂಕಂದಾಯ, ಗೇಣಿ, ಬಾಡಿಗೆ ಪಡೆಯುವ ಭೂ ಒಡೆಯರು ರೈತರಲ್ಲ, ಬಡ್ಡಿ ವ್ಯವಹಾರದಿಂದ ಜೀವಿಸುವ ಸಾಹುಕಾರರು ರೈತರಲ್ಲ. ರೈತರ ಬೆಳೆಗಳನ್ನು ಪೇಟೆಗೆ ಮಾರಿ ಜೀವಿಸುವವರು ಅಥವಾ ಕಾರ್ಖಾನೆ ನಡೆಸುವವರು ರೈತರಲ್ಲ. ಇವರೆಲ್ಲ ಭೂಮಾಲಿಕರು, ವ್ಯಾಪಾರಿಗಳು, ಇವರು ಬಂಡವಾಳ ಹೂಡಿ ವಾಣಿಜ್ಯ ಬೆಳೆ ತೆಗೆದುಕೊಳ್ಳುತ್ತಾರೆ. ನಗರದ ಕಾರ್ಖಾನೆಗಳ ಮಾದರಿಯಲ್ಲೆ ಅವರು ಕೃಷಿ ಉತ್ಪನ್ನ ತೆಗೆಯುತ್ತಾರೆ. ಇವರನ್ನು ಸಹ ರೈತ ವರ್ಗಕ್ಕೆ ಸೇರಿಸುವುದಿಲ್ಲ. ಮಾರ್ಕ್ಸ್‌ವಾದಿಗಳ ಭಾಷೆಯಲ್ಲಿ ಈ ವರ್ಗಗಳನ್ನು ಬೂರ್ಜ್ವಾ ಎಂದು ಕರೆಯಲಾಗುತ್ತದೆ.

'ಸಂಕುಚಿತ ಅರ್ಥದಲ್ಲಿ ರೈತರೆಂದರೆ ತಾವೇ ಪ್ರತ್ಯಕ್ಷವಾಗಿ ವ್ಯವಸಾಯದಲ್ಲಿ ತೊಡಗಿರುವವರು. ಇವರಲ್ಲಿ ಸಣ್ಣ ಹಿಡುವಳಿ ಹೊಂದಿದ ವ್ಯವಸಾಯಗಾರರು, ಭೂಮಾಲಿಕರಿಗೆ ಗೇಣಿಕೊಟ್ಟು ವ್ಯವಸಾಯ ಮಾಡುವ ಗೇಣಿ ರೈತರು, ತಾವು ಬೆಳೆದ ಬೆಳೆಯಲ್ಲಿ ಪಾಲು ಕೊಡುವ ಕೋರು ಪಾಲು ರೈತರು, ಸ್ವಲ್ಪ ಭೂಮಿ ತಾವೇ ವ್ಯವಸಾಯ ಮಾಡಿ ಉಳಿದುದನ್ನು ಲಾವಣಿ ಮಾಡಿಸುವ ಮಧ್ಯಮ ರೈತರೂ ಸೇರುತ್ತಾರೆ. ಇವರೆಲ್ಲ ಹೆಚ್ಚು ಕಡಿಮೆ ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ಬಳಸುವವರು. ದೊಡ್ಡ ಬಂಡವಾಳ ಹೂಡಿರುವುದಿಲ್ಲ. ಭಾರಿ ಕೃಷಿಯಂತ್ರ, ತಂತ್ರಜ್ಞಾನ ಬಳಸುವುದಿಲ್ಲ. ಅವರು ಆರ್ಥಿಕವಾಗಿ ಅನುಕೂಲವಂತರಲ್ಲ ತಾವು ಬೆಳೆದ ಒಂದು ಭಾಗವನ್ನು ಇವರು ಕಂದಾಯ, ಗೇಣಿ, ಬಾಡಿಗೆ, ಕೋರು, ಪಾಲು ಇತ್ಯಾದಿ ರೂಪಗಳಲ್ಲಿ ಮಾಲಿಕ ವರ್ಗಕ್ಕೆ ಅಥವಾ ಸರಕಾರಕ್ಕೆ ಸಲ್ಲಿಸುತ್ತಾರೆ'[೩].

ರೈತ ವರ್ಗದ ಪರಿಕಲ್ಪನೆಯನ್ನು ಇನ್ನು ಸ್ವಲ್ಪ ವಿವರಿಸಿ ನೋಡುವುದಾದರೆ ಗ್ರಾಮೀಣ ಪ್ರದೇಶದಲ್ಲಿ ಅನೇಕ ಕಸಬುಗಳನ್ನು ಮಾಡುವ ಕಸಬುದಾರರನ್ನು, ಆಯಗಾರರನ್ನು, ಕೃಷಿ ಕೂಲಿ ಮಾಡುವವರನ್ನು ಈ ವರ್ಗಕ್ಕೆ ನಾವು ಸೇರಿಸಿಕೊಳ್ಳಬಹುದು. ಇವರು ಗ್ರಾಮದ ಕೃಷಿಯನ್ನು ಕೃಷಿಕರನ್ನು

---

೩ ಭಾರತದಲ್ಲಿ ರೈತ ಹೋರಾಟಗಳು, ಎಚ್.ವಿ. ನಾಗೇಶ್, ಎ.ಇ. ಮನೀತ. ಪುಟ ಸಂಖ್ಯೆ ೪.

ಅವಲಂಬಿಸಿರುತ್ತಾರೆ. ಕೃಷಿ ಕೂಲಿ ಮಾಡುವವರು ವ್ಯವಸಾಯದಲ್ಲಿ ತೊಡಗಿರುತ್ತಾರೆ. ಇವರಿಗೂ ರೈತಾಪಿ ಜನರಿಗೆ ಇರುವ ಪ್ರಮುಖ ವ್ಯತ್ಯಾಸವೆಂದರೆ ಕೃಷಿಕೂಲಿ ಮಾಡುವವರು ಭೂಮಿ ರಹಿತರು ಅಥವಾ ಭೂಮಿ ಹೀನರಾಗಿರುತ್ತಾರೆ. ಇವೆರೆಲ್ಲರಲ್ಲೂ ಸಮಾನವಾದ ಒಂದು ಗುಣವಿದೆ. ಅಂದರೆ ಇವರೆಲ್ಲ ಗ್ರಾಮೀಣ ಬಡವರು.

ಸಾಮಾನ್ಯವಾಗಿ ಬಡ ರೈತರು ಗ್ರಾಮದಲ್ಲಿರುವ ಜಮೀನ್ದಾರರ ಹಾಗೂ ಬಡ್ಡಿ ವ್ಯವಹಾರ ಮಾಡುವ ಶ್ರೀಮಂತರಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದರು. ಈ ಜಮೀನ್ದಾರರು ಮತ್ತು ಶ್ರೀಮಂತರು ಬಡ ರೈತರಿಗೆ ಮುಂಗಡವಾಗಿ ಹಣವನ್ನು ದವಸಧಾನ್ಯಗಳನ್ನು ಕೊಟ್ಟು ಕನಿಷ್ಠ ಕೂಲಿಗೆ ಜೀತದಾಳುಗಳನ್ನು ದುಡಿಸಿಕೊಂಡು ಅಧಿಕ ಲಾಭ ಪಡೆಯುತ್ತಿದ್ದರು. ಶ್ರೀಮಂತರಿಂದ, ಜಮೀನ್ದಾರರಿಂದ ಹಣ ಪಡೆದ ಬಡ ರೈತರು ಬಡ್ಡಿಯ ಹಣ ತೀರಿಸಲು ಅವರ ಹೊಲ ಮನೆಗಳಲ್ಲಿಯೇ ಜೀತದಾಳುಗಳಾಗಿ ದುಡಿಯುತ್ತಿದ್ದರು. ಕೊನೆಗೂ ಹಣ ತೀರಿಸಲಾಗದೆ ತಮ್ಮ ಹೊಲ, ಮನೆಗಳನ್ನು ಶ್ರೀಮಂತರಿಗೆ, ಜಮೀನ್ದಾರರಿಗೆ ಅಡುವು ಇಡುತ್ತಿದ್ದರು. ಸಾಲದೆ ತಮ್ಮ ಮಕ್ಕಳನ್ನು ತನ್ನಂತೆ ದುಡಿಯಲು ಅವರ ಹೊಲ ಮನೆಗಳಲ್ಲಿ ಬಿಡುತ್ತಿದ್ದರು. ಈ ಕನಿಷ್ಟ ಕೂಲಿ ಅಧಿಕ ಹಣ ಪಡೆಯುವ ಶೋಷಣೆಯು, ಅಸಮಾನತೆಯು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ.

ಬಡ ರೈತರು ನಗರಗಳಲ್ಲಿ ವಾಸ ಮಾಡುವ ಭೂಮಾಲೀಕರನ್ನು, ಸರಕಾರಿ ಅಧಿಕಾರಿಗಳನ್ನು ಆಶ್ರಯಿಸಿಕೊಂಡಿರುತ್ತಿದ್ದರು. ಇವರಿಂದಲೂ ಕೂಡ ಬಡರೈತರು ಶೋಷಣೆ ಅನುಭವಿಸುತ್ತಿದ್ದರು. ಹಲವು ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಶೋಷಣೆ, ಅಸಮಾನತೆ, ಅನ್ಯಾಯಕ್ಕೊಳಗಾದ ಬಡರೈತರು ಜಮೀನ್ದಾರರ ವಿರುದ್ಧ ಮುಷ್ಕರಗಳು, ಬಂಡಾಯಗಳು, ಕ್ರಾಂತಿಗಳು, ದಂಗೆಗಳು, ಸತ್ಯಾಗ್ರಹಗಳು ನಡೆಯಲು ಶುರುವಾದವು. ಹೀಗೆ ರೈತರು ಅನ್ಯಾಯದ ವಿರುದ್ಧ ಶೋಷಣೆಯ ವಿರುದ್ಧ ಹೋರಾಟಗಳನ್ನು ಆರಂಭಿಸಿದರು.

ಕ್ರಾಂತಿಯೆಂದರೆ ಕ್ಷಿಪ್ರವಾಗಿ, ಮೂಲಭೂತವಾಗಿ ಉಂಟಾಗುವ ಬದಲಾವಣೆಯನ್ನು ಕ್ರಾಂತಿ ಎಂದು ಕರೆಯಲಾಗುತ್ತದೆ. ಇದರ ಪರಿಣಾಮವಾಗಿ ಸಾಮಾಜಿಕ ರಚನೆಯಲ್ಲಿ ಬಹುಮಹತ್ವದ ಬದಲಾವಣೆಗಳು ಉಂಟಾಗುತ್ತವೆ. ಕ್ರಾಂತಿಗಳ ಪ್ರಮುಖ ಲಕ್ಷಣವೆಂದರೆ ಕ್ಷಿಪ್ರತೆ. ಕ್ರಾಂತಿಯ ಮಾರ್ಗ ತೀವ್ರವಾಗಿ ಕ್ರಮಿಸುವಂಥಹದು. ಯಾವುದೇ ಸಮಾಜವಿರಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಶಾಂತಿಯಿಂದ ಸ್ವೀಕರಿಸುವಷ್ಟು ನಮ್ರತೆಯನ್ನು ಪಡೆದಿರುವುದಿಲ್ಲ.

'ರೈತರ ಹೋರಾಟಗಳು ಭಾರತದಲ್ಲಿ ಬ್ರಿಟೀಷರ ಆಳ್ವಿಕೆ ನೆಲೆಗೊಳ್ಳುವ ಮುಂಚೆಯೂ ನೆಡೆದಿದ್ದವು. ಕಂದಾಯ ಹೊರೆ ಹೆಚ್ಚಿಸಲು ರಾಜರು ಪ್ರಯತ್ನ ಮಾಡಿದಾಗ ಪ್ರತಿಭಟನೆ ಏಳುವುದು ಸಹಜ. ಹದಿನೇಳನೆಯ ಶತಮಾನದಲ್ಲಿ ಮೈಸೂರು ಜಿಲ್ಲೆ ಮತ್ತು ಸುತ್ತಮುತ್ತಣ ಜನ, ಚಿಕ್ಕದೇವರಾಜ ಒಡೆಯರು ವಿಧಿಸಿದ ಹತ್ತೊಂಬತ್ತು ವಿವಿಧ ಸುಂಕಗಳ ವಿರುದ್ಧ ಹೋರಾಡಿದರು. ನೂರಾರು ಮಂದಿ ಜಂಗಮರು ರೈತರ ಪರವಾಗಿ ನಿಂತು ಪ್ರಾಣತೆತ್ತರು. ಆದರೆ ಬ್ರಿಟೀಷ್ ಆಳ್ವಿಕೆ ನೆಲೆಗೊಳ್ಳುವವರೆಗೆ ಗ್ರಾಮ ಸಮಾಜದ ಒಗ್ಗಟ್ಟು ಭದ್ರವಾಗಿದ್ದುದು ಮಾತ್ರವಲ್ಲದೆ ಆಗಿನ ಸರಕಾರಗಳು ತೀವ್ರ ರೀತಿಯ ಬದಲಾವಣೆ

ತರಲು ಪ್ರಯತ್ನಿಸದೆ ಹೋದ ಕಾರಣ ರೈತ ಹೋರಾಟಗಳು ಅಪರೂಪವಾಗಿದ್ದಿರಬಹುದು ಅಥವಾ ನಮಗೆ ಮಾಹಿತಿ ದೊರೆಯದೆ ಇರಬಹುದು. ಬ್ರಿಟೀಷರ ಕಾಲಕ್ಕೆ ಅವುಗಳು ವಿಪುಲವಾಗಿ ದಾಖಲೆಯಾಗಿವೆ[೪].

ರೈತರು ಬೀದಿಗಿಳಿದು ಹೋರಾಟ ಮಾಡಲು ಮಿತಿಮೀರಿದ ಕಂದಾಯ ಹೊರೆ, ನೀರಿನ ತೆರಿಗೆ ಏರಿಕೆ, ಕ್ಷಾಮ ಕಾಲದಲ್ಲಿ ಕಂದಾಯದ ಕಡ್ಡಾಯ ವಸೂಲಿ, ಜಮೀನ್ದಾರ ಮತ್ತು ರೈತರ ನಡುವೆ ಉತ್ಪಾದನೆಯು ಯಾವ ಪ್ರಮಾಣದಲ್ಲಿ ಹಂಚಿಕೆಯಾಗಬೇಕೆಂಬುದು, ರೈತನಿಗೆ ಜಮೀನ್ದಾರ ನಿರೀಕ್ಷಿಸುತ್ತಿದ್ದ ಕಾಣಿಕೆ ಹಾಗೂ ಬಿಟ್ಟಿ ಕೆಲಸಗಳು, ಬ್ರಿಟೀಷ್ ವಾಣಿಜ್ಯ ಹಿತಾಸಕ್ತಿಗಳು, ರೈತರು ಬಲವಂತವಾಗಿ ಕೆಲವು ಬೆಳೆಗಳನ್ನು ಬೆಳೆಯುವಂತೆ ಹೇರಿದ ಒತ್ತಾಯಗಳು, ಅವರು ನೀಡುತ್ತಿದ್ದ ಅತ್ಯಲ್ಪ ಬೆಲೆ, ಮಾಡುತ್ತಿದ್ದ ವಂಚನೆಗಳು ಮುಂತಾದ ಮುಖ್ಯ ಸಮಸ್ಯೆಗಳ ವಿರುದ್ಧ ರೈತರು ಹೋರಾಟದಲ್ಲಿ ನಿರತರಾಗಬೇಕಾಯಿತು. ಹೋರಾಟದಲ್ಲಿ ರೈತರ ಶತ್ರುಗಳು ಮೂವರು. ಸರಕಾರ, ಸಾಹುಕಾರ ಮತ್ತು ಜಮೀನ್ದಾರ. ಬ್ರಿಟೀಷ್ ಸರಕಾರವು ತನ್ನ ಆಳ್ವಿಕೆಯ ಅವಧಿ ಸಂಪೂರ್ಣ ಮುಗಿಯುವವರೆಗೂ ಆಸ್ತಿಯ ಹಕ್ಕಿನ ಪಾವಿತ್ರ್ಯದ ಹೆಸರಿನಲ್ಲಿ ಜಮೀನ್ದಾರ-ಸಾಹುಕಾರ-ವರ್ಗಗಳನ್ನು ಬೆಂಬಲಿಸಿತು. ಕೋರ್ಟು ಕಛೇರಿಗಳು ಅವರ ಪರವಾದವು. ಹೀಗಾಗಿ ರೈತ ತನ್ನ ಸಾಮೂಹಿಕ ಬಲ, ಎದೆಗಾರಿಕೆಗಳನ್ನು ಮಾತ್ರ ನಂಬಿ ಹೋರಾಟದ ಮಾರ್ಗವನ್ನೇ ಹಿಡಿಯುವಂತಾಯಿತು.

ರಾಷ್ಟ್ರಪಿತ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಚಂಪಾರಣ್ಯ ಸತ್ಯಾಗ್ರಹ, ಖೇಡಾ ಸತ್ಯಾಗ್ರಹ, ಸರ್ದಾರ ವಲ್ಲಭಾಯಿ ಪಟೇಲರ ನೇತೃತ್ವದಲ್ಲಿ ನಡೆದ ಬಾರ್ಡೋಲಿ ಸತ್ಯಾಗ್ರಹ ಮುಂತಾದ ಹೋರಾಟಗಳ ಸ್ವರೂಪವೇ ಬೇರೆ. ಇವೆಲ್ಲ ರೈತ ಹೋರಾಟಗಳಾದರೂ ರೈತರ ಸ್ಥಾನಮಾನಗಳನ್ನು ವರ್ಗ ರಚನೆಗಳಲ್ಲಿ ಮೂಲಭೂತ ಸ್ವರೂಪದ ಬದಲಾವಣೆಗಳನ್ನು ಹೊಂದಿರಲಿಲ್ಲ. ಈ ಹೋರಾಟಗಳಲ್ಲಿ ಭಾಗವಹಿಸಿದ ಹೋರಾಟಗಾರರು ಅಸಹಕಾರದ ಮಾರ್ಗವನ್ನು ಹಿಡಿದಿದ್ದರೇ ಹೊರತು ಹಿಂಸೆ ಮತ್ತು ಬಲಪ್ರಯೋಗದ ಮಾರ್ಗವನ್ನು ಹಿಡಿದಿರಲಿಲ್ಲ. ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾಡುವುದರೊಂದಿಗೆ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರೊಂದಿಗೆ, ಕೆಲವು ಅನ್ಯಾಯಗಳನ್ನು ಸರಿಪಡಿಸುವುದ ರೊಂದಿಗೆ ಈ ಹೋರಾಟಗಳು ಮುಕ್ತಾಯಗೊಂಡವು.

ದಂಗೆ, ಬಂಡಾಯಗಳು ಸ್ವರೂಪದಲ್ಲಿ ಸತ್ಯಾಗ್ರಹಕ್ಕಿಂತ ಭಿನ್ನವಾದ ಸ್ವರೂಪವನ್ನು ಹೊಂದಿವೆ. ಇವು ಹಿಂಸೆ, ಬಲಪ್ರಯೋಗ ಮಾಡಲು ಹಿಂದೇಟು ಹಾಕುವುದಿಲ್ಲ. ಆದರೆ ಇಂಥ ಹೋರಾಟಗಳು ಕ್ರಾಂತಿಯಷ್ಟು ವ್ಯಾಪಕವಾಗಿರುವುದಿಲ್ಲ. ಕ್ರಾಂತಿಗಳಿಗೆ, ಚಳುವಳಿಗಳಿಗೆ ವೈಚಾರಿಕ ಹಾಗೂ ಸೈದ್ಧಾಂತಿಕ ಹಿನ್ನೆಲೆಬೇಕು. ದಂಗೆ, ಬಂಡಾಯಗಳಿಗೆ ಬೇಡವೆಂದಲ್ಲ. ಕಡಿಮೆ ಪ್ರಮಾಣದಲ್ಲಿದ್ದರೆ ಸಾಕು. ದಂಗೆ ಬಂಡಾಯಗಳಲ್ಲಿ ಜನರು ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಾರೆ. ತಮ್ಮ ವೈರಿಗಳೆಂದು ತಿಳಿದ ಜನರ ವಿರುದ್ಧ ಮತಪ್ರದರ್ಶನ, ಬಹಿಷ್ಕಾರ, ಲೂಟಿ, ಕೊಳ್ಳೆ, ಹಿಂಸಾಚಾರದಲ್ಲಿ ತೊಡಗಬಹುದು.

೪. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು. ಎನ್.ಪಿ. ಶಂಕರನಾರಾಯಣರಾವ್. ಪುಟ ಸಂಖ್ಯೆ ೨೪೦.

ತಮ್ಮ ಸಿಟ್ಟನ್ನು ತೋರಿಸಿ ಪ್ರತೀಕಾರ ಮಾಡಿದರೆ ದಂಗೆಕಾರರ, ಬಂಡೆದ್ದವರ ಕೆಲಸ ಮುಗಿದು ಹೋಗುತ್ತದೆ. ದಂಗೆಯದ್ದ ಪ್ರದೇಶದಲ್ಲಿ ಸ್ಥಳೀಯವಾಗಿ ಕೆಲವು ಬದಲಾವಣೆಗಳುಂಟಾಗಬಹುದು. ನಂತರ ಉಳಿದಂತೆ ಯಥಾ ಸ್ಥಿತಿಯೇ ಮುಂದುವರೆದುಕೊಂಡು ಹೋಗುತ್ತದೆ. ಇಲ್ಲಿ ತಾತ್ಕಾಲಿಕ ಪರಿಹಾರ ದೊರೆತರೂ ಆಮೂಲಾಗ್ರವಾದ ಬದಲಾವಣೆಗಳಾಗುವುದಿಲ್ಲ. ಹೀಗೆ ದಂಗೆ ಬಂಡಾಯಗಳು ಕ್ರಾಂತಿಗಳಂತೆ, ಚಳುವಳಿಗಳಂತೆ ಕ್ಷಿಪ್ರವಾಗಿ ಸಂಭವಿಸಿದರೂ, ಹಿಂಸೆ, ಬಲಪ್ರಯೋಗಗಳನ್ನು ಬಳಸಿದರೂ ಅವುಗಳ ವ್ಯಾಪ್ತಿ, ಪರಿಣಾಮಗಳು ಸೀಮಿತವಾಗಿರುತ್ತವೆ.

ಒಟ್ಟಿನಲ್ಲಿ ರೈತರು ನಡೆಸುವ ಹೋರಾಟಗಳೇ ರೈತ ಹೋರಾಟಗಳು. ಇತ್ತೀಚೆಗೆ ಈ ಹೋರಾಟಗಳು ಜಗತ್ತಿನ ವಿವಿಧ ಭಾಗಗಳಲ್ಲಿ ಕಂಡು ಬಂದಿವೆ. ಭಾರತದಲ್ಲಿಯೂ ಇಂಥ ಹಲವು ಹೋರಾಟಗಳು ನಡೆದವು, ಈಗಲೂ ನಡೆಯುತ್ತಿವೆ. ರೈತ ಹೋರಾಟಗಳು ನಮ್ಮ ಸಮಾಜ ರಚನೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತಂದು ಅವುಗಳನ್ನು ರೈತರ ಕ್ರಾಂತಿ, ರೈತರ ಚಳುವಳಿ ಎಂದು ಕರೆಯಬಹುದು.

ಯಾವುದೇ ಸಾಮಾಜಿಕ ತುಮುಲ, ಯಾತನೆ, ನೋವುಗಳು ಒಮ್ಮಿಂದೊಮ್ಮೆಗೆ ಯಾವ ಸೂಚನೆಯನ್ನು ಕೂಡದೆ ಹುಟ್ಟುವುದಿಲ್ಲ. ಇವುಗಳಲ್ಲಿ ಕೆಲವು ತುಮುಲಗಳು, ಯಾತನೆಗಳು, ನೋವುಗಳು ಅನೇಕ ತಿಂಗಳು ಅಥವಾ ಅನೇಕ ವರ್ಷಗಳ ಕಾಲ ಸಮುದಾಯದ ಗರ್ಭದಲ್ಲಿ ಅಡಗಿದ್ದು ಅವಕಾಶ ಬಂದಾಗ, ಸಂದರ್ಭ ಬಂದಾಗ ಹೊರಬರುತ್ತವೆ. ಕೆಲವು ತುಮುಲಗಳು, ನೋವುಗಳು ದಶಕಗಳ ಕಾಲ ಸಿದ್ಧತೆಯಲ್ಲಿದ್ದು ಮುಂದೊಂದು ದಿನ ಒಮ್ಮೆಗೆ ಸ್ಫೋಟಿಸುತ್ತವೆ.

'ಕ್ರಾಂತಿಗೆ ಸನ್ನಿಹಿತವಾದ ಸಮಾಜದ ರಚನೆಯಲ್ಲಿ ಏನಾದರೂ ವೈಶಿಷ್ಟ್ಯಗಳಿವೆಯೆ ? ಕೆಲವರ ಅಭಿಪ್ರಾಯದಂತೆ ಅಂಥ ಸಮಾಜದಲ್ಲಿ ಜನರು ತಾವು ವಂಚಿತರಾಗಿದ್ದೇವೆ ಎಂಬ ಭಾವನೆ ತಳೆದಿರುತ್ತಾರೆ. ಇತರ ಸಮುದಾಯಗಳಿಗೆ ಅಥವಾ ಇತರ ವರ್ಗಗಳಿಗೆ ಲಭ್ಯವಿರುವ ಸಂಪತ್ತು, ಸ್ಥಾನಮಾನಗಳು ಲಭ್ಯವಿಲ್ಲವೆಂದು ಅವರು ಭಾವಿಸುತ್ತಾರೆ. ಇದೇ "ಸಾಪೇಕ್ಷ ಅಲಭ್ಯತೆ"ಯ ಭಾವನೆ. ಇಂಥ ಭಾವನೆಯುಳ್ಳ ಜನ ಸಮೂಹವು ಬೇರೊಂದು ಸಮೃದ್ಧ ಸಮೂಹದ ಜನರು ಪಡುತ್ತಿರುವ ಅಧಿಕಾರ, ಸ್ಥಾನಮಾನ, ಸವಲತ್ತುಗಳಿಗಾಗಿ ಬಯಸುತ್ತದೆ. ಹೀಗೆ ಬಯಸುವುದರಿಂದಲೇ ಸದ್ಯದ ಸಮಾಜದ ರಚನೆಯಲ್ಲಿ ಸಾಮಾಜಿಕ ಸಂಚರಣೆಯ ಪ್ರಕ್ರಿಯೆ ಉಂಟಾಗುತ್ತದೆ. ಇದೇ ಚಳುವಳಿ, ಸುಧಾರಣೆ ಇತ್ಯಾದಿ ಪ್ರಕ್ರಿಯೆಗಳ ಅಂತರಾರ್ಥ'[೫].

ಸಾಮಾಜಿಕ ಅಸಮಾನತೆಯು ಹೋರಾಟ, ಚಳುವಳಿಗಳನ್ನು ಹುಟ್ಟುಹಾಕುತ್ತದೆ. ಸುಧಾರಣೆಗಳನ್ನು ಪ್ರೇರೇಪಿಸುತ್ತದೆ. ಮಾರ್ಕ್ಸ್, ಲೆನಿನ್ ಮುಂತಾದ ಎಡಪಂಥೀಯ ಸಿದ್ಧಾಂತಕಾರರು ಸಾಮಾಜಿಕ ಅಸಮಾನತೆಯ ಭಾವನೆಯು ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಈ ಸಂಘರ್ಷದ ಅಂತಿಮ ಘಟ್ಟವೇ ಕ್ರಾಂತಿ. ಸಮಾಜವು ಅಮೂಲಾಗ್ರವಾಗಿ ಪರಿವರ್ತನೆಯಾಗುತ್ತದೆ.

---

೫. ಭಾರತದಲ್ಲಿ ರೈತ ಹೋರಾಟಗಳು. ಎಚ್‌ವಿ.ನಾಗೇಶ್. ಎ.ಇ.ಪುನೀತ. ಪುಟ ಸಂಖ್ಯೆ ೧೨.

ಹೋರಾಟ, ಚಳುವಳಿಯು ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಹೋರಾಟ, ಚಳುವಳಿಯ ನೇತೃತ್ವವಹಿಸಿದ ನಾಯಕನ ಪಾತ್ರವು ಪ್ರಮುಖವಾದುದು. ಚಳುವಳಿಯ ನಾಯಕರಿಗೊಂದು ಮಹತ್ವದ ಹೊಣೆಗಾರಿಕೆಯಿದೆ. ನಾಯಕರು ತಾವು ಬಯಸಿದ ಸಾಮಾಜಿಕ ಬದಲಾವಣೆಯನ್ನು ಬಹುಕಾಲ ಉಳಿಸಿಕೊಳ್ಳಬೇಕಾದರೆ ಜನರಿಗೆ ತಮ್ಮ ವಿಚಾರಗಳನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಚಳುವಳಿಗಳು, ಕ್ಷಿಪ್ರಕ್ರಾಂತಿಗಳು ನೀರುಗುಳ್ಳೆಗಳಂತೆ ಎದ್ದು ತಡವಿಲ್ಲದೆ ಮಾಯವಾಗಿಬಿಡುತ್ತವೆ. ಅಷ್ಟೇ ಅಲ್ಲದೆ ನಾಯಕರು ವಿಚಾರಗಳನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ಒಂದು ಸಂಘಟನೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಚಳುವಳಿಯ ಪ್ರಾರಂಭದಲ್ಲಿ ಚಳುವಳಿಯ ನಂತರ ಆಗಬೇಕಾದ ಕೆಲಸಗಳನ್ನು ಸೂಕ್ತ ಜನರು ನಿರ್ವಹಿಸುವಂತೆ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು.

ಉದಾಹರಣೆಗೆ: ರಾಜಕೀಯಬಲ ಸಂಘಟಕರು ಹೋರಾಟ ನಾಯಕರಾಗುವರು. ವಿಚಾರಗಳನ್ನು ಚನ್ನಾಗಿ ಪ್ರತಿಪಾದಿಸಬಲ್ಲವರು ವೈಚಾರಿಕ ಮುಖಂಡರಾಗುವರು ವಿಶೇಷವಾದ ಗುಣಲಕ್ಷಣವಿಲ್ಲದವರು ಕಾರ್ಯಕರ್ತರಾಗಿಯೇ, ಸ್ವಯಂಸೇವಕರಾಗಿಯೇ ಕೆಲಸ ಮಾಡುತ್ತಾರೆ.

ಹೋರಾಟ, ಚಳುವಳಿ, ಕ್ರಾಂತಿ, ದಂಗೆ ಇವೆಲ್ಲ ಚಲನೆಯ ವಿವಿಧ ರೂಪಗಳಾಗಿವೆ. ಚಲನೆಯ ಗತಿ, ಮಾರ್ಗ, ಕಾಲ, ದೇಶ, ಪರಿಸರಕ್ಕೆ ಅನುಗುಣವಾಗಿ ಬದಲಾಗುತ್ತದೆ. ಸಾಮಾಜಿಕ ಚಳುವಳಿಗಳು ಒಂದು ಹಂತವನ್ನು ದಾಟಿದ ಮೇಲೆ ಹೊಸ ದಾರಿಯನ್ನು ಹಿಡಿಯುವುದು, ಕೆಲವೊಮ್ಮೆ ಶಕ್ತಿಯನ್ನು ಕಳೆದುಕೊಳ್ಳುವುದು, ಮತ್ತೆ ಕೆಲವು ಬಾರಿ ಉಗ್ರರೂಪವನ್ನು ತಾಳುವುದು ಸರ್ವೆಸಾಮಾನ್ಯವಾಗಿದೆ. ಸಂಘಟನೆ ರೂಪಗೊಂಡ ಮೇಲೆ ನಿಯಮಗಳು, ಕಾರ್ಯಚಟುವಟಿಕೆಗಳು ಇತ್ಯಾದಿಗಳೆಲ್ಲ ರೂಪಗೊಳ್ಳುತ್ತವೆ. ಮುಂದೆ ಅವು ಹೆಚ್ಚು ಗಟ್ಟಿಗೊಳ್ಳುತ್ತಾ ಹೋಗುತ್ತವೆ. ಇಂಥ ಸಂಘಟನೆಗಳು ಮುಂದೆ ಒಡೆದು ಹೋಗಬಹುದು. ಮುಖ್ಯವಾಗಿ ಆಸ್ತಿಪಾಸ್ತಿಗಳು, ಆದಾಯಗಳು ಇದ್ದಾಗ, ರಾಜಕೀಯ ಲಾಭ ಹಾಗೂ ಸವಲತ್ತುಗಳು ಇದ್ದಾಗ ಸಂಘಟನೆಯು ಹಲವು ಒಳಗುಂಪುಗಳಾಗಿ ಒಡೆಯುವ ಸಂಭವನೂ ಹೆಚ್ಚು, ನಾಯಕರ ವ್ಯಕ್ತಿತ್ವ ವಿಚಾರಗಳ ಭಿನ್ನತೆಗಳನ್ನು ಆಧರಿಸಿ ಚಳುವಳಿಯಲ್ಲಿ ಹೊಸ ತಿರುವುಗಳೂ ಉಂಟಾಗಬಹುದು.

ದೇಶದ ಬೆನ್ನೆಲುಬಾದ ರೈತನನ್ನು ಸಮರ್ಥನನ್ನಾಗಿಸಬೇಕು, ರಾಜಕೀಯ ವಲಯದಲ್ಲಿ ಆತನ ಪ್ರಭಾವ ನಿರಂತರವಾಗಿರಬೇಕೆಂದು ನಮ್ಮ ಸಮಾಜದಲ್ಲಿ ಅನೇಕರು ಕಂಡ ಕನಸು ಇಂದಿಗೂ ಹಗಲುಗನಸಾಗಿಯೇ ಉಳಿದಿದೆ. ರೈತರು ಚಾರಿತ್ರಿಕವಾಗಿ ಆಗಾಗ ಬಂಡೇಳುವುದರ ಮೂಲಕ ತಮ್ಮ ಸ್ವಾತಂತ್ರ್ಯವನ್ನು ವಿಸ್ತರಿಸಿಕೊಂಡಿದ್ದಾರೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ರೈತರು ದೈನಂದಿನ ರಾಜಕೀಯದಲ್ಲಿ ಪಾಲ್ಗೊಳ್ಳುವುದಿಲ್ಲ ಸದಾ ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳುವ ಗಡಿಬಿಡಿ ನಗರ ಜೀವನದಿಂದ ದೂರವಾಗಿ ಮಣ್ಣಿನೊಂದಿಗೆ, ಪ್ರಾಣಿಗಳೊಂದಿಗೆ, ಪ್ರಕೃತಿಯೊಂದಿಗೆ ಹೊಂದಿಕೊಂಡು ಹಳ್ಳಿಗಳಲ್ಲಿ ವಾಸಿಸುತ್ತಿರುವ ಬದಲಾಗದ ಈ ರೈತ ವರ್ಗದಲ್ಲಿ ನಾಗರೀಕತೆ ತನ್ನನ್ನು ತಾನು ಹಿಡಿದಿಟ್ಟುಕೊಂಡಿದೆ. ಕೆಲವು ಸಾಮೂಹಿಕ ಘಟನೆಗಳನ್ನು ಬಿಟ್ಟರೆ ನವನಾಗರೀಕತೆಯ ನಿರ್ಮಾಣದಲ್ಲಿ ರೈತರ ಪಾತ್ರ ತೀರಾ ಗೌಣವೆಂದೇ ಹೇಳಬಹುದು.

ರೈತರು ಹಾಗೂ ಕೂಲಿಯಾಳುಗಳು ಕಡಿಮೆ ಕೂಲಿ, ಕೈಗೆಟುಕದ ಬೆಲೆಗಳು, ಫಲವಿರದ ಪೈರುಗಳು, ಮೂಳಕೆಯೊಡೆಯದ ಬೀಜಗಳು, ನಕಲಿ ಕ್ರಿಮಿನಾಶಕಗಳು, ಅವಧಿ ಮುಗಿದ ಬೀಜಗಳು, ಅವಧಿ ಮುಗಿದ ಕ್ರಿಮಿನಾಶಕಗಳು, ಗಗನಮುಟ್ಟಿದ ರಸಾಯನಿಕ ಗೊಬ್ಬರದ ಬೆಲೆ, ಸಕಾಲಕ್ಕೆ ಗೊಬ್ಬರ ದೊರೆಯದೇ ಇರುವುದರ ಕೋಪ ತಾಪಗಳ ವಿರುದ್ಧ ಹೋರಾಡಿದ್ದಾರೆ. ಬಹಿಷ್ಕಾರಕ್ಕೆ ಒಳಗಾಗಿದ್ದಾರೆ. ತಮ್ಮ ರೈತಬಾಂಧವರನ್ನು ಜಾಗೃತಿಗೊಳಿಸುವಲ್ಲಿ ಏಟುಗಳನ್ನು ತಿಂದಿದ್ದಾರೆ. ಕಾರಾಗೃಹ ಅನುಭವಿಸಿದ್ದಾರೆ. ನ್ಯಾಯಕ್ಕಾಗಿ ಜೀವತೆತ್ತಿದ್ದಾರೆ. ಗೋಲಿಬಾರ್‌ಗಳಾಗಿವೆ. ನಿದರ್ಶನಕ್ಕೆ ೧೦-೦೬-೨೦೦೮ ರಂದು ಹಾವೇರಿಯಲ್ಲಿ ರೈತ ಸಿದ್ದಲಿಂಗಪ್ಪನೇ ಗೋಲಿಬಾರ್‌ಗೆ ತುತ್ತಾದ ವ್ಯಕ್ತಿ. ಈ ಸಂದರ್ಭದಲ್ಲಿ ಸರಕಾರದ ವಿರುದ್ಧ ಕರ್ನಾಟಕ ರಾಜ್ಯದಾದ್ಯಂತ ರೈತಪರ ಕಾಳಜಿ ಹೊಂದಿದ ಸಂಘಟನೆಗಳು ಹೋರಾಟವನ್ನು ನಡೆಸಿದವು. ಹಲವು ರಾಜಕೀಯ ಪಕ್ಷಗಳು ಜಿಲ್ಲೆಯಾದ್ಯಾಂತ ರೈತ ಪರ ಹೋರಾಟಗಳು, ಪ್ರತಿಭಟನೆಗಳು ನಡೆದವು. ಈ ಹೋರಾಟ, ಪ್ರತಿಭಟನೆಗಳಲ್ಲಿ ಸರಕಾರದ, ಸರಕಾರಿ ಅಧಿಕಾರಿ ವರ್ಗದ ವಿರುದ್ಧ ಘೋಷಣೆಗಳನ್ನು, ಹಾಡುಗಳನ್ನು ಕಟ್ಟಿ ಹಾಡಲಾಗುತ್ತದೆ. ಈ ಹಾಡುಗಳಲ್ಲಿ ಮತ್ತು ಘೋಷಣೆಗಳಲ್ಲಿ ರೈತ ಚಳುವಳಿಯ ಪರಿಭಾಷೆಗಳನ್ನು ಗುರುತಿಸಬಹುದು. ಹಾಡುಗಳನ್ನು ಮತ್ತು ಘೋಷಣೆಗಳನ್ನು ಮುಂದೆ ಕೊಡಲಾಗಿದೆ.

ರೈತ ಹೋರಾಟದ ಪರಿಭಾಷೆ ಸೂಚಕ ಪದಗಳು

ಭಾರಿ ಭೂಮಾಲೀಕರು / ಭೂ ಒಡೆಯರು	ಸಾಮ್ರಾಜ್ಯಶಾಹಿ
ವರ್ಗಹಿತಾಸಕ್ತಿ	ಗುಲಾಮಗಿರಿ
ಜೀತ ವ್ಯವಸ್ಥೆ	ದೌರ್ಜನ್ಯ
ಬೆವರಿನ ಸಂಸ್ಕೃತಿಯವರು	ದಬ್ಬಾಳಿಕೆ
ಸಬ್ಸಿಡಿ	ಭೂಪ್ರಶ್ನೆ
ಸಂಯುಕ್ತರಂಗ	ಊಳಿಗಮಾನ್ಯ ಪದ್ಧತಿ
ಮುಷ್ಕರ	ಭೂ ಹೋರಾಟ
ಖಾತೆ ಪಾಣಿ	ಜಾಗತೀಕರಣ
ಉಳುಮೆಗಾರ	ಉದಾರೀಕರಣ
ಭೂಮಸೂದೆ	ಖಾಸಗೀಕರಣ
ಗೇಣಿದಾರರು	ಸಣ್ಣ, ಅತಿ ಸಣ್ಣ ರೈತರು
ವರಮಾನ	ಬಹಿಷ್ಕಾರ
ಭೂಸುಧಾರಣ ಕಾಯ್ದೆ	ಆಳುವ ವರ್ಗ
ಹಸಿರು ಕ್ರಾಂತಿ	ಊಳಿಗಮಾನ್ಯ ಶಾಹಿ
ಕಳೆನಾಶಕಗಳು	ಭಾರೀ ರೈತಾಪಿವರ್ಗ
ಯಂತ್ರಗಳು	ಜೀತದಾಳು
ಜಮೀನ್ದಾರರು	ಕೂಲಿ
ಜಾಗತಿಕ ಮಾರುಕಟ್ಟೆ	ಕೋಮುವಾದ
ದಿಕ್ಕಾರ	ಉಚ್ಛಾಟನೆ

ಜಿಂದಾಬಾದ್ ಇಂಕ್ವಿಲಾಬ್ ಜಿಂದಾಬಾದ್
ಗೋಲಿಬಾರ್
ಹತ್ಯಾಕಾಂಡ
ರ್‍ಯಾಲಿ
ಜಾಥಾ
ಕೃಷಿ ಕಾರ್ಮಿಕರು
ಸಣ್ಣ ಹಿಡುವಳಿದಾರರು
ಮಾನವ ಸರಪಳಿ
ಇನಾಂ
ಜಹಗೀರು
ಗುತ್ತಿಗೆದಾರರು
ಒಳ ಕಂದಾಯ
ಗೇಣಿ ಪದ್ಧತಿ
ರೈತರ ಹುರಿಯಾಳುಗಳು
ರೈತರ ಜನಾಂದೋಲನ
ಬಿಟ್ಟಿ ದುಡಿಮೆ
ಬಡ್ಡಿ ವ್ಯವಹಾರ
ಕೂಲಿಕಾರ
ಮೀನುಗಾರ
ಅಕ್ರಮ ದಾಸ್ತಾನುದಾರರು
ಕಳ್ಳ ಸಾಗಾಣಿಕೆದಾರರು
ಅಕ್ರಮ ವಸೂಲಿಗಳು
ರೈತರ ಕರಾಳದಿನ
ದಿಗ್ಬಂಧನ
ನಿಶಸ್ತ್ರೀಕರಣ
ಬಂಡ್ವಾಳಶಾಹಿ
ಸಾವಯವ ಕೃಷಿ
ಹೈಬ್ರೀಡ್ ತಳಿಗಳು
ಬೆಲೆ ಏರಿಕೆ
ಕಾರಾಗೃಹ
ಕೃಷಿ ಸೇನೆ
ಎಕರೆ / ಗುಂಟೆ
ಕಂದಾಯ
ತೆರಿಗೆ ವಸೂಲಿ

ಹಿಡುವಳಿದಾರ
ಸಾಗುವಳಿ
ಉಗ್ರಾಣ
ಮಣ
ಕಲಬೆರಕೆ
ಎ.ಪಿ.ಎಂ.ಸಿ
ಗೇಣಿ ಪದ್ಧತಿ
ದಸ್ತಗಿರಿ
ಸಾಲಾ ಮನ್ನಾ ಯೋಜನೆ
ರಸ್ತೆ ತಡೆ
ನಾಲೆಗಳು
ಪಿತ್ರಾರ್ಜಿತ
ಆತ್ಮಹತ್ಯೆ
ಲೂಟಿ
ಕೊಳ್ಳೆ
ಸೆರೆಮನೆ
ಗಡಿಪಾರು
ಮರಣದಂಡನೆ
ಕೋರುಪಾಲು
ಲಾವಣಿ
ರೈತ ಬಂಡಾಯ
ಕರನಿರಾಕರಣೆ
ಜಾಮೀನು
ರೈತ ದಂಗೆ
ರೈತ ಚಳುವಳಿ
ಸಾಲಬಾಧೆ
ಬೆಲೆ ಏರಿಕೆ ನಿಯಂತ್ರಣ
ಸಾರ್ವತ್ರಿಕ ಮುಷ್ಕರ
ಪ್ರತಿಭಟನಾ ರ್‍ಯಾಲಿ
ಭೂಸ್ವಾಧೀನ ನೀತಿ
ಉಳುಮೆ ಚೀಟಿ
ಹರಾಜು
ಪಟ್ಟಾ ಭೂಮಿ
ಶವವಿಟ್ಟು ಪ್ರತಿಭಟನೆ

ರೈತ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪಾರಿಭಾಷಿಕ ಪದಗಳನ್ನು ವಿವರಿಸಲಾಗಿದೆ.

೧) ಕೃಷಿ ಸೇನೆ :

ಬೇಸಾಯ, ವ್ಯವಸಾಯ ಮಾಡುವವರ ದಂಡು, ಸೈನ್ಯ ಎಂಬರ್ಥವಾಗಿದೆ. ರೈತ ಹೋರಾಟ, ಚಳುವಳಿಯಲ್ಲಿ ಈ ಪದ ಬಳಕೆಯಾಗಿರುವುದು ಕಂಡು ಬರುತ್ತದೆ. ಅಪಾರವಾದ ಸೈನಿಕರ ಸಂಖ್ಯೆಯನ್ನು ಹೋಲುವಂತೆ ಬೀದಿಗಿಳಿದು ಹೋರಾಟದಲ್ಲಿ ನಿರತರಾಗಿರುವ ವ್ಯವಸಾಯಗಾರರನ್ನು, ಕೃಷಿಕರನ್ನು ಪ್ರತಿನಿಧಿಸುವ ಅರ್ಥದಲ್ಲಿ ಈ ಪದವನ್ನು ಬಳಕೆಮಾಡಲಾಗಿದೆ. ವಾಯುಸೇನೆ, ನೌಕಾಸೇನೆ ಎಂಬ ಮಾದರಿಯಲ್ಲಿ ಕೃಷಿ ಸೇನೆ ಎಂದು ಬಳಸಲಾಗಿದೆ. ಸೇನೆ ಎಂಬ ಪದವನ್ನು ಹಿಂದೆ ಸೈನಿಕರಿಗೆ ಮಾತ್ರ ಬಳಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಹೋರಾಟಗಳಲ್ಲಿ ದಂಡಿನೋಪಾದಿಯಲ್ಲಿರುವ ಪ್ರತಿಭಟನಾಕರರನ್ನು, ಚಳುವಳಿಕಾರರನ್ನು ಸೇನೆ ಎಂದು ಬಳಸಲಾಗುತ್ತದೆ. ಕಾರ್ಮಿಕ ಸೇನೆ, ವಿದ್ಯಾರ್ಥಿ ಸೇನೆ, ಇತ್ಯಾದಿ ವಿವಿಧ ವಲಯಗಳಲ್ಲಿ ಬಳಸುವುದು ಕಂಡುಬರುತ್ತದೆ.

೨) ಬಂಡವಾಳಶಾಹಿ :

ಬಂಡವಾಳಗಾರ, ಐಶ್ವರ್ಯದ ಮದದಿಂದ ಕೂಡಿದ. ರೈತ ಮತ್ತು ಕಾರ್ಮಿಕ ಚಳುವಳಿಗಳಲ್ಲಿ ವಿಶೇಷವಾಗಿ ಬಳಕೆಯಾಗುವ ಪದವಾಗಿದೆ. ಕನಿಷ್ಟ ಕೂಲಿಯನ್ನು ಕೊಟ್ಟು ಅಧಿಕ ಲಾಭ ಪಡೆಯುವ ಶ್ರೀಮಂತ ವರ್ಗವನ್ನು, ದುಡಿಸಿಕೊಳ್ಳುವ ವರ್ಗವನ್ನು ಕುರಿತು ಹೇಳಲಾಗಿದೆ. ದುಡಿಮೆಗೆ ತಕ್ಕ ವೇತನ ಪಡೆಯಬೇಕೆಂಬುದು ದುಡಿಯುವ ವರ್ಗದ ಧೋರಣೆಯಾದರೆ, ಕನಿಷ್ಟ ಕೂಲಿ ಕೊಟ್ಟು ಅಧಿಕ ಲಾಭ (ಬಂಡವಾಳ) ಪಡೆಯಬೇಕೆಂಬುದು ದುಡಿಸಿಕೊಳ್ಳುವ ವರ್ಗದ ಧೋರಣೆಯಾಗಿದೆ. ಈ ಎರಡೂ ವರ್ಗಗಳ ಮಧ್ಯದಲ್ಲಿ ಹೊಂದಾಣಿಕೆಯಿಲ್ಲದಿದ್ದಾಗ ಪ್ರತಿಭಟನೆ, ಹೋರಾಟಗಳು ಪ್ರಾರಂಭವಾಗುತ್ತವೆ. ಈ ಹಿನ್ನೆಲೆಯಲ್ಲಿ ದುಡಿಯುವ ವರ್ಗ ದುಡಿಸಿಕೊಳ್ಳುವ ಬಂಡವಾಳಗಾರರ ವಿರುದ್ಧ ಕೂಗುವ ದಿಕ್ಕಾರಗಳಲ್ಲಿ, ಘೋಷಣೆಗಳಲ್ಲಿ, ಹಾಡುಗಳಲ್ಲಿ ಈ ಪದ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಚಳುವಳಿಗಳಲ್ಲಿ ಈ ಪದವನ್ನು ದುಡಿಸಿಕೊಳ್ಳುವವರನ್ನು ಕುರಿತು ಹೇಳಲಾಗಿದೆ. ಸಾಮ್ರಾಜ್ಯಶಾಹಿ, ಊಳಿಗಮಾನ್ಯಶಾಹಿ, ಪುರೋಹಿತಶಾಹಿ ಈ ಮಾದರಿಯಲ್ಲಿ ಬಂಡವಾಳಶಾಹಿ ಎಂಬ ಪದವನ್ನು ಬಳಕೆ ಮಾಡಲಾಗಿದೆ.

೩) ಗೋಲಿಬಾರು :

ಬಂದೂಕು ಮೊದಲಾದವುಗಳಿಂದ ಗುಂಡನ್ನು ಹಾರಿಸುವುದಕ್ಕೆ ಗೋಲಿಬಾರು ಎಂದು ಕರೆಯಲಾಗುತ್ತದೆ. ಯಾವುದೇ ವಲಯದಲ್ಲಿ ಪ್ರತಿಭಟನಕಾರರು ಅಥವಾ ಚಳುವಳಿಗಾರರು ತಮ್ಮ ಹೋರಾಟದ ಸಂದರ್ಭದಲ್ಲಿ ಸಾಮಾಜಿಕ ಆಸ್ತಿಪಾಸ್ತಿಯನ್ನು ದಮನ ಮಾಡಲು ಮುಂದಾದಾಗ ಅಥವಾ ರಕ್ಷಣಾ ಇಲಾಖೆಗೆ ಪ್ರತಿಭಟನೆಕಾರರನ್ನು ಹತೋಟಿಗೆ ತರಲಾಗದೇ ಇದ್ದಾಗ ರಕ್ಷಣಾ ಪಡೆಯು ಪ್ರತಿಭಟನಕಾರರನ್ನು ಚದುರಿಸಲು ಗುಂಡುಹಾರಿಸಲಾಗುತ್ತದೆ. ಗುಂಡುಗಳಿಗೆ ಆಹುತಿಯಾದ ಪ್ರತಿಭಟನಕಾರರ ಸಾವನ್ನು ಗೋಲಿಬಾರು ಎಂದು ಕರೆಯಲಾಗುತ್ತದೆ. ನಿದರ್ಶನಕ್ಕೆ ೧೦-೦೬-೨೦೦೮

ರಂದು ಹಾವೇರಿಯಲ್ಲಿ ರೈತ ಸಿದ್ಧಲಿಂಗಪ್ಪನೇ ಗೋಲಿಬಾರ್‌ಗೆ ತುತ್ತಾದ ವ್ಯಕ್ತಿ. ಈ ಸಂದರ್ಭದಲ್ಲಿ ಸರಕಾರದ ವಿರುದ್ಧ, ರಕ್ಷಣಾ ಪಡೆಯ ವಿರುದ್ಧ ರಾಜ್ಯಾದ್ಯಾಂತ ರೈತಪರ ಕಾಳಜಿ ಹೊಂದಿದ ಸಂಘಟನೆಗಳು, ರಾಜಕೀಯ ಪಕ್ಷಗಳು ಹೋರಾಟವನ್ನು ನಡೆಸಿದವು. ಈ ಹೋರಾಟಗಳಲ್ಲಿ ಪ್ರತಿಭಟನಕಾರರು ಕೂಗುವ ಘೋಷಣೆಗಳಲ್ಲಿ ಈ ಗೋಲಿಬಾರು ಎನ್ನುವ ಪದವನ್ನು ವಿಶೇಷವಾಗಿ ಬಳಸುತ್ತಿದ್ದರು.

೪) ಅಕ್ರಮ ದಾಸ್ತಾನುದಾರರು :

ರೈತ ಚಳುವಳಿಗಳಲ್ಲಿ ಅಥವಾ ಹೋರಾಟಗಳಲ್ಲಿ ವಿಶೇಷವಾಗಿ ಬಳಕೆಯಾದ ಪದವಾಗಿದೆ. ನಿಯಮಕ್ಕೆ ವಿರೋಧವಾಗಿ ಮಾರಾಟ ಮಾಡುವ ಸಾಮಾಗ್ರಿಗಳನ್ನು ಸಂಗ್ರಹಣೆ, ಶೇಖರಣೆ ಮಾಡುವವರನ್ನು ಅಕ್ರಮದಾಸ್ತಾನುದಾರರು ಎಂದು ಕರೆಯಲಾಗುವುದು. ಕಳೆದ ಜುಲೈ ತಿಂಗಳಲ್ಲಿ ರಾಜ್ಯಾದ್ಯಾಂತ ಗೊಬ್ಬರ ವ್ಯಾಪಾರಿಗಳು ಗೊಬ್ಬರದ ಬೇಡಿಕೆಯನ್ನು ಹೆಚ್ಚಿಸಲು ಮತ್ತು ಅಧಿಕ ಲಾಭ ಪಡೆಯಲು ಗೊಬ್ಬರವನ್ನು ಅಕ್ರಮ ದಾಸ್ತಾನು ಮಾಡಿದ್ದರು. ಈ ಅಕ್ರಮ ಗೊಬ್ಬರ ಸಂಗ್ರಹಣೆ ರೈತರಿಗೆ ಗೊತ್ತಾದಾಗ ಬೀದಿಗಿಳಿದು ಹೋರಾಟ ಮಾಡುವಾಗ ಗೊಬ್ಬರದ ಅಂಗಡಿಗಳಿಗೆ ಲೂಟಿ ಮಾಡಿ ಗೊಬ್ಬರವನ್ನು ಹೊತ್ತುಕೊಂಡು ಹೋದರು. ಈ ಸಂದರ್ಭದಲ್ಲಿ ರೈತರು ತಮ್ಮ ಹೋರಾಟಗಳಲ್ಲಿ ಈ ಪದವನ್ನು ಅಕ್ರಮ ವಸೂಲಿಗಳು, ಕಳ್ಳ ಸಾಗಾಣಿಕೆದಾರರು ಎಂದು ಬಳಕೆ ಮಾಡಿದ್ದಾರೆ.

೫) ಮನ್ನಾ :

ಮನ್ನಾ ಎಂದರೆ ವಿನಾಯಿತಿ ಅಥವಾ ರದ್ದು ಎಂದು ಅರ್ಥ ಮೂಡಿಬರುತ್ತದೆ. ಮನ್ನಾ ಎಂಬ ಪದವನ್ನು ರದ್ದುಪಡಿಸಲಾಗಿದೆ ಎಂಬರ್ಥದಲ್ಲಿ ಬಳಸಲಾಗುತ್ತಿತ್ತು. ಇತ್ತೀಚೆಗೆ ರೈತ ಹೋರಾಟಗಳಲ್ಲಿ ಮನ್ನಾ ಪದದ ಹಿಂದೆ ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ಪದಗಳನ್ನು ಹಚ್ಚಿ ಬಳಸಲಾಗುತ್ತದೆ. ಸಾಲ ಮನ್ನಾ, ಬಡ್ಡಿ ಮನ್ನಾ ಇತ್ಯಾದಿಯಾಗಿ ಬಳಸಲಾಗುತ್ತದೆ. ಈ ಪದವು ವಿಶೇಷವಾಗಿ ರೈತ ಹೋರಾಟಗಳಲ್ಲಿ ಮಾತ್ರ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಬೇರೆ ವಲಯಗಳಲ್ಲಿ ಈ ಪದವನ್ನು ಬಳಸದೆ ರದ್ದುಪಡಿಸಲಾಗಿದೆ, ಕ್ಯಾನ್ಸಲ್ ಮಾಡಲಾಗಿದೆ, ತೆಗೆದು ಹಾಕಲಾಗಿದೆ ಇತ್ಯಾದಿಯಾಗಿ ಬಳಕೆ ಮಾಡುತ್ತಿರುವುದು ಕಂಡುಬರುತ್ತದೆ.

ರೈತ ಹೋರಾಟದ ಹಾಡುಗಳಲ್ಲಿಯ ಪರಿಭಾಷೆಯ ಸ್ವರೂಪ :

ಸಾಮಾನ್ಯವಾಗಿ ಹೋರಾಟದ ಪರಿಭಾಷೆ ಆಯಾ ಸಾಮಾಜಿಕ ಸಂಘಟನೆಯ ಮೇಲೆ ನಿರ್ಧರಿತವಾಗಿರುತ್ತದೆ. ರೈತ ಹೋರಾಟದ ಹಾಡುಗಳಲ್ಲಿ ಬಳಕೆಯಾಗಿರುವ ಪರಿಭಾಷೆ ದೇಶೀಯ ನೆಲೆಯದಾಗಿರುತ್ತದೆ. ಅಲ್ಲಲ್ಲಿ ಕೆಲವೊಂದು ಇಂಗ್ಲೀಷ್, ಹಿಂದಿ ಭಾಷೆಯ ಪದಗಳು ಸೇರಿರುವುದು ಕಂಡು ಬರುತ್ತದೆ. ಸಾಮಾಜಿಕ ಪರಿಸರದಲ್ಲಿನ ಭಾಷೆಯನ್ನು ಗಮನಿಸಿ ಹಾಡುಗಳನ್ನು ರಚನೆ ಮಾಡಲಾಗಿದೆ. ಸಂಸ್ಕೃತದ ಪ್ರಭಾವ ತುಂಬಾ ಕಡಿಮೆ ಎಂದೆ ಹೇಳಬಹುದು. ರೈತ ಹೋರಾಟದ ಪರಿಭಾಷೆ ಎಂದರೆ ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆಯಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ

ಆಯಾ ಹೋರಾಟದ ವಸ್ತು, ಸಂದರ್ಭ, ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನೆಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಶೈಕ್ಷಣಿಕವಾಗಿ ಹೋರಾಟದಲ್ಲಿನ ಸಂದರ್ಭದ ಭಾಷೆ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ಒಟ್ಟಿನಲ್ಲಿ ರೈತ ಹೋರಾಟದ ಹಾಡುಗಳು ಕರ್ನಾಟಕದ ಸಂಘರ್ಷಮಯ ಸಾಂಸ್ಕೃತಿಕ ಬದುಕಿನ ಆಸ್ತಿಯಾಗಿ ಉಳಿದು ಬೆಳೆದುಕೊಂಡು ಬಂದಿವೆ ಎಂಬುದು ವಾಸ್ತವಿಕ. ಹಲವು ಆಡಿಯೋ ಕ್ಯಾಸೆಟ್‌ಗಳು ಜನಪ್ರೀಯತೆಗಳಿಸಿವೆ. ರೈತ ಹೋರಾಟದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪ್ರಮುಖವಾದ ಹೋರಾಟದ ಹಾಡುಗಳನ್ನು ಗಮನಿಸಿರಿ.

'ಹಳ್ಳಿಗಾಡ ಹಸುಗೂಸೇ ಹಸು ಕಾಯೋ ಧೀರ ಬಾಲನೇ
ಹಾಲು ಮರೆತು ದಿನವೆಷ್ಟಾಯಿತೋ
ಓ ಹಾಲುಗೆನ್ನೆಯ ಜೀತಗಾರ......
ಜೀತಕ್ಕೆ ಸೇರಿ ದಿನವೆಷ್ಟಾಯಿತೋ'

'ದೇಶಕೆ ಅನ್ನ ಬೆಳೆಯುವ ರೈತಗೆ
ಸಾಯುವ ಸ್ಥಿತಿಯು ಬಂದಾಯ್ತು
ಬೀಜ ಗೊಬ್ಬರ ತೆರಿಗೆಯ ಬೆಲೆಯು
ಗಗನವ ದಾಟಿ ಹೋಗಾಯ್ತು'

'ಮಾನವ ಅತ್ಯಾಚಾರ ನಿತ್ಯ ನೋಡಮ್ಮ
ದಲಿತ ರೈತ ಕೂಲಿಗಳ ದಮನ ನೋಡಮ್ಮ
ಕೋಮುಜಾತಿ ಗಲಭೆಗಳಿಗೆ ಕೊನೆಯೆ ಇಲ್ಲವಮ್ಮ,
ಮೇವು ಹವಾಲ ಹಗರಣಗಳ ಸಾಲು ನೋಡಮ್ಮ'

'ಬಂಧನದ ಬಂದೀಖಾನೆ ನಿನ್ನ ನಾಡಮ್ಮ
ನಿರುದ್ಯೋಗಿ ವಿದ್ಯಾವಂತರ ದಂಡು ನೋಡಮ್ಮ
ಗೋಲಿಬಾರು ಗುಂಡುಗಳ ಮಳೆಯೇ ಸುರಿವುದಮ್ಮ
ಮುಗ್ಧ ಜನರ ರಕ್ತವೇ ಹರಿಯುತ್ತಿರುವುದಮ್ಮ'.

ಈ ರೈತ ಹೋರಾಟದ ಹಾಡುಗಳಲ್ಲಿಯ ಜೀತಗಾರ, ತೆರಿಗೆ, ಅತ್ಯಾಚಾರ, ಕೋಮುಜಾತಿ, ಗೋಲಿಬಾರು ಮುಂತಾದ ಪದಗಳು ರೈತ ಹೋರಾಟ ಅಥವಾ ಚಳುವಳಿಯ ಪಾರಿಭಾಷಿಕ ಪದಗಳಾಗಿ ರೂಪಗೊಂಡಿವೆ. ರೈತಾಪಿ ವರ್ಗವು ಕಳೆದ ನಾಲ್ಕೈದು ದಶಕಗಳಿಂದ ತಮಗಾದ ಅನ್ಯಾಯ, ಶೋಷಣೆ, ನೋವಿನ ತುಡಿತವನ್ನು ಇವು ಧ್ವನಿಸುತ್ತವೆ. ಇಂತಹ ವಿಶಿಷ್ಟವಾದ ಪದಗಳೇ ಈ ಚಳುವಳಿಯ ಪಾರಿಭಾಷಿಕ ಪದಗಳಾಗಿ ಪರಿಣಮಿಸುತ್ತವೆ. ಇಂತಹ ಪಾರಿಭಾಷಿಕ ಪದಗಳು ಹೋರಾಟದ ಸಂದರ್ಭ, ಸನ್ನಿವೇಶಕ್ಕನುಗುಣವಾಗಿ ರೈತ ಹೋರಾಟಗಳಲ್ಲಿ ಬಳಕೆಯಾಗುತ್ತವೆ.

ರೈತ ಹೋರಾಟ ಅಥವಾ ಚಳುವಳಿಯಲ್ಲಿಯ ಘೋಷಣೆಗಳಲ್ಲಿ ಪರಿಭಾಷೆ :

ರೈತ ಪರಿಭಾಷೆ ಎಂದರೆ, ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆ ಎಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ ಆಯಾ ಹೋರಾಟದ ವಸ್ತು, ಸಂದರ್ಭ, ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನೆಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಶೈಕ್ಷಣಿಕವಾಗಿ ಹೋರಾಟದಲ್ಲಿನ ಸಂದರ್ಭದ ಭಾಷೆ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ಯಾವುದೇ ಹೋರಾಟಕ್ಕೆ ಘೋಷಣೆಗಳು ಹೋರಾಟದ ಜೀವಾಳವಾಗಿರುತ್ತವೆ. ಈ ಘೋಷಣೆಗಳು ಹೋರಾಟದ ಮೂಲ ಧೋರಣೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಘೋಷಣೆಗಳು ಹೋರಾಟಕ್ಕೆ ತಕ್ಕಂತೆ ನಿರ್ಮಾಣವಾಗಿರುತ್ತವೆ. ಹೋರಾಟಕ್ಕೆ ತಕ್ಕಂತೆ ಘೋಷಣೆಗಳು ಕೂಡ ಪಾರಿಭಾಷಿಕ ಪದಗಳಿಂದ ಕೂಡಿರುತ್ತವೆ. ಘೋಷಣೆಗಳನ್ನು ಹೋರಾಟದ ಹಾಡುಗಳಲ್ಲಿಯ, ಕ್ರಾಂತಿ ಗೀತೆಗಳಲ್ಲಿಯ ಕೆಲವೊಂದು ಸಾಲುಗಳನ್ನು ಎತ್ತಿಕೊಂಡು ಎಣೆಯುವುದು ಒಂದು ರೀತಿಯಾದರೆ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿ ಮಾಡುವುದು ಇನ್ನೊಂದು ರೀತಿಯಾಗಿರುತ್ತದೆ. ನಿದರ್ಶನಕ್ಕೆ ಕೆಲವೊಂದು ಘೋಷಣೆಗಳನ್ನು ದಾಖಲಿಸಲಾಗಿದೆ.

೧) ಉಳುವವನೆ....... ಹೊಲದ ಒಡೆಯ.

೨) ಬೆವರು ಸುರಿಸುವವನೇ....... ಬೆಳೆಯ ಒಡೆಯ.

೩) ಸಮಾನ ಕೆಲಸಕ್ಕೆ....... ಸಮಾನ ಕೂಲಿ.

೪) ಭೂಮಿಯಲ್ಲಿ ಬೆವರು ಸುರಿಸುವವನಿಗೆ....... ಬೆಳೆಯ ಒಡೆತನ ಸಿಗಬೇಕು.

೫) ಭಾರತದ ರೈತರೇ, ಇನ್ನು ಮೇಲೆ ನಿಮ್ಮ ಬೆವರಿನ ಬೆಳಗೆ ನೀವೇ ಒಡೆಯರು....... ಒಡೆಯರು, ನೀವು ಉಳುವ ಭೂಮಿಯ ಕಂದಾಯವನ್ನು ಸರ್ಕಾರಕ್ಕೆ ಕಟ್ಟಲು ಸಿದ್ಧವಾಗಿ........ ಸಿದ್ಧವಾಗಿ.

೬) ನಮ್ಮದು ಬಿಡುವಿಲ್ಲದ, ದಣಿವಿಲ್ಲದ, ಎದೆಗುಂದದ, ಛಲತುಂಬಿದ ದೇಶ ರಕ್ಷಿಸಲು ಸ್ವಾಭಿಮಾನಿ ಹೋರಾಟ.......ದೇಶ ರಕ್ಷಿಸಲು ಸ್ವಾಭಿಮಾನಿ ಹೋರಾಟ.

೭) ಜಮೀನ್ದಾರ ನಾಶವಾಗಲಿ .... ಸಾಮ್ರಾಜ್ಯಶಾಹಿ ನಾಶವಾಗಲಿ.

೮) ಅಕ್ರಮ ಗೇಣಿವಸೂಲಿ ನಿಲ್ಲಲ್ಲಿ................ನಿಲ್ಲಲ್ಲಿ.

೯) ರೈತರಿಗೆ ಜಯವಾಗಲಿ....... ಜಯವಾಗಲಿ.

೧೦) ಕ್ರಾಂತಿ ಚಿರಾಯುವಾಗಲಿ....... ಚಿರಾಯುವಾಗಲಿ.

೧೧) ಗೇಣಿಯನ್ನು ಕೊಡದಿರಿ ....ಯುದ್ಧಕ್ಕೆ ಸೇರದಿರಿ.

೧೨) ಯುದ್ಧಕ್ಕೆ ವಂತಿಕೆ ನೀಡದಿರಿ....... ನೀಡದಿರಿ.

೧೩) ಇಂಕ್ವಿಲಾಬ್ ಜಿಂದಾಬಾದ್....... ಕಮುನಿಷ್ಟ ಪಕ್ಷ ಜಿಂದಾಬಾದ್.

೧೪) ರೈತ ವಿರೋಧಿ ನೀತಿಗೆ ದಿಕ್ಕಾರ................ದಿಕ್ಕಾರ.

೧೫) ಜನ ವಿರೋಧಿ ನೀತಿ ಸರಕಾರಕ್ಕೆ ದಿಕ್ಕಾರ................ದಿಕ್ಕಾರ.

೧೬) ಅಮಾಯಕ ರೈತರ ಮೇಲೆ ಗೋಲಿಬಾರ್ ಮಾಡಿದ ಸರಕಾರಕ್ಕೆ ದಿಕ್ಕಾರ...............ದಿಕ್ಕಾರ.

೧೭) ಬೇಕೇ ಬೇಕು....... ನ್ಯಾಯಾ ಬೇಕು.

೧೮) ರೈತ ಕಾರ್ಮಿಕರೇ ಒಂದಾಗಿ............ಒಂದಾಗಿ.

೧೯) ಬೇಕೆ ಬೇಕು................ಗೊಬ್ಬರ ಬೇಕು.

೨೦) ಗೂಂಡಾ ಮುಖ್ಯಮಂತ್ರಿ ಯಡಿಯೂರಪ್ಪನಿಗೆ ದಿಕ್ಕಾರ...............ದಿಕ್ಕಾರ.

೨೧) ಜಿಂದಾಬಾದ್..................ಜಿಂದಾಬಾದ್.

೨೨) ಹಾವೇರಿಯಲ್ಲಿ ಗೋಲಿಬಾರ್ ಮಾಡಿದ ಸರಕಾರಕ್ಕೆ ದಿಕ್ಕಾರ...............ದಿಕ್ಕಾರ.

೨೩) ರೈತರ ಹೋರಾಟಕ್ಕೆ ಜಯವಾಗಲಿ....... ಜಯವಾಗಲಿ.

೨೪) ಗೊಬ್ಬರ ಕೇಳಲು ಹೋದ ರೈತರಿಗೆ ಗುಂಡು ಹಾರಿಸಿದ ಗೂಂಡಾ ಮುಖ್ಯಮಂತ್ರಿಗೆ ದಿಕ್ಕಾರ...............ದಿಕ್ಕಾರ.

೨೫) ಕೋಮುವಾದಿ ಬಿ.ಜೆ.ಪಿ. ಸರಕಾರಕ್ಕೆ ದಿಕ್ಕಾರ...............ದಿಕ್ಕಾರ.

೨೬) ಹೋರಾಟ.....................ಹೋರಾಟ ನ್ಯಾಯ ಸಿಗುವವರೆಗೆ ಹೋರಾಟ.

೨೭) ದೇಶದ ರೈತರನ್ನು ಕೊಲೆ ಮಾಡುತ್ತಿರುವ ಕೊಲೆಗಡುಕ ಸರಕಾರಕ್ಕೆ ದಿಕ್ಕಾರ..............ದಿಕ್ಕಾರ.

೨೮) ಎಲ್ಲ ರೈತರು ಒಂದಾಗಿ................ಒಂದಾಗಿ,
ಬ್ರಷ್ಟರನ್ನು ಮೆಟ್ಟಲು ಮುಂದಾಗಿ........... ಮುಂದಾಗಿ.

೨೯) ಸರಕಾರದ ರೈತ ವಿರೋಧಿ ನೀತಿಗೆ ದಿಕ್ಕಾರ...............ದಿಕ್ಕಾರ.

೩೦) ಜನಪರ ಚಳುವಳಿಗಳು ಎಂದಿಗೂ ಸಾಯುವುದಿಲ್ಲ.............ಸಾಯುವುದಿಲ್ಲ.

೩೧) ವಿದ್ಯಾರ್ಥಿಗಳ, ರೈತರ, ಕಾರ್ಮಿಕರ, ಯುವಕರ ಐಕ್ಯತೆ ಚಿರಾಯುವಾಗಲಿ................ ಚಿರಾಯುವಾಗಲಿ.

೩೨) ರೈತ ಸಾಲಗಾರನಲ್ಲ ಈ ಭ್ರಷ್ಟ ಸರಕಾರವೇ ಬಾಕಿದಾರ .... ಬಾಕಿದಾರ.

೩೩) ರೈತನು ಧ್ವನಿಯನ್ನು ಎತ್ತಿದನೆಂದರೆ ಮಂತ್ರಿಗಳ ಕುರ್ಚಿಗಳು ಬೀಳುವವು .... ಬೀಳುವವು.

೩೪) ಬಂಡವಾಳಶಾಹಿ–ಭೂಮಾಲಿಕರ ದೌರ್ಜನ್ಯದ ದಮನಕ್ಕಾಗಿ ನಮ್ಮ ಬದುಕಿನ ನಿತ್ಯ ಹೋರಾಟ............ಹೋರಾಟ.

೩೫) ರೈತ ಕಾರ್ಮಿಕನ ಸೊಂಟಗಳನ್ನು ಮುರಿದು ಲಕ್ಷ ಲಕ್ಷ, ಕೋಟಿಗಟ್ಟಲೆ ಖಜಾನೆ ಲೂಟಿ ಮಾಡುತ್ತಿರುವ ಭ್ರಷ್ಟರನ್ನು ತುಳಿಯೋಣ............ತುಳಿಯೋಣ.

೩೬) ಭೂಮಿಯೆಂಬುದು ಸರಕಾರದ ಸಂಪತ್ತಲ್ಲ, ಇದು ನಮ್ಮ ಬಡಜನತೆಯ ಉದ್ದಾರಕ್ಕಾಗಿ, ರೈತಜನಪರ ರಾಜಕೀಯಕ್ಕಾಗಿ, ರೈತರನ್ನೇ ರಾಜರನ್ನಾಗಿ ಮಾಡಲು ನಮ್ಮ ಕೆಂಪು ರಕ್ತದ ಕ್ರಾಂತಿಯೊಂದಿಗೆ ಚಳುವಳಿಗೆ ಮುನ್ನುಗ್ಗೋಣ........ಮುನ್ನುಗ್ಗೋಣ.

೩೭) ಮಳೆಗೆ ಅಂಜಲಿಲ್ಲ ಚಳಿಗೆ ನಡುಗಲಿಲ್ಲ, ಗುಡುಗು–ಸಿಡಿಲಿಗೆ ಬೆಚ್ಚಲಿಲ್ಲ, ಹಸಿವನ್ನು ಲೆಕ್ಕಿಸಲಿಲ್ಲ, ಬೆಳಕು ಕತ್ತಲನ್ನು ಎಣಿಸಲಿಲ್ಲ, ಕ್ರಾಂತಿಕಾರಿಗಳು ನಾವು ನಮಗಿಲ್ಲ ಲೆಕ್ಕಕ್ಕೆ ಸಾವು ನೋವು.

೩೮) ರೈತರು ಹಸಿವೆಯಿಂದ ಸತ್ತರು, ಅಧಿಕಾರದ ದವಡೆಯಲ್ಲಿ ತೇಲುತ್ತಿರುವ ಭ್ರಷ್ಟ ಬಂಡವಾಳಶಾಹಿಗಳ ಏಜೆಂಟರನ್ನು ಗಲ್ಲಿಗಾಕಲು ನಮ್ಮ ಹೋರಾಟ..........ನಮ್ಮ ಹೋರಾಟ.

೩೯) ಗೊಬ್ಬರ ಕೊಡದ ಗಬ್ಬು ಸರಕಾರಕ್ಕೆ ದಿಕ್ಕಾರ.............ದಿಕ್ಕಾರ.

೪೦) ರೈತರಿಗೆ ಸಾಲವನ್ನು ಕೊಡದೆ ಶ್ರೀಮಂತರ ಏಜೆಂಟರುಗಳಾಗಿ ರೈತರಿಗೆ ಮೋಸ ಮಾಡುತ್ತಿರುವ ಬ್ಯಾಂಕ್‌ಗಳಿಗೆ ದಿಕ್ಕಾರ...........ದಿಕ್ಕಾರ.

೪೧) ಬಡ್ಡಿ-ಚಕ್ರಬಡ್ಡಿ ಹಾಕಿ ರೈತರ ಮನೆ, ಭೂಮಿಗಳನ್ನು ಕಿತ್ತುಕೊಳ್ಳುತ್ತಿರುವ ಭ್ರಷ್ಟ ಬ್ಯಾಂಕುಗಳಿಗೆ ದಿಕ್ಕಾರ..........ದಿಕ್ಕಾರ.

೪೨) ಪಾರ್ಲಿಮೆಂಟಿನಲ್ಲಿ ರೈತರಿಗೆ ಸಾಲವನ್ನು ನೀಡುವ ಬದಲು ಹಣವನ್ನು ನುಂಗುವ ಬಗ್ಗೆ ಚರ್ಚೆ ಮಾಡುವುದರಲ್ಲಿ ಕಾಲಕಳೆಯುತ್ತಿರುವ ಭ್ರಷ್ಟ ಮಂತ್ರಿಗಳಿಗೆ ದಿಕ್ಕಾರ...........ದಿಕ್ಕಾರ.

೪೩) ಸಾಂಸ್ಥಿಕ ಸಾಲ ನೀಡಿಕೆಯಲ್ಲಿ ರೈತರ ಬೆನ್ನಿಗೆ ಚೂರಿ ಹಾಕುತ್ತಿರುವ ನ್ಯಾಯಾಲಯಗಳಿಗೆ ದಿಕ್ಕಾರ..........ದಿಕ್ಕಾರ.

೪೪) ಬಡ ರೈತರಿಗೆ, ಕೂಲಿಕಾರರಿಗೆ, ದುರ್ಬಲ ಜನರಿಗೆ ಕೃಷಿ ಸಾಲವನ್ನು ನೀಡದೇ ಬಂಡವಾಳಶಾಹಿಗಳಿಗೆ ಹಣ ಚೆಲ್ಲುತ್ತಿರುವ ಭ್ರಷ್ಟ ವಾಣಿಜ್ಯ ಬ್ಯಾಂಕ್‌ಗಳಿಗೆ ದಿಕ್ಕಾರ............ದಿಕ್ಕಾರ.

೪೫) ರೈತರಿಗೆ ಕಾನೂನುವ್ಯವಸ್ಥೆ ಬಿಟ್ಟು ದುಬಾರಿ ಬಡ್ಡಿಯನ್ನು ಜಾರಿ ಮಾಡುತ್ತಿರುವ ಸರಕಾರಗಳಿಗೆ ದಿಕ್ಕಾರ...............ದಿಕ್ಕಾರ.

೪೬) ರೈತ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲೇಬೇಕು.........ನೀಡಲೇಬೇಕು.

೪೭) ಸ್ವಾಭಿಮಾನಿ ರೈತರ ಬದುಕುಗಳನ್ನು ಭೂಮಾಲೀಕರಿಗೆ ಮಾರುತ್ತಿರುವ ಪುಂಡರಿಗೆ ದಿಕ್ಕಾರ...............ದಿಕ್ಕಾರ.

೪೮) ರೈತರಿಗೆ ಅನ್ನಕೊಡುವ ಬದಲು ಕುಡಿಯಲು ವಿಷವನ್ನು ಕೊಡುತ್ತಿರುವ ಸರಕಾರಕ್ಕೆ ದಿಕ್ಕಾರ...............ದಿಕ್ಕಾರ.

೪೯) ರೈತರ ಭೂಮಿಗೆ ನೀರು ಕೊಡದಿರುವ ಕೆಟ್ಟ ಆಡಳಿತ ವ್ಯವಸ್ಥೆಗೆ ದಿಕ್ಕಾರ...............ದಿಕ್ಕಾರ.

೫೦) ರೈತರನ್ನು ಕೈಹಿಡಿಯಬೇಕಾದ ಸರಕಾರಗಳು ದಲ್ಲಾಳಿಗಳ ಕೈ ನೆಕ್ಕುತ್ತಿರುವುದು ನಾಚಿಕೆಗೇಡು........ನಾಚಿಕೆಗೇಡು.

೫೧) ರೈತರು ಅನ್ನಕ್ಕಾಗಿ ಧ್ವನಿ ಎತ್ತಿದರೆ ಗುಂಡುಗಳಿಂದ ಕೊಲೆ ಮಾಡುವ ಸರಕಾರಕ್ಕೆ ದಿಕ್ಕಾರ..........ದಿಕ್ಕಾರ.

೫೨) ರೈತರ ಬೆವರಿನ ಶ್ರಮಶಕ್ತಿಯನ್ನು ಸ್ವಾರ್ಥಕ್ಕಾಗಿ ಮೀಸಲಿಟ್ಟುಕೊಂಡ ಬಂಡ್ವಾಳಶಾಹಿಗಳಿಗೆ ದಿಕ್ಕಾರ..........ದಿಕ್ಕಾರ.

೫೩) ರೈತರ, ಕಾರ್ಮಿಕರ, ಗ್ರಾಮಾಂತರ ಕಸಬುದಾರರ ಸಂತತಿಗಳ ಬದುಕಿನಲ್ಲಿ ನವಶ್ರೀಮಂತರಿಂದ ಉಂಟಾಗುತ್ತಿರುವ ಹಾನಿಯು ನಿಲ್ಲಲ್ಲಿ............ನಿಲ್ಲಲಿ.

೫೪) ಗ್ರಾಮೀಣ ಸಮಾಜದ ಘನತೆ, ರೈತರ ಬದುಕಿನ ಹಕ್ಕುಗಳು ಎಲ್ಲಾ ರೀತಿಯಿಂದಲೂ ಸಿಗಲೇಬೇಕು.........ಸಿಗಲೇಬೇಕು.

೫೫) ಭೂಮಿಯಿಲ್ಲದ ರೈತರಿಗೆ ಸರಕಾರಗಳು ಭೂಮಿಯನ್ನು ನೀಡಲೇಬೇಕು...........ನೀಡಲೇಬೇಕು.

೫೬) ಬಡರೈತರಿಗೆ ಉಚಿತ ಸಾರಿಗೆ ವ್ಯವಸ್ಥೆ, ವೈದ್ಯಕೀಯ ವ್ಯವಸ್ಥೆಯನ್ನು ಜಾರಿಗೆ ಮಾಡಲೇಬೇಕು..........ಮಾಡಲೇಬೇಕು.

೫೭) ರೈತರಿಗೆ ನೈಜ ಪ್ರಜಾತಂತ್ರ ನೀಡದೆ ಗುಲಾಮರಂತೆ ಕಾಣುತ್ತಿರುವ ರಾಜಕೀಯ ಪುಂಡರಿಗೆ ದಿಕ್ಕಾರ..........ದಿಕ್ಕಾರ.

೫೮) ದೇಶದ ಖಜಾನೆ ಲೂಟಿ ಮಾಡುವ ಭ್ರಷ್ಟರ ಬದಲಾಗಿ ರೈತರ ಕೈಗಳಿಗೆ ಅಧಿಕಾರದ ಕುರ್ಚಿಗಳನ್ನು ನೀಡಲೇಬೇಕು........ನೀಡಲೇಬೇಕು.

೫೯) ಪಂಚಾಯತ್‌ರಾಜ್ ಸ್ಥಾಪನೆಯ ಹೆಸರಿನಲ್ಲಿ ರೈತರಿಗೆ ಮೋಸಮಾಡಿ ಕೋಟಿಗಟ್ಟಲೆ ಲೂಟಿ ಮಾಡುತ್ತಿರುವ ಅಧಿಕಾರಿಗಳಿಗೆ ದಿಕ್ಕಾರ..........ದಿಕ್ಕಾರ.

೬೦) ಹಳ್ಳಿಯ ಬಡ ರೈತರ ಮೇಲೆ ದೌರ್ಜನ್ಯದ ಆಡಳಿತ ನಿಯಂತ್ರಣ ನಿಲ್ಲಲ್ಲಿ.......ನಿಲ್ಲಲ್ಲಿ.

೬೧) ರೈತರ ಒಕ್ಕಲುತನಕ್ಕೆ ಸಹಾಯ ಮಾಡದೆ ರೈತರ ಬದುಕಿನಲ್ಲಿ ಚೆಲ್ಲಾಟವಾಡುತ್ತಿರುವ ಭ್ರಷ್ಟರಿಗೆ ದಿಕ್ಕಾರ..........ದಿಕ್ಕಾರ.

೬೨) ಜಗತ್ತಿನಲ್ಲಿ ಮಾನವೀಯ ಸಂಬಂಧಗಳು ಚಿರಾಯುವಾಗಲಿ...........ಚಿರಾಯುವಾಗಲಿ.

೬೩) ಅಭಿವೃದ್ಧಿಯಂಬ ಕುರುಡು ಓಟದಲ್ಲಿ ರೈತರ ಸಂಬಂಧಗಳ ಆತ್ಮೀಯತೆ ಮಾಯವಾಗುವಂತೆ ಮಾಡುತ್ತಿರುವ ಅಧಿಕಾರಿಗಳಿಗೆ ದಿಕ್ಕಾರ..........ದಿಕ್ಕಾರ.

೬೪) ಸ್ವತಂತ್ರ ಸ್ವಾಭಿಮಾನಿ ರೈತರೆ ಈ ದೇಶದ ಕೇಂದ್ರ ಬಿಂದು....... ಕೇಂದ್ರ ಬಿಂದು.

೬೫) ರೈತರ ಬದುಕುಗಳ ಮೇಲೆ ವಿದೇಶೀಯರ ಲೂಟಿಗಳು ನಿಲ್ಲಲ್ಲಿ...........ನಿಲ್ಲಲ್ಲಿ.

೬೬) ರೈತರ, ಕಾರ್ಮಿಕರ, ಯುವಕರ ಐಕ್ಯತೆ ಚಿರಾಯುವಾಗಲಿ .... ಚಿರಾಯುವಾಗಲಿ.

೬೭) ರೈತರ ಅನುಮತಿ ಇಲ್ಲದೆ ಭೂಮಿ ವಶಪಡಿಸಿಕೊಳ್ಳಬಾರದು .... ವಶಪಡಿಸಿಕೊಳ್ಳಬಾರದು.

ಅಡಿಟಿಪ್ಪಣಿಗಳು

೩) ಭಾರತದಲ್ಲಿ ರೈತ ಹೋರಾಟಗಳು. ಎಚ್.ವಿ. ನಾಗೇಶ್, ಎ.ಇ. ಪುನೀತ. ಚಂದ್ರನಾಥ ಪ್ರಕಾಶನ ಧಾರವಾಡ. ೧೯೮೪ ಪುಟ ಸಂಖ್ಯೆ-೪.

೪) ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು. ಎನ್.ಪಿ. ಶಂಕರನಾರಾಯಣರಾವ್. ಪುಟ ಸಂಖ್ಯೆ-೨೪೦.

೫) ಭಾರತದಲ್ಲಿ ರೈತ ಹೋರಾಟಗಳು. ಎಚ್.ವಿ. ನಾಗೇಶ್, ಎ.ಇ. ಪುನೀತ್ ಚಂದ್ರನಾಥ ಪ್ರಕಾಶನ ಧಾರವಾಡ-೧೯೮೪ ಪುಟ ಸಂಖ್ಯೆ-೧೨.

ಅಧ್ಯಾಯ-೪

ಮಹಿಳಾ ಹೋರಾಟದ ಪರಿಭಾಷೆಯ ಸ್ವರೂಪ

ಅಧ್ಯಾಯ-೪

ಮಹಿಳಾ ಹೋರಾಟದ ಪರಿಭಾಷೆಯ ಸ್ವರೂಪ

೧೯೭೦ ರ ದಶಕದಲ್ಲಿ ಅನೇಕ ಮಹಿಳಾ ಚಳುವಳಿಗಳು ಕಾಣಿಸಿಕೊಳ್ಳತೊಡಗಿದವು. ಈ ಮಹಿಳಾ ಚಳುವಳಿಗಳು ಸ್ತ್ರೀವಾದಿ ಮೌಲ್ಯಗಳನ್ನು ಎಲ್ಲ ಕಡೆಗೆ ಪಸರಿಸುವ ಧೋರಣೆಗಳನ್ನು ಹೊಂದಿದ್ದವು. ಪ್ರಮುಖವಾಗಿ ಮಹಿಳಾ ಕಲ್ಯಾಣ ಮತ್ತು ಅಭಿವೃದ್ಧಿಗಳನ್ನು ಗಮನದಲ್ಲಿಟ್ಟುಕೊಂಡು ಮುಂದುವರೆಯುವುದು ಈ ಚಳುವಳಿಗಳ ಉದ್ದೇಶವಾಗಿತ್ತು. ಮಹಿಳೆಯರು ಕಾನೂನುಬದ್ಧವಾಗಿ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾನತೆಗಳನ್ನು ಪಡೆಯುವುದಾಗಿತ್ತು. ಈ ನಿಟ್ಟಿನಲ್ಲಿ ಅನೇಕ ಮಹಿಳಾ ಚಳುವಳಿಗಳು ಸಂಯುಕ್ತವಾಗಿ ಒಕ್ಕೊರಲಿನಿಂದ ಸಮಾಜಿಕ ನ್ಯಾಯ ದೊರಕಿಸಿಕೊಳ್ಳಲು ಹೋರಾಟವನ್ನು ಶುರುಮಾಡಿದವು.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳಾ ಚಳುವಳಿಗೆ ಪ್ರೋತ್ಸಾಹವಿರುತ್ತಿರಲಿಲ್ಲ. ಪ್ರೋತ್ಸಾಹವಿರಲಿಲ್ಲ ಎಂದ ಮಾತ್ರಕ್ಕೆ ಮಹಿಳಾ ಚಳುವಳಿಗಳು ನಿಂತು ಹೋಗಲಿಲ್ಲ. ಈ ಮಹಿಳಾ ವಿಮೋಚನೆಗಾಗಿ ಮಹಿಳೆಯರಲ್ಲಿ ಪ್ರಜ್ಞೆಯನ್ನು, ಜಾಗೃತಿಯನ್ನು ಮೂಡಿಸುತ್ತಿಲ್ಲ, ಸಂಘಟನೆ ಮಾಡುತ್ತ ಬಂದಿವೆ. ೧೯೭೦ ರ ದಶಕದ ಮಹಿಳಾ ಚಳುವಳಿ ಮಹಿಳೆಯಲ್ಲಿ ಒಗ್ಗಟ್ಟನ್ನು ಮೂಡಿಸುತ್ತ ಅವರೊಳಗಿದ್ದ ಆಂತರಿಕ ಕಲಹ, ಒಯ್ಯುಮನಸ್ಸುಗಳನ್ನು ಮರೆಯಿಸಿ ಸ್ತ್ರೀವಾದಿಗಳನ್ನು ಬೆಳೆಸುವಲ್ಲಿ ಕಾರಣವಾಯಿತು.

ಸ್ತ್ರೀವಾದದ ಅರ್ಥ ಮತ್ತು ವ್ಯಾಪ್ತಿ :

ಸಮಾಜದ ವಿವಿಧ ವಲಯಗಳಲ್ಲಿ ದುಡಿಯುತ್ತಿರುವ ಹೆಣ್ಣು ಮಕ್ಕಳು ಸಾಕಷ್ಟು ರೀತಿಯಲ್ಲಿ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗಳಿಗೊಳಗಾಗಿದ್ದಾರೆ ಎಂಬುದನ್ನು ಗುರುತಿಸಿ ಈ ಅಮಾನವೀಯ ದುಷ್ಕೃತ್ಯಗಳ ನಿವಾರಣೆಗೆ ನಡೆಸುವ ಪ್ರಜ್ಞಾಪೂರ್ವಕ, ಪ್ರಾಮಾಣಿಕ ಪ್ರಯತ್ನವನ್ನು 'ಸ್ತ್ರೀವಾದ' ಎಂದು ಕರೆಯಬಹುದು. ಸ್ತ್ರೀಯರ ಸ್ಥಿತಿಗತಿಗಳ ಬಗ್ಗೆ ವಿವರಣೆ, ವಿಶ್ಲೇಷಣೆ, ಚಿಂತನೆಗಳಲ್ಲಿ ಈ ಸ್ತ್ರೀವಾದವು ಆಸಕ್ತಿ ತೋರಿಸುತ್ತದೆ. ಹೀಗಾಗಿ ಈ ಸ್ತ್ರೀವಾದವು ತಾತ್ವಿಕವಾದ ಸ್ವರೂಪವನ್ನು ಪಡೆದುಕೊಳ್ಳುತ್ತ ಮತ್ತೊಂದು ಕಡೆ ಸಾಮಾಜಿಕ ಚಳುವಳಿಯಾಗಿ ರೂಪಗೊಳ್ಳಲು ಕಾರಣವಾಯಿತು. ಈ ಸ್ತ್ರೀವಾದವು ಸಾಮಾಜಿಕ, ಅರ್ಥಿಕ ಮತ್ತು ಸಾಂಸ್ಕೃತಿ ಸ್ವಾತಂತ್ರಕ್ಕಾಗಿ ಇತಿಹಾಸದಲ್ಲಿ ನಡೆದ ರಾಜಕೀಯ ಹೋರಾಟಗಳೊಂದಿಗೆ ಅತ್ಯಂತ ನಿಕಟವಾದ ಮತ್ತು ಆತ್ಮೀಯ ಸಂಬಂಧಗಳನ್ನು ಗುರುತಿಸಿಕೊಳ್ಳುತ್ತಲೇ ಬೆಳೆದುಕೊಂಡು ಬಂದಿರುವುದು ನಮಗೆ ಕಂಡುಬರುತ್ತದೆ.

'ಅತಿಯಾದ ಅಧಿಕಾರದ ಚಲಾವಣೆಯ ಪ್ರತಿಭಟನೆ, ಹೋರಾಟ, ವಿಮೋಚನೆಗಳ ಕಡೆಗೆ ತುಡಿಯುವಂತೆ ಮಾಡುತ್ತದೆ. ಗ್ರಾಮ್ ಷಿ ಹೇಳುವ 'ಹೆಜಮಾನಿ' ಯ ಕಲ್ಪನೆಯಾಗಲಿ, ಫುಕೋನ 'ಅಧಿಕಾರ ಮಿಮಾಂಸೆಯಾಗಲಿ' ಸ್ತ್ರೀವಾದದ ಚಿಂತನೆಗೆ, ವ್ಯಾಖ್ಯಾನಕ್ಕೆ ತುಂಬ ಸಹಾಯಕವಾಗುತ್ತದೆ.

'ಜೀತದಾಳು' ತನ್ನನ್ನು ಶೋಷಿಸುವ ಜಮೀನುದಾರನಿಗೆ ತಿರುಗಿಬಿದ್ದಂತೆ ತನ್ನನ್ನು ಶೋಷಿಸುವ, ದಮನ ಮಾಡುವ ತನ್ನ ಅಧಿಕಾರದ ಚಲಾವಣೆಯಿಂದ ಹೆಣ್ಣನ್ನು ಬಂಧನಕ್ಕೊಳಪಡಿಸುವ, ಪುರುಷನ ದಬ್ಬಾಳಿಕೆ, ಅಕ್ರಮಣದಿಂದ ಸಿಡಿಯುವ, ವಿಮೋಚನೆಯತ್ತ ಧಾವಿಸುವ 'ಹೆಣ್ಣು' ನಮಗೆ ಕಾಣಿಸಿಕೊಳ್ಳುತ್ತಾಳೆ[೬].

ಹೆಣ್ಣಿನ ಮೇಲೆ ಚಲಾಯಿಸಲ್ಪಡುವ ಎಲ್ಲ ರೀತಿಯ ಯಜಮಾನಿಕೆಯನ್ನು ಸ್ತ್ರೀವಾದಿಗಳು ವಿರೋಧಿಸುತ್ತಾರೆ. ಇದು ಕೇವಲ ತಮ್ಮ ಸ್ವಾತಂತ್ರ್ಯದ ಹುಡುಕಾಟ ಎಂದು ಭಾವಿಸಬಾರದು. ಏಕೆಂದರೆ ಸ್ತ್ರೀವಾದವು ಅಧಿಕಾರ ವಿರೋಧವನ್ನು ಸ್ಪಷ್ಟವಾಗಿ ದಾಖಲಿಸುತ್ತದೆ. ವ್ಯಕ್ತಿ ಸ್ವಾತಂತ್ರಕ್ಕೆ ಧಕ್ಕೆ ತರುವಂತಹ ಎಲ್ಲ ರೀತಿಯ ದಬ್ಬಾಳಿಕೆ, ದೌರ್ಜನ್ಯ ಮತ್ತು ಹಿಂಸೆಗಳಿಗೆ ವಿರೋಧವನ್ನುಂಟು ಮಾಡುತ್ತದೆ. ಅದು ಯುದ್ಧವಿರಬಹುದು, ವರದಕ್ಷಿಣೆ ಪಿಡುಗಿರಬಹುದು, ಅರಣ್ಯನಾಶವಿರಬಹುದು, ಪರಿಸರನಾಶವಿರಬಹುದು, ಗರ್ಭಪಾತವಿರಬಹುದು, ಅಣುಬಾಂಬುಗಳ ಸ್ಫೋಟವಿರಬಹುದು, ಆಸಿಡ್ ದಾಳಿಯಿರಬಹುದು ಅಥವಾ ದೈಹಿಕವಾದ, ಮಾನಸಿಕವಾದ ಚಿತ್ರಹಿಂಸೆಯಿರಬಹುದು ಇಂತಹ ಎಲ್ಲ ರೀತಿಯ ಕ್ರೂರ ಕೃತ್ಯಗಳನ್ನು ಸ್ತ್ರೀವಾದವು ತೀವ್ರವಾಗಿ ಖಂಡಿಸುತ್ತದೆ.

ಸ್ತ್ರೀವಾದದ ನಿಲುವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು :

೧) ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಜಗತ್ತಿನಾದ್ಯಾಂತ ಎಲ್ಲ ಸ್ತ್ರೀಯರು ಒಂದಲ್ಲ ಒಂದು ರೀತಿಯ ಶೋಷಣೆಗೆ ಒಳಗಾಗಿರುತ್ತಾರೆ.

೨) ಪುರುಷನ ಯಜಮಾನಿಕೆಯ ಸ್ವರೂಪದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಈ ಎಲ್ಲ ನೆಲೆಗಳಲ್ಲಿ ಮಹಿಳೆಯ ಮೇಲಾಗುವ ಪುರುಷನ ದಬ್ಬಾಳಿಕೆ, ದೌರ್ಜನ್ಯದ ಮೇಲೆ ಪ್ರತಿಭಟನೆ ಮಾಡುವುದು.

೩) ಪರಂಪರಾಗತವಾಗಿ ದೈನಂದಿನ ಬದುಕಿನ ಪ್ರತಿಯೊಂದು ಹಂತಗಳಲ್ಲೂ ಪುರುಷನು ಅಧಿಕಾರ ಚಲಾಯಿಸುವುದನ್ನು ವಿರೋಧಿಸುವುದು.

೪) ಪ್ರಪಂಚದಾದ್ಯಂತ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ವೈಜ್ಞಾನಿಕವಾಗಿ ಸಮಾಜ ಎಷ್ಟೇ ಮುಂದುವರಿದರೂ ಲೈಂಗಿಕ ತಾರತಮ್ಯಗಳು ಇದ್ದೇ ಇವೆ ಎಂಬ ನಂಬಿಕೆ.

ಹೀಗೆ ಜಗತ್ತಿನಾದ್ಯಂತ ಸ್ತ್ರೀವಾದಿಗಳು ಪರಂಪರಾಗತವಾದ ನಂಬಿಕೆಗಳನ್ನು ಖಂಡಿಸಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಪರುಷ ತನ್ನ ಸ್ವ-ಅನುಕೂಲಗಳಿಗಾಗಿಯೆ ಮಾಡಿಕೊಂಡ ನಂಬಿಕೆಗಳನ್ನು ಪುನರ್ ವ್ಯಾಖ್ಯಾನ ಮಾಡುವ ಪ್ರಯತ್ನ ಮಾಡಿದ್ದಾರೆ. ಸ್ತ್ರೀಯರ ಪರವಾದ ವಿಚಾರ, ಸ್ಥಿತಿಗತಿಯ ಬಗೆಗೆ ವಿಶೇಷವಾದ ಕಾಳಜಿ ಹೊಂದಿದ್ದು ಮತ್ತು ಅದಕ್ಕೆ ಪ್ರತಿಸ್ಪಂದಿಸುವವರನ್ನು 'ಸ್ತ್ರೀವಾದಿ'ಗಳೆಂದು ಕರೆಯಬಹುದು.

---

೬ ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ. ಡಾ.ಡಿ. ಮಂಗಳಾ ಪ್ರಿಯದರ್ಶಿನಿ. ಪು.ಸಂ.೩೦

ಸ್ತ್ರೀವಾದದ ವ್ಯಾಖ್ಯಾನಗಳು :

'ಜೋನ್‌ಕಿಲ್ಲಿ : ಸ್ತ್ರೀವಾದ ಎನ್ನುವುದು ಸ್ತ್ರೀಯರನ್ನು ಕೆಟ್ಟದಾಗಿ ನೆಡೆಸಿಕೊಳ್ಳುವ ಪುರುಷನ ದುರ್ನಡತೆಯ ವಿರುದ್ಧ ಪ್ರಜ್ಞಾಪೂರ್ವಕವಾಗಿ ವಿರೋಧಿಸುವ ಗುಣವಾಗಿದೆ. ಅವನ ಸಣ್ಣತನವನ್ನು ವಿರೋಧಿಸುತ್ತ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ವಿಚಾರವಾಗಿದೆ ಎಂದಿದ್ದಾಳೆ.

ಬಾರ್ಬರ್ ಸ್ಮಿತ್ : 'ಸ್ತ್ರೀವಾದ' ಒಂದು ರಾಜಕೀಯ ಸಿದ್ಧಾಂತವಾಗಿದ್ದು ಎಲ್ಲಾ ಮಹಿಳೆಯರಿಗೂ ವಿಮೋಚನೆಯನ್ನು ತಂದುಕೊಡುವ ಪ್ರಯತ್ನವಾಗಿದೆ. ಈ ಮಹಿಳೆ ಯಾವುದೇ ವರ್ಣದವರಾಗಿರ ಬಹುದು, ಉದ್ಯೋಗಿಗಳಾಗಿರಬಹುದು, ಬಡವರಾಗಿರಬಹುದು, ಅಂಗವಿಕಲೆಯರು, ವೃದ್ಧೆಯರು ಆಗಿರಬಹುದು. ಸಮಾಜದಲ್ಲಿ ಇಂತಹ ಸಮಸ್ಯೆಗಳು ಯಾವಾಗ ಹುಟ್ಟಿಕೊಳ್ಳುತ್ತವೆಯೋ ಆ ಸಂದರ್ಭಕ್ಕೆಲ್ಲ 'ಸ್ತ್ರೀವಾದ' ಹುಟ್ಟಿಕೊಳ್ಳುತ್ತದೆ ಎಂಬುದು ಇವರ ವಾದ.

ನವಲೆಟ್ ಸಾದವಿ : ಸ್ತ್ರೀವಾದವನ್ನು 'ಒಂದು ಕ್ರಾಂತಿಕಾರಕ ಸಿದ್ಧಾಂತ' ಎಂದು ಗುರುತಿಸುತ್ತಲೇ ಇದು ಮಹಿಳೆಯರ ವಿವಿಧ ರೀತಿಯ ಮನೋವೈಜ್ಞಾನಿಕ, ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಿಕೊಳ್ಳಲು ಮುಂದಾಗುತ್ತದೆ ಎನ್ನುತ್ತಾಳೆ[೭].

'ಮೆಕೆನ್‌ಮರಾರವರ ಪ್ರಕಾರ : ಕ್ರಾಂತಿಕಾರಕ ಮಾರ್ಗದ ಮೂಲಕ ಸಮಾಜವನ್ನು ನಿರ್ಮಿಸುವ ಒಂದು ಬದಲಾವಣೆ. ಸ್ತ್ರೀವಾದಿಗಳು ಮಹಿಳೆಯರ ದೌರ್ಜನ್ಯ, ಲೈಂಗಿಕ ಜಾತಿ, ವರ್ಗ ಶೋಷಣೆಗಳ ವಿರುದ್ಧ ಕ್ರಿಯಾತ್ಮಕವಾಗಿ ಹೋರಾಡುವುದಕ್ಕೆ ಬದ್ಧರಾಗಿರುತ್ತಾರೆ[೮].

ಸ್ತ್ರೀವಾದವು ಒಂದು ಚಳುವಳಿಯಾಗಿ ಮಹಿಳೆಯರ ಅಭಿರುಚಿ ಆಸಕ್ತಿಗಳನ್ನು ಗೌರವಿಸುತ್ತದೆ. ಮಹಿಳೆಯರ ಸ್ವಾತಂತ್ರ್ಯ, ಅಸ್ತಿತ್ವ, ಸ್ಥಿತಿಗತಿ ಪ್ರಾಮುಖ್ಯತೆಯನ್ನು ಒಪ್ಪಿಕೊಳ್ಳುತ್ತ ಸ್ತ್ರೀಯರ ಬದುಕಿನ ಬಗೆಗೆ ಸ್ವತಂತ್ರವಾದ ಹತೋಟಿಯನ್ನು ಪ್ರತಿಪಾದಿಸುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕ ಕ್ರಾಂತಿ ಯಂತ್ರ ನಾಗರಿಕತೆಯ ಸಂದರ್ಭದಲ್ಲಿ ಸ್ತ್ರೀವಾದ ಕಾಣಿಸಿಕೊಂಡಿತು. ಸಮಾಜ ಸುಧಾರಕ, ತತ್ವಜ್ಞಾನಿ ಎಂದು ಗುರುತಿಸಿಕೊಂಡ ರೊಸೋ ತನ್ನ 'ಸಾಮಾಜಿಕ ಒಪ್ಪಂದ' ಎನ್ನುವ ಕೃತಿಯಲ್ಲಿ 'ಮಾನವ ಹುಟ್ಟಿನಿಂದ ಸ್ವತಂತ್ರನಾಗಿದ್ದರೂ ಬೆಳೆಯುತ್ತ ಅನೇಕ ರೀತಿಯ ಬಂಧನಗಳಿಗೆ ಒಳಗಾಗಿದ್ದಾನೆ' ಎಂಬ ಮಾತು ಮಹಿಳೆಯರ ಸ್ಥಿತಿಗತಿಗೆ ಅನ್ವಯಿಸುತ್ತದೆ. ಇಲ್ಲಿ ಬಂಧನಕ್ಕೊಳಪಟ್ಟಿರುವ ಮಾನವ ಜೀವಿಗಳಲ್ಲಿ ಸ್ತ್ರೀಯು ಇದ್ದಳು. ರೋಮ್ಯಾಂಟಿಕ್ ಚಳುವಳಿಯ ಸಂದರ್ಭದಲ್ಲಿ ಮೂಡಿಬಂದ ಆದರ್ಶವಾದ, ಮಾನವತವಾದ, ಉದಾರವಾದ ಮತ್ತು ವಿಚಾರವಾದಗಳ ಫಲವಾಗಿ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಸೂಕ್ಷ್ಮವಾಗಿ ಅವಲೋಕನ ಮಾಡುವುದು ಪ್ರಾರಂಭವಾಯಿತು. ನಾಗರೀಕರಣ ಮತ್ತು ಯಾಂತ್ರೀಕರಣದ ಪ್ರಭಾವದಿಂದ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ಬಂಡವಾಳಶಾಹಿ ಪದ್ಧತಿ,

---

೭ ಅದೇ, ಪುಟ ಸಂಖ್ಯೆ ೩೪.
೮ ಅದೇ, ಪುಟ ಸಂಖ್ಯೆ ೩೮.

ಊಳಿಗಮಾನ್ಯ ಪದ್ಧತಿ, ಜಮೀನ್ದಾರಿ ಪದ್ಧತಿ, ಕಾರ್ಮಿಕ ಪದ್ಧತಿ ಮುಂತಾದವುಗಳು ಶೋಷಣೆಯ ಕೇಂದ್ರಗಳಾದವು. ವರ್ಗ ಮತ್ತು ವರ್ಣ ಪದ್ಧತಿಗಳು ಸಮಾಜದಲ್ಲಿ ಅಸಮಾನತೆಗಳು ಕಾಣಿಸಿಕೊಳ್ಳಲು ಕಾರಣವಾಗಿದ್ದವು. ಶೋಷಣೆ ಮಾಡುವವರು ಮತ್ತು ಶೋಷಣೆಗೊಳಗಾಗುವವರು ಮೊದಲಿನಿಂದಲು ಇದ್ದರು. ಲೈಂಗಿಕತೆಯ ಕಾರಣದಿಂದ ಶೋಷಣೆಗೊಳಪಟ್ಟ ಮಹಿಳೆಯು ಎಚ್ಚೆತ್ತುಕೊಂಡಳು.

ಕೌಟುಂಬಿಕ ವಲಯದಲ್ಲಿ ತನ್ನನ್ನು ತೊಡಗಿಸಿಕೊಂಡ ಹೆಣ್ಣು ಮನೆಯೊಳಗಿನ ಎಲ್ಲಾ ಜವಾಬ್ದಾರಿಗಳನ್ನು ಹೋರುವುದು ಅನಿವಾರ್ಯವಾಯಿತು. 'ಆಸ್ತಿಯ ಹಕ್ಕು' ಸಂಪೂರ್ಣವಾಗಿ ಮರಷನಿಗೆ ಮೀಸಲಾಗಿತ್ತು. ಕುಟುಂಬದ ಹೊರಗೆ ದುಡಿಯುವುದು ತನ್ನ ಕರ್ತವ್ಯವೆಂದು ಪುರುಷ ಭಾವಿಸದರೆ, ಮಹಿಳೆ ಮನೆಯಲ್ಲಿದ್ದುಕೊಂಡು ಪುರುಷ ತಂದು ಹಾಕಿದ್ದನ್ನು ಬೇಯಿಸಿ ಆತನನ್ನು ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವುದೇ ತನ್ನ ಪವಿತ್ರವಾದ ಧರ್ಮವೆಂದು ಭಾವಿಸಿದ್ದಳು. ಮಹಿಳೆಗೆ ಆರಂಭದಿಂದಲೂ ಮೃದುತ್ವದ, ನಯ, ವಿನಯದ ಗುಣಗಳನ್ನು ಅವಳ ಮೇಲೆ ಹೊರಿಸಲಾಗಿದೆ. ಮಹಿಳೆಯ ಬಸಿರು, ಬಾಣಂತಿತನ, ತಾಯ್ತನ ಇವು ಅತ್ಯಂತ ಪ್ರಮುಖವಾದವೆಂದು ಹೇಳುತ್ತಾ, ಅವುಗಳೇ ಆದರ್ಶಗಳೆಂದು ಕೊಂಡಾಡುವುದು ಪುರಷ ಪ್ರಧಾನ ಸಮಾಜದ ಗುಣಗಳಾಗಿವೆ. ಆದರೆ ವಾಸ್ತವಿಕವಾಗಿ ಮಹಿಳೆಯೊಬ್ಬಳು ನಿರ್ವಹಿಸುತ್ತಿರುವ ತಾಯಿ, ಹೆಂಡತಿ, ಮಗಳು, ಗೃಹಿಣಿ ಇತ್ಯಾದಿ ಪಾತ್ರಗಳು ಹುಟ್ಟಿನಿಂದಲೇ ಬಂದಂತವುಗಳಲ್ಲ, ಚರಿತ್ರೆಯಲ್ಲಿ ಆಕಸ್ಮಿಕವಾಗಿ ಹುಟ್ಟಿಕೊಂಡಿವೆ.

ಸ್ತ್ರೀವಾದ ಹುಟ್ಟಿಕೊಳ್ಳಲು ಸಮತಾವಾದ, ಮಾನವತಾವಾದಗಳು ಪ್ರೇರಣೆಯಾದವು. ಪ್ರಪಂಚದಾದ್ಯಂತ ಕಾಣಿಸಿಕೊಂಡ ಪ್ರಾನ್ಸ್ ಕ್ರಾಂತಿ, ಅಮೇರಿಕ ಕ್ರಾಂತಿ, ಇಟಲಿ ಏಕೀಕರಣ, ಜರ್ಮನಿ ಏಕೀಕರಣ ಮುಂತಾದ ಹೋರಾಟಗಳು, ಚಳುವಳಿಗಳು ಕ್ರಾಂತಿಗಳಿಗೆ ಪ್ರಭಾವ ಬೀರಿದವು. ಬಲಿಷ್ಠರು ದುರ್ಬಲರ ಮೇಲೆ ನಡೆಸುವ ದೌರ್ಜನ್ಯ, ದಬ್ಬಾಳಿಕೆ, ಶೋಷಣೆ, ಅನ್ಯಾಯ, ಅಸಮಾನತೆ, ಹಿಂಸೆ, ಕ್ರೌರ್ಯಗಳಿಂದ ಎಚ್ಚೆತ್ತುಕೊಂಡು ಪ್ರಜ್ಞಾವಂತರು ವಿರೋಧಿಸುವುದರ ಮೂಲಕ ಪ್ರಶ್ನಿಸಿದರು. ಇಂತಹ ಎಲ್ಲ ಅನ್ಯಾಯಗಳಿಗೆ ಒಳಗಾದ ಮಹಿಳೆಯ ಬಗೆಗಿನ ಕಳಕಳಿ ಸ್ತ್ರೀವಾದವು ಹುಟ್ಟಿಕೊಳ್ಳಲು ಕಾರಣವಾಯಿತು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಆಸ್ತಿಯ ಮೇಲಿನ ಹಕ್ಕು, ಒಡೆತನ ಪುರುಷನದೇ ಎಂದು ತಿಳುವಳಿಕೆಯಾಯಿತು. ಮಹಿಳೆಯನ್ನು ಕೂಡ ಪುರಷನು ತನ್ನ ಆಸ್ತಿಯಂದು ತಿಳಿದು ಅವಳ ಮೇಲೆ ತನ್ನ ಪ್ರಭುತ್ವವನ್ನು, ಅಧಿಕಾರವನ್ನು ಚಲಾಯಿಸಲು ಶುರು ಮಾಡಿದನು. ಹೀಗಾಗಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಶೋಷಣೆಗೊಳಗಾಗಿರುವುದು ಕಂಡು ಬರುತ್ತದೆ. ಈ ಶೋಷಣೆಯ ವಿರುದ್ಧ ಜಾಗೃತಿ, ಅರಿವನ್ನು ಪಡೆದ ಸ್ತ್ರೀವಾದಿಗಳು ಪುರುಷ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ, ಹೋರಾಟ ಸ್ವರೂಪವೇ ಇಂದು ಮಹಿಳಾ ಚಳುವಳಿಯಾಗಿ ಪರಿಣಮಿಸಿದೆ. ಈ ಚಳುವಳಿಯಲ್ಲಿ ದುಡಿಯುವ ವರ್ಗದ ಮಹಿಳೆಯರ ಒಕ್ಕೊರಲಿನ ಧ್ವನಿಯಿದೆ. ಆ ಧ್ವನಿಯು ಅನೇಕ ಮಹಿಳಾ ಸಂಘ, ಸಂಸ್ಥೆಗಳ ನೇತೃತ್ವದಲ್ಲಿ ಚಳುವಳಿಗಳು ಇಂದು ನಡೆಯುತ್ತಿವೆ.

ಮಹಿಳಾ ಹೋರಾಟದ ವಿಷಯಗಳು :

ಮಹಿಳಾ ಚಳುವಳಿಯ ಚರಿತ್ರೆಯನ್ನು ಅವಲೋಕಿಸಿದಾಗ ನಮಗೆ ಸ್ಪಷ್ಟವಾಗಿ ಕಂಡುಬರುವ ಅಂಶವೆಂದರೆ ಎಲ್ಲಾ ಕಾಲಘಟ್ಟದಲ್ಲೂ ಒಂದಲ್ಲ ಒಂದು ಮಹಿಳಾ ಸಮಸ್ಯೆಯನ್ನು ಗುರುತಿಸಿಕೊಂಡು ಅದರ ಸುಧಾರಣೆಗಾಗಿ ಶ್ರಮಿಸಿರುವುದು ಗೋಚರವಾಗುತ್ತದೆ. ಚಳುವಳಿಯ ತತ್ವವನ್ನು ರೂಪಿಸುವ ಮೂಲಭೂತ ಅಂಶಗಳಾದ ಪುರುಷ ಪ್ರಧಾನ ವ್ಯವಸ್ಥೆ, ಲಿಂಗತಾರತಮ್ಯ, ಸ್ತ್ರೀಶೋಷಣೆ, ಅಸಮಾನತೆ ಮುಂತಾದವುಗಳನ್ನು ವಿವರಿಸುವಾಗ ನಿರ್ಧಿಷ್ಟವಾದ, ಸ್ಪಷ್ಟವಾದ ಸಮಸ್ಯೆಗಳನ್ನು ಆಧರಿಸಿಯೇ ಮುಂದುವರೆದಿದೆ. **ಉದಾಹರಣೆಗೆ** : ಕೌಟುಂಬಿಕ ವಲಯದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಬೇಕಾದರೆ ಅದು ಕೌಟುಂಬಿಕ ಹಿಂಸೆಯ ಮೂಲಕವೇ ಪ್ರವೇಶಿಸುತ್ತದೆ. ನಿರ್ಧಿಷ್ಟವಾದ ವಿಷಯವನ್ನು, ಘಟನೆಯನ್ನು ಸಮಸ್ಲೀಕರಣ ಮಾಡಿಕೊಂಡು ವಾದಗಳನ್ನು, ಚರ್ಚೆಗಳನ್ನು ಸೃಷ್ಟಿಸುವ ಹೋರಾಟಗಳನ್ನು ಪ್ರಚೋದಿಸುವ ಮಹಿಳೆಗೆ ಸಂಬಂಧಿಸಿದ ವಿಚಾರಗಳನ್ನು ಮಹಿಳಾ ಅಧ್ಯಯನವು 'ಮಹಿಳಾ ವಿಷಯಗಳು' ಎಂದು ಗುರುತಿಸುತ್ತದೆ. ಕೆಲವು ಪ್ರಮುಖವಾದ ವಿಷಯಗಳನ್ನು ಈ ರೀತಿ ಪಟ್ಟಿ ಮಾಡಬಹುದು.

೧) ಸ್ತ್ರೀ ಶಿಕ್ಷಣ
೨) ಬಾಲ್ಯ ವಿವಾಹ
೩) ಸತಿ ಪದ್ಧತಿ
೪) ವಿಧವಾ ವಿವಾಹ ಪದ್ಧತಿ
೫) ಹೆಣ್ಣು ಶಿಶುಹತ್ಯೆ ಮತ್ತು ಭ್ರೂಣಹತ್ಯೆ
೬) ವಿವಾಹ ವಿಚ್ಛೇಧನ ಮತ್ತು ಜೀವನಾಂಶ
೭) ಅಂತರ್ ಜಾತಿಯ ವಿವಾಹಗಳು
೮) ಆಸ್ತಿಯ ಹಕ್ಕು
೯) ಮಹಿಳಾ ಮೀಸಲಾತಿ
೧೦) ವೇಶ್ಯಾ ಪದ್ಧತಿ
೧೧) ಅತ್ಯಾಚಾರ
೧೨) ವರದಕ್ಷಿಣೆ
೧೩) ಮಹಿಳಾ ಉದ್ಯೋಗ
೧೪) ಕೌಟುಂಬಿಕ ಹಿಂಸೆ
೧೫) ಸಮೂಹ ಮಧ್ಯಮದಲ್ಲಿ ಸ್ತ್ರೀಬಳಕೆ ಇತ್ಯಾದಿ

'ಮಹಿಳಾ ಸಂಘಟನೆಗಳು ಮುಖ್ಯ ಪ್ರವಾಹದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವುದರ ಬದಲಿಗೆ ಎಡಪಂಥೀಯ ಸಂಘಟನೆಗಳೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತವೆ. ಇವು ಕೋಮುವಾದವನ್ನು ತೀವ್ರವಾಗಿ ಖಂಡಿಸುತ್ತವೆ. ಅಯೋದ್ಯೆಯ ಬಾಬರಿ ದ್ವಂಸವಾಗಲಿ, ಗೋದ್ರಾ ಹತ್ಯಾಕಾಂಡ, ಮೀಸಲಾತಿ ವಿರೋಧಿ ಚಳುವಳಿಗಳನ್ನು ಕುರಿತಂತೆ ಇವು ತೀವ್ರವಾಗಿ ಖಂಡಿಸಿವೆ. ಈ ಸಂಘಟನೆಗಳ ಮುಖ್ಯ ಗುರಿ, ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಗೌರವಿಸುವುದಾಗಿದೆ. ಮಹಿಳೆಯರಿಗೆ ರಾಜಕೀಯದಲ್ಲಿ ಶೇ. ೩೩ ರ ಮೀಸಲಾತಿ, ಎಲ್ಲ ರೀತಿಯ ಉದ್ಯೋಗಗಳಲ್ಲೂ ಮಹಿಳೆಯರಿಗೆ ಆದ್ಯತೆ, ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಿಗಿರುವಷ್ಟೆ ಸಮಾನ ಹಕ್ಕು ಮುಂತಾದವುಗಳು ಮಹಿಳೆಯರಿಗೆ ಲಭ್ಯವಾಗಬೇಕು ಎಂದು ನಂಬಿಕೊಳ್ಳುತ್ತದೆ. ಆದರೆ ಕಾನೂನಿನಡಿಯಲ್ಲಿ 'ವರದಕ್ಷಿಣೆ ಕಾಯ್ದೆ' ಮುಂತಾದ ಸೌಲಭ್ಯಗಳು ಹೆಣ್ಣಿಗಿದ್ದರೂ ಅದು ಅನುಷ್ಠಾನಕ್ಕೆ

ಬರುವಲ್ಲಿ ಸೂಕ್ಷ್ಮ ಸಮಸ್ಯೆಗಳಿವೆ. ಇವುಗಳು ಜಾರಿಗೆ ಬರುವಲ್ಲಿ ಮಹಿಳಾ ಸಂಘಟನೆಕಾರರು ಹಾಗೂ ಹೋರಾಟಗಾರರ ಮುಖ್ಯ ಪಾತ್ರವಿದೆ[೯].

ಮಹಿಳಾ ಹೋರಾಟದ ಪರಿಭಾಷೆ ಸೂಚಕ ಪದಗಳು :

ಅಂತರಾಷ್ಟ್ರೀಯ ಮಹಿಳಾ ಚಳುವಳಿ
ಅಂತರ್ ಜನಾಂಗ ಗುಲಾಮಗಿರಿ
ವಿರೋಧಿ ಚಳುವಳಿ
ಆಂದೋಲನಗಳ ಚರಿತ್ರೆ
ಆವರ್ತನೀಯ ಸಿದ್ಧಾಂತ
ಅತೀತೆಯವಾದ
ಅಪರಾಧ ದಂಡ ಸಂಹಿತೆ
ಕಾಮವಾಂಛೆ
ಕಾರ್ಮಿಕವರ್ಗ ಸ್ತ್ರೀವಾದ
ಕುಟುಂಬ ಸಂಹಿತೆ
ಕೂಲಿ
ಚೈತನ್ಯಾತ್ಮಕ ಸ್ತ್ರೀಸ್ವತ್ತು
ಜ್ಞಾತೃಸ್ಥಾನ
ಜೀವ ಪರಿಸರ ಸ್ತ್ರೀವಾದ
ಜೀವಶಾಸ್ತ್ರೀಯ ಸಾರ್ವತ್ರಿಕತೆ
ಜೈವಿಕ ಲಿಂಗತ್ವ
ಜೈವಿಕ ಪಿತೃತ್ವ
ತೀವ್ರಗಾಮಿ ಸ್ತ್ರೀವಾದ
ದರ್ಪಣ ಘಟ್ಟ
ದರ್ಶನಾತ್ಮಕ ಪ್ರತಿಮೆ
ದ್ವಿಪತ್ನ್ಯ
ಪುರಷಾತ್ಮಕವಾದ
ಪುರುಷ ಲಿಂಗೀಯ ಅನನ್ಯತೆ
ಭಾಷಿಕ ನಿರ್ದೇಶನ
ಭಿನ್ನ ಜೈವಿಕತೆ

ನಾಗರೀಕ ಅವಿಧೇಯ ಚಳುವಳಿ
ದ್ವಿಲಿಂಗತ್ವ
ದ್ವಿಮುಖ ವ್ಯಕ್ತಿತ್ವ
ಸ್ತ್ರೀ ದ್ವೇಷ
ಸ್ತ್ರೀತ್ವ
ಸ್ತ್ರೀ ಗುಣ
ಸ್ತ್ರೀಯಾತ್ಮಕತೆ
ಸ್ತ್ರೀ ವೈಶಿಷ್ಟ್ಯ
ಸ್ತ್ರೀ ಪರಿಸರವಾದ
ಸ್ತ್ರೀಯಾತ್ಮಕ ಗುರುತು
ಸ್ತ್ರೀವಾದ
ಮಹಿಳಾವಾದ
ದೇವದಾಸಿ ಪದ್ಧತಿ
ಅತ್ಯಾಚಾರ (ರೇಪ್)
ಹಿಂಸೆ
ಜೈವಿಕ ಲಿಂಗ
ಪಿತೃ ಪ್ರಧಾನ
ಪಿತೃ ಮೂಲ ಬಹುಪತ್ನಿತ್ವ
ಪಿತೃವಂಶೀಯ
ಪುರುಷ ಕೃತಿ
ಪುರುಷ ಲೈಂಗಿಕತೆ
ಮಹಿಳಾ ಕದನ
ಸ್ತ್ರೀವಾದಿ ಚರಿತ್ರೆ
ಸ್ತ್ರೀವಾದಿಗಳಲ್ಲದವರು
ಸರ್ವ ಸಮಾನತವಾದಿ ರಾಜಕೀಯ ಚಿಂತನೆ

---

೯ ಅದೇ, ಪುಟ ಸಂಖ್ಯೆ ೨೪೭

ಭಿನ್ನ ಲೈಂಗಿಕತೆ

ಮನೋವಿಶ್ಲೇಷಣಾತ್ಮಕ ಸ್ತ್ರೀವಾದ

ಮಹಿಳಾ ಸಂಕಥನ

ಮಹಿಳಾ ವಿಷಯಗಳು

ಮಹಿಳಾ ಸಬಲೀಕರಣ

ಮಹಿಳೆಯ ಲೈಂಗಿಕ ಸಿದ್ಧರೂಪ

ಮಾತೃಮೂಲ ಬಹುಪತ್ನಿತ್ವ

ಮಾತೃವಂಶೀಯ

ಮಾತೃವಂಶೀಯ ಉತ್ತರಾಧಿಕಾರತ್ವ

ಲಿಂಗಾಧಾರಿತ ಸಂಬಂಧ

ಲಿಂಗ ತಟಸ್ಥ

ಲಿಂಗಪಾತ್ರತೆ

ಲಿಂಗಪಾತ್ರ ತಾತ್ವಿಕತೆ

ಲಿಂಗಪಾತ್ರ ವರ್ತನೆ

ಲಿಂಗ ವ್ಯವಸ್ಥೆಯ ಪಾತ್ರ

ಲಿಂಗ ವ್ಯವಸ್ಥೆಯ ಸಿದ್ಧಾಂತ

ಲಿಂಗ ವ್ಯವಸ್ಥೆಯ ತಾರತಮ್ಯ

ಲಿಂಗಾತೀತತೆ

ಲೈಂಗಿಕ ವಿಭಜನೆ

ಲೈಂಗಿಕ ಶ್ರಮ ವಿಭಜನೆ

ಲೈಂಗಿಕ ಸಾಂಕೇತಿಕತೆ

ಲೈಂಕಿತವಾದ

ಲೈಂಗಿಕ ರಾಜಕಾರಣ

ಮಹಿಳಾ ವಿಮೋಚನೆಯ ಹೋರಾಟ

ಸಮಾಜವಾದಿ ಸ್ತ್ರೀವಾದ

ಸಾಮ್ರಾಜ್ಯವಾದಿ ಅಧಿಪತ್ಯ

ಸುಧಾರಣಾ ಕಾರ್ಯಸೂಚಿ

ಸ್ಥಾನಮಾನದ ಕೀಳರಿಮೆ ಸಿದ್ಧಾಂತ

ಹೆಣ್ಣುತನ

ಮಾರ್ಕ್ಸ್‌ವಾದಿ ಸ್ತ್ರೀವಾದ

ಮಹಿಳಾ ಕ್ಷೇತ್ರ

ಮಹಿಳಾ ಲೋಕ

ಮಹಿಳಾ ವಲಯ

ಮಹಿಳಾ ಅಧ್ಯಯನ

ಸ್ತ್ರೀವಾದಿ ಚಳುವಳಿ

ಭಿನ್ನಲಿಂಗೀಯ

ಸ್ತ್ರೀ ಮಂಡಳಿ

ಸಬಲೀಕೃತ ಮಹಿಳೆ

ಮಹಿಳಾ ಸಂಘಟನೆ

ಮಹಿಳಾ ಹೋರಾಟ

ಮಹಿಳಾ ಆಂದೋಲನ

ಮಹಿಳಾ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪಾರಿಭಾಷಿಕ ಪದಗಳನ್ನು ವಿವರಿಸಲಾಗಿದೆ.

೧) ಸ್ತ್ರೀವಾದ :

ಸ್ತ್ರೀವಾದವು ಒಂದು ಚಳುವಳಿಯಾಗಿ ಮಹಿಳೆಯರ ಅಭಿರುಚಿ ಆಸಕ್ತಿಗಳನ್ನು ಗೌರವಿಸುತ್ತದೆ. ಮಹಿಳೆಯರ ಸ್ವಾತಂತ್ರ್ಯ, ಅಸ್ತಿತ್ವ, ಸ್ಥಿತಿಗತಿ ಪ್ರಾಮುಖ್ಯತೆಯನ್ನು ಒಪ್ಪಿಕೊಳ್ಳುತ್ತ ಸ್ತ್ರೀಯರ ಬದುಕಿನ ಬಗೆಗೆ ಸ್ವತಂತ್ರವಾದ ಹತೋಟಿಯನ್ನು ಪ್ರತಿಪಾದಿಸುತ್ತದೆ. ಇದು ಕೇವಲ ತಮ್ಮ ಸ್ವಾತಂತ್ರ್ಯದ ಹುಟುಕಾಟ ಎಂದು ಭಾವಿಸುವುದಿಲ್ಲ. ಏಕೆಂದರೆ ಸ್ತ್ರೀವಾದವು ಅಧಿಕಾರ ವಿರೋಧವನ್ನು ಸ್ಪಷ್ಟವಾಗಿ ದಾಖಲಿಸುತ್ತದೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ಎಲ್ಲಾ ರೀತಿಯ ದಬ್ಬಾಳಿಕೆ, ದೌರ್ಜನ್ಯ ಮತ್ತು ಹಿಂಸೆಗಳಿಗೆ

ವಿರೋಧವನ್ನುಂಟು ಮಾಡುತ್ತದೆ. ಅದು ಯುದ್ಧವಿರಬಹುದು, ವರದಕ್ಷಿಣೆ ಪಿಡುಗಿರಬಹುದು, ಅರಣ್ಯನಾಶವಿರಬಹುದು, ಪರಿಸರನಾಶವಿರಬಹುದು, ಗರ್ಭಪಾತವಿರಬಹುದು, ಅಣುಬಾಂಬುಗಳ ಸ್ಫೋಟವಿರಬಹುದು, ಆಸಿಡ್ ದಾಳಿಯಿರಬಹುದು ಅಥವಾ ದೈಹಿಕವಾದ, ಮಾನಸಿಕವಾದ ಚಿತ್ರಹಿಂಸೆಯಿರಬಹುದು. ಇಂತಹ ಎಲ್ಲಾ ರೀತಿಯ ಕ್ರೂರ ಕೃತ್ಯಗಳನ್ನು ಸ್ತ್ರೀವಾದವು ತೀವ್ರವಾಗಿ ಖಂಡಿಸುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ಚಳುವಳಿಯಲ್ಲಿ ಸ್ತ್ರೀವಾದ ಪದವು ವಿಶೇಷವಾಗಿ ಬಳಕೆಯಾಗಿದೆ.

೨) ಅತ್ಯಾಚಾರ (ರೇಪ್) :

ಸ್ತ್ರೀಯರ ಮೇಲೆ ನಡೆಸುವ ಬಲತ್ಕಾರ, ಮಾನಭಂಗವನ್ನು ಅತ್ಯಾಚಾರ ಎನ್ನುತ್ತೇವೆ. ಇನ್ನೊಂದರ್ಥದಲ್ಲಿ ದೌರ್ಜನ್ಯ ದುರಾಚಾರದಿಂದ ಕೂಡಿದ ಹಿಂಸೆ ಎಂದು ಹೇಳಬಹುದು. ನಮಗೆ ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರು ಸ್ತ್ರೀಯರ ಮೇಲಿನ ಅತ್ಯಾಚಾರಗಳು, ಹಿಂಸೆಗಳು ಕಡಿಮೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಮಹಿಳಾ ಚಳುವಳಿಗಳಲ್ಲಿ ಮಹಿಳೆಯರು ಒಕ್ಕೊರಲಿನಿಂದ ಬೀದಿಗಿಳಿದು ಹೋರಾಟಕ್ಕೆ ಮುಂದಾದಾಗ ಶೋಷಣೆ, ಅನ್ಯಾಯ, ಹಿಂಸೆ, ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಘೋಷಣೆಗಳನ್ನು ಕೂಗುವಲ್ಲಿ ಈ ಅತ್ಯಾಚಾರ ಪದವು ವಿಶೇಷವಾಗಿ ಬಳಕೆಯಾಗಿದೆ.

೩) ಮಹಿಳಾ ಸಬಲೀಕರಣ :

ಮಹಿಳೆಯು ಪುರುಷನಷ್ಟೇ ಸಶಕ್ತಳಾದವಳು, ಬಲಿಷ್ಟಳಾದವಳು ಎಂಬುದು ಈ ಪದದ ಅರ್ಥ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯು ಕೂಡ ರಾಜಕೀಯವಾಗಿ, ಆರ್ಥಿಕವಾಗಿ ಮುಂತಾದ ವಲಯಗಳಲ್ಲಿ ಪುರಷನಷ್ಟೇ ಸಮಾನತೆಯನ್ನು ಪಡೆದುಕೊಂಡಿದ್ದಾಳೆ ಎಂಬುದನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಈ ಪದ ಬಳಕೆಯಾಗಿದೆ. ಮಹಿಳಾ ಚಳುವಳಿಗಳಲ್ಲಿ ಮಹಿಳಾ ಸಂಘಟನೆಗಳು, ಸ್ತ್ರೀವಾದಿಗಳು ವಿಶೇಷವಾಗಿ ಈ ಪದವನ್ನು ಬಳಕೆಮಾಡುತ್ತಾರೆ. ಸರಕಾರವು ಕೂಡ ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳಾ ಮೀಸಲಾತಿಯನ್ನು ಕೊಟ್ಟಿರುವುದು ಮಹಿಳಾ ಸ್ವಾತಂತ್ರಕ್ಕೆ ಹಿಡಿದ ಕನ್ನಡಿಯಾಗಿದೆ. ಮಹಿಳಾ ಸಬಲೀಕರಣ ಪದಕ್ಕನುಗುಣವಾಗಿ ಸಬಲೀಕೃತ ಮಹಿಳೆ ಎಂಬ ಪದವು ಹುಟ್ಟಿಕೊಂಡಿದೆ.

೪) ಮಹಿಳಾ ಸಂಘಟನೆ :

ಮಹಿಳಾ ಸ್ವಸಹಾಯ ಸಂಘಗಳು, ಮಹಿಳಾ ಸಂಘ ಸಂಸ್ಥೆಗಳು ಮಹಿಳಾ ವರ್ಗಕ್ಕೆ ಆಗುತ್ತಿರುವ ಶೋಷಣೆ, ಅನ್ಯಾಯ, ಅಸಮಾನತೆಯ ವಿರುದ್ಧ ಪ್ರತಿಭಟಿಸುವಾಗ, ಹೋರಾಡುವಾಗ ಮಹಿಳಾ ಸಂಘಟನೆಗಳು ಒಂದಾಗುತ್ತವೆ. ಮಹಿಳಾ ವರ್ಗಕ್ಕೆ ನ್ಯಾಯ ದೊರಕಿಸಿಕೊಳ್ಳುವಲ್ಲಿ ಮಹಿಳಾ ಸಂಘಟನೆಗಳ ಪಾತ್ರ ಗಮನಾರ್ಹವಾದದ್ದಾಗಿದೆ. ಈ ಹಿನ್ನೆಲೆಯಲ್ಲಿ ಅನೇಕ ಹಳ್ಳಿಗಳಲ್ಲಿ ಮಹಿಳಾ ಸ್ವಸಹಾಯ ಸಂಘಗಳು, ಸ್ತ್ರೀಮಂಡಳಿಗಳು, ಮಹಿಳಾ ಸಂಘ ಸಂಸ್ಥೆಗಳು ರೂಪ ತಳೆದಿವೆ. ಮಹಿಳಾ ವರ್ಗದ ಪರವಾಗಿ ತಮ್ಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿವೆ.

೫) ಅಂತರಾಷ್ಟ್ರೀಯ ಮಹಿಳಾ ಚಳುವಳಿ :

ಮಹಿಳಾ ಹೋರಾಟ, ಮಹಿಳಾ ಆಂದೋಲನ, ಮಹಿಳಾ ಚಳುವಳಿಗಳು ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲೂ ನಡೆಯುತ್ತವೆ. ಈ ಚಳುವಳಿಗಳ ಮುಖಾಂತರ ಮಹಿಳಾ ಸಮಸ್ಯೆಗಳನ್ನು, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಜಾಗೃತಿಮೂಡಿಸುತ್ತಾ ನ್ಯಾಯವನ್ನು ಪಡೆದುಕೊಳ್ಳುವುದಾಗಿರುತ್ತದೆ. ಈ ಚಳುವಳಿಗಳು ಪುರುಷರ ಚಳುವಳಿಗಳಂತೆ ಇಂದು ನಡೆಯುತ್ತಿರುವುದು ಕಂಡುಬರುತ್ತದೆ.

ಮಹಿಳಾ ಹೋರಾಟದ ಹಾಡುಗಳಲ್ಲಿಯ ಪರಿಭಾಷೆಯ ಸ್ವರೂಪ :

ಸಾಮಾನ್ಯವಾಗಿ ಹೋರಾಟದ ಪರಿಭಾಷೆ ಆಯಾ ಸಾಮಾಜಿಕ ಸಂಘಟನೆಯ ಮೇಲೆ ನಿರ್ಧರಿತವಾಗಿರುತ್ತದೆ. ಮಹಿಳಾ ಹೋರಾಟದ ಹಾಡುಗಳಲ್ಲಿ ಬಳಕೆಯಾಗಿರುವ ಪರಿಭಾಷೆ ದೇಶಿನೆಲೆಯದ್ದಾಗಿದೆ. ಸಾಮಾಜಿಕ ಪರಿಸರದಲ್ಲಿನ ಭಾಷೆಯನ್ನು ಗಮನಿಸಿ ಹಾಡುಗಳನ್ನು ರಚನೆ ಮಾಡಲಾಗಿದೆ. ಸಂಸ್ಕೃತದ ಮತ್ತು ಇಂಗ್ಲೀಷಿನ ಪ್ರಭಾವ ತುಂಬ ಕಡಿಮೆ ಎಂದೇ ಹೇಳಬಹುದು. ಕರ್ನಾಟಕದಲ್ಲಿ ಕಳೆದ ನಾಲ್ಕೈದು ದಶಕಗಳಿಂದ ಹಲವು ಹೋರಾಟಗಳು ನಡೆದಿವೆ ಮತ್ತು ಇಂದು ನಡೆಯುತ್ತಿವೆ. ಕರ್ನಾಟಕದ ಜನಸಾಮಾನ್ಯರ ಅದರಲ್ಲೂ ಮಹಿಳೆಯರ ಬದುಕಿನ ಪ್ರಗತಿಪರ ಬದಲಾವಣೆಗಾಗಿ ತಂತಮ್ಮ ಕೊಡುಗೆಗಳನ್ನು ನೀಡುತ್ತ ಬಂದಿವೆ. ಮಹಿಳೆಯರ ಹೋರಾಟ, ಚಳುವಳಿಗಳಿಗೆ ಲಾವಣಿಗಳು, ಹೋರಾಟದ ಹಾಡುಗಳು, ಕ್ರಾಂತಿ ಗೀತೆಗಳು, ಘೋಷಣೆಗಳು ಸ್ಫೂರ್ತಿ ತುಂಬುತ್ತ ಅವುಗಳ ಜೊತೆಜೊತೆಯಲ್ಲಿಯೇ ಈ ಹೋರಾಟದ ಹಾಡುಗಳು ಜನಪ್ರೀಯವಾಗಿವೆ. ಹಲವು ಆಡಿಯೋ ಕ್ಯಾಸೆಟ್‌ಗಳು ಜನಪ್ರೀಯತೆಗಳಿಸಿವೆ. ಮಹಿಳಾ ಹೋರಾಟದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪ್ರಮುಖವಾದ ಹಾಡುಗಳನ್ನು ಗಮನಿಸಿರಿ.

'ಸಮಾನತೆಯ ಸಂಸ್ಕೃತಿ ಇಂದು ನಮಗೆ ಬೇಕಿದೆ
ಹೆಣ್ಣು ಪೂರ್ಣ ರೀತಿಯಲ್ಲಿ ಮುಕ್ತಳಾಗಬೇಕಿದೆ'

'ಹುಟ್ಟಿನಿಂದಲೇ ಹೆಣ್ಣಿಗೇಕೆ ಈ ಭೇದವು
ಮಗನಾದ್ರೆ ವಂದನೆ ಮಗಳಾದ್ರೆ ನಿಂದನೆ
ಹೆಣ್ಣು ಭಾರವೆಂಬ ನಿಮಗೆ ನಮ್ಮ ದಿಕ್ಕಾರವು'

'ಮಹಿಳೆಯರನ್ನು ದೇವಿ ದೇವಿ ದೇವಿ ಅಂತಾರ
ಸೂರತ್ ಮುಂಬೈ ಬೀದಿಯಲ್ಲಿ ರೇಪು ಮಾಡ್ತಾರ
ಮಹಿಳೆಯರೇಳಿಗೆ ಅಂತ ಇವರು ಬಾಯಲಿ ಹೇಳ್ತಾರ
ಆಧುನಿಕ ಮನುಗಳಾಗಿ ರೂಪಗೊಂಡಾರ'

'ಮಾತೆಯರೆಂದು ಮಾತಲ್ಲಿ ಹೇಳ್ತಾರೆ
ಬೀದಿಯಲಿ ಬೆತ್ತಲು ಮಾಡ್ತಾರೆ
ಒಪ್ಪತ್ತು ಗಂಜಿಗೂ ಮೈಯ ಮಾರುವ
ನಮ್ಮಕ್ಕ ತಂಗೀರು ತುಂಬವ್ರೆ'

'ತೂರಬೇಡಿ ಗಾಳಿಗೆ
ಹೆಣ್ತನದ ಘನತೆಯ
ಜೀವ ಕೊಡುವ ಜೀವ ಇದು
ಕಡಿಮೆ ಯಾರಿಗೆ ಕಡಿಮೆ ಯಾರಿಗೆ'

'ದೋಚುವ ದೊರೆಗಳ ಇರುವಷ್ಟು ಕಾಲವು
ಗಂಡಸರ ಹಿರಿತನದ ಬಂಧನವು ಇರೋತನಕ
ಉತ್ಪತ್ತಿಯಲ್ಲಿ ನಿನಗೆ ಹಕ್ಕು ಸಿಗುವತನಕ'

ಮಹಿಳಾ ಹೋರಾಟದ ಈ ಹಾಡುಗಳಲ್ಲಿ ಸಮಾನತೆ, ದಿಕ್ಕಾರ, ರೇಪು, ಬೆತ್ತಲು, ಹೆಣ್ತನ, ಹಕ್ಕು ಮೊದಲಾದ ಪದಗಳು ಮಹಿಳಾ ಹೋರಾಟ ಅಥವಾ ಚಳುವಳಿಯ ಪಾರಿಭಾಷಿಕ ಪದಗಳಾಗಿ ರೂಪಗೊಂಡಿವೆ. ಮಹಿಳಾ ವರ್ಗವು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಶತಶತಮಾನಗಳಿಂದ ಅನುಭವಿಸುತ್ತ ಬಂದಿರುವ ನೋವಿನ ತುಡಿತವನ್ನು ಇವು ಪ್ರತಿಧ್ವನಿಸುತ್ತವೆ. ಇಂತಹ ವಿಶಿಷ್ಟವಾದ ಪದಗಳೇ ಈ ಚಳುವಳಿಯ ಪಾರಿಭಾಷಿಕ ಪದಗಳಾಗಿ ಪರಿಣಮಿಸುತ್ತವೆ. ಇಂತಹ ಪಾರಿಭಾಷಿಕ ಪದಗಳು ಹೋರಾಟದ ಸಂದರ್ಭ ಸನ್ನಿವೇಶಕ್ಕನುಗುಣವಾಗಿ ಮಹಿಳಾ ಹೋರಾಟಗಳಲ್ಲಿ ಬಳಕೆಯಾಗುತ್ತವೆ.

ಮಹಿಳಾ ಹೋರಾಟ ಅಥವಾ ಚಳುವಳಿಯಲ್ಲಿಯ ಘೋಷಣೆಗಳಲ್ಲಿ ಪರಿಭಾಷೆ :

ಮಹಿಳಾ ಹೋರಾಟದ ಪರಿಭಾಷೆ ಎಂದರೆ ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆ ಎಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ ಆಯಾ ಹೋರಾಟದ ವಸ್ತು, ಸಂದರ್ಭ, ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನೆಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಶೈಕ್ಷಣಿಕವಾಗಿ ಹೋರಾಟದಲ್ಲಿನ ಸಂದರ್ಭದ ಭಾಷೆ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ.

ಯಾವುದೇ ಹೋರಾಟಕ್ಕೆ ಘೋಷಣೆಗಳು ಹೋರಾಟದ ಜೀವಾಳವಾಗಿರುತ್ತವೆ. ಈ ಘೋಷಣೆಗಳು ಹೋರಾಟದ ಮೂಲ ಧೋರಣೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಘೋಷಣೆಗಳು ಹೋರಾಟಕ್ಕೆ ತಕ್ಕಂತೆ ನಿರ್ಮಾಣವಾಗಿರುತ್ತವೆ. ಹೋರಾಟಕ್ಕೆ ತಕ್ಕಂತೆ ಘೋಷಣೆಗಳು ಕೂಡ ಪಾರಿಭಾಷಿಕ ಪದಗಳಿಂದ ಕೂಡಿರುತ್ತವೆ. ಘೋಷಣೆಗಳನ್ನು ಹೋರಾಟದ ಹಾಡುಗಳಲ್ಲಿಯ ಕೆಲವೊಂದು ಸಾಲಗಳನ್ನು ಎತ್ತಿಕೊಂಡು ಎಣೆಯುವುದು ಒಂದು ರೀತಿಯಾದರೆ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿ ಮಾಡುವುದು ಇನ್ನೊಂದು ರೀತಿಯಾಗಿರುತ್ತದೆ. ನಿದರ್ಶನಕ್ಕೆ ಕೆಲವೊಂದು ಘೋಷಣೆಗಳನ್ನು ದಾಖಲಿಸಲಾಗಿದೆ.

೧) ಘನತೆ, ಸಮಾನತೆ ರಕ್ಷಣೆಗಾಗಿ .... ಅಧಿಕಾರ ಮತ್ತು ಆಸ್ತಿಯಲ್ಲಿ ಸಮಪಾಲಿಗಾಗಿ.

೨) ವರದಕ್ಷಿಣೆಯನ್ನು ತೆಗೆದುಕೊಳ್ಳುವುದು ಬೇಡ .... ಕೊಡುವುದು ಬೇಡ.

೩) ಸಾರಾಯಿ ಸಹವಾಸ .... ಹೆಂಡತಿ ಮಕ್ಕಳ ಉಪವಾಸ.

೪) ಪುರಷರ ಕಾಮದ ಕಾಯಿಲೆಗೆ ಬಲಿಯಾಗುತ್ತಿರುವ ಮಹಿಳೆಯರ ನೋವಿನ ಜೀವವು ನಿಲ್ಲಲಿ.........ನಿಲ್ಲಲಿ.

೫) ನಮ್ಮ ದೇಶದ ಸಂಸ್ಕೃತಿಯಲ್ಲಿ ಹೆಣ್ಣನ್ನು ಕಡೆಗಣಿಸುವ ಬುದ್ಧಿಗೇಡಿಗಳಿಗೆ ದಿಕ್ಕಾರ...........ದಿಕ್ಕಾರ.

೬) ಮಹಿಳೆಯರ ಮೇಲಿನ ದೌರ್ಜನ್ಯಗಳು ನಿಲ್ಲಲಿ.........ನಿಲ್ಲಲಿ.

೭) ಮಹಿಳೆಯರನ್ನು ಪ್ರಗತಿಪರ ಆಲೋಚನೆಗಳಿಗೆ ಬಿಡದೆ ಅವರ ಬುದ್ಧಿವಂತಿಕೆಯನ್ನು ತುಳಿಯುತ್ತಿರುವ ವಾತಾವರಣ ನಿಲ್ಲಲಿ.........ನಿಲ್ಲಲಿ.

೮) ಮಹಿಳೆಯರಿಗೆ ಶೇ. ೩೩ ರಷ್ಟು ರಾಜಕೀಯ ಮೀಸಲಿಡದೆ ಮಹಿಳೆಯರನ್ನು ಕಡೆಗಣಿಸುವ ನ್ಯಾಯಾಲಯಗಳಿಗೆ ದಿಕ್ಕಾರ........ದಿಕ್ಕಾರ.

೯) ಲಿಂಗ ತಾರತಮ್ಯದ ಸಂಕೋಲೆಗಳು ಬೇಡವೆಬೇಡ .... ಬೇಡವೆಬೇಡ.

೧೦) ನವಸಮಾಜದ ರಚನೆಯಲ್ಲಿ ಮಹಿಳೆಯರ ಮೇಲಿನ ನಿರ್ಲಕ್ಷ್ಯ ಬೇಡವೆಬೇಡ .... ಬೇಡವೆಬೇಡ

೧೧) ಬಾಲ್ಯವಿವಾಹ ಮಾಡಿ ಮಹಿಳೆಯರನ್ನು ಶಿಕ್ಷಣ ವಂಚಿತರನ್ನಾಗಿ ಮತ್ತು ಮಹಿಳೆಯರ ಏಳಿಗೆಗೆ ಧಕ್ಕೆ ಉಂಟು ಮಾಡುತ್ತಿರುವ ಭ್ರಷ್ಟರಿಗೆ ದಿಕ್ಕಾರ.............ದಿಕ್ಕಾರ.

೧೨) ಮಹಿಳೆಯರ ಮೇಲಿನ ಸಾಮೂಹಿಕ ಅತ್ಯಾಚಾರಗಳು ನಿಲ್ಲಲಿ.........ನಿಲ್ಲಲಿ.

೧೩) ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಬೇಕು ....ಸ್ಥಾಪಿಸಬೇಕು.

೧೪) ಎಲ್ಲಾ ಹಳ್ಳಿಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳು ರಚನೆಯಾಗಲಿ............. ರಚನೆಯಾಗಲಿ.

೧೫) ಎಲ್ಲಾ ಶಾಲಾ-ಕಾಲೇಜುಗಳಲ್ಲೂ, ಕಛೇರಿಗಳಲ್ಲೂ, ಪ್ರತಿಯೊಂದು ಸಂಘ ಸಂಸ್ಥೆಗಳಲ್ಲೂ ಮಹಿಳೆಯರ ದಿನಾಚರಣೆ ನಡೆಯಲೇಬೇಕು..............ನಡೆಯಲೇಬೇಕು.

೧೬) ಹೆಣ್ಣನ್ನು ಕಾಮದ ಸಂಕೇತವನ್ನಾಗಿ ಜಾಹೀರಾತುಗಳಲ್ಲಿ ತೋರಿಸುತ್ತಿರುವ ಬಂಡವಾಳಶಾಹಿಗಳ ಕಂಪನಿಗಳಿಗೆ ದಿಕ್ಕಾರ............ದಿಕ್ಕಾರ.

೧೭) ಮಹಿಳೆಯರನ್ನು ಬೆತ್ತಲೆ ಮೆರವಣಿಗೆಗಳನ್ನು ಮಾಡುವ ಭ್ರಷ್ಟರನ್ನು ಗಲ್ಲಿಗಾಕಿ...........ಗಲ್ಲಿಗಾಕಿ.

೧೮) ಹಣದ ಆಸೆಗಾಗಿ ಮಹಿಳೆಯರನ್ನು ಸೌಂದರ್ಯ ಸ್ಪರ್ಧೆಯಲ್ಲಿ ಬಟ್ಟೆ ಬಿಚ್ಚುವಂತೆ ಮಾಡುತ್ತಿರುವ ಸೌಂದರ್ಯ ಸ್ಪರ್ಧೆಗಳು ನಿಲ್ಲಲಿ...........ನಿಲ್ಲಲಿ.

೧೯) ಅಶ್ಲೀಲ ಚಿತ್ರಗಳಲ್ಲಿ ಮಹಿಳೆಯರ ಬೆತ್ತಲೆ ದೇಹವನ್ನು ತೋರಿಸುವ ನಿರ್ಮಾಪಕರನ್ನು ಗಲ್ಲಿಗಾಕಿ..........ಗಲ್ಲಿಗಾಕಿ.

೨೦) ಮಹಿಳೆಯರಿಗೆ ಸಮರ್ಥವಾದ ನಾಯಕತ್ವವನ್ನು ನೀಡದಿರುವ ಸರಕರಾಗಳಿಗೆ ದಿಕ್ಕಾರ.......... ದಿಕ್ಕಾರ.

೨೧) ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿರುವ ಭ್ರಷ್ಟರಿಗೆ ದಿಕ್ಕಾರ.............ದಿಕ್ಕಾರ.

೨೨) ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಬೌದ್ಧಿಕ ಉನ್ನತಿಗೆ ಶ್ರಮಿಸದಿರುವ ರಾಜಕೀಯ ಆಡಳಿತದ ವ್ಯವಸ್ಥೆಗೆ ದಿಕ್ಕಾರ............ದಿಕ್ಕಾರ.

೨೩) ಮಹಿಳಾ ಹೋರಾಟಕ್ಕೆ ಜಯವಾಗಲಿ .... ಜಯವಾಗಲಿ.

೨೪) ಎಲ್ಲಾ ರಂಗಗಳಲ್ಲಿ ಮಹಿಳೆಯರ ಸಮಾನತೆಯ ಹೋರಾಟವು ಜಾರಿಯಾಗಲಿ........ ಜಾರಿಯಾಗಲಿ.

೨೫) ಜಾತಿವಾದ, ಅಸ್ಪ್ರಶ್ಯತೆ, ಮೂಢನಂಬಿಕೆಗಳಿಂದ ಮಹಿಳೆಯರನ್ನು ಬಿಡುಗಡೆಮಾಡಿ............. ಬಿಡುಗಡೆಮಾಡಿ.

೨೬) ಮಹಿಳೆಯರ ಬೆತ್ತಲೆ ಚಿತ್ರಗಳನ್ನು ಸಮೂಹ ಮಾಧ್ಯಮದಲ್ಲಿ ತೋರಿಸುವವರಿಗೆ ಧಿಕ್ಕಾರ ....ಧಿಕ್ಕಾರ.

೨೭) ಮಹಿಳೆಯರ ಉದ್ಯೋಗ ಭದ್ರತೆಯನ್ನು ನೀಡುವುದರಲ್ಲಿ ವಿಫಲವಾಗಿರುವ ಸರಕಾರಗಳಿಗೆ ಧಿಕ್ಕಾರ........ ಧಿಕ್ಕಾರ.

೨೮) ವರ್ಗ, ಜಾತಿ, ಲಿಂಗದ ಆಧಾರದ ಮೇಲೆ ಮಹಿಳೆಯರ ಮೇಲೆ ಆಗುತ್ತಿರುವ ಶೋಷಣೆಗಳು ನಿಲ್ಲಲಿ..........ನಿಲ್ಲಲಿ.

೨೯) ಮಹಿಳೆಯರಿಗೆ ನ್ಯಾಯಬದ್ಧ ಹಕ್ಕುಗಳನ್ನು ಸರಕಾರಗಳು ನೀಡಲೇಬೇಕು........ ನೀಡಲೇಬೇಕು.

೩೦) ಎಲ್ಲಾ ಮಹಿಳೆಯರಿಗೂ ಸರಿಯಾದ ರಕ್ಷಣೆಯನ್ನು ನೀಡುವುದರಲ್ಲಿ ವಿಫಲವಾಗಿರುವ ಸರಕಾರಕ್ಕೆ ಧಿಕ್ಕಾರ........ ಧಿಕ್ಕಾರ.

೩೧) ಮಹಿಳೆಯರನ್ನು ದೇವದಾಸಿಯಂತಹ ಅನಿಷ್ಠ ಪದ್ಧತಿಗೆ ದೂಡುತ್ತಿರುವ ಭ್ರಷ್ಟರಿಗೆ ಧಿಕ್ಕಾರ........ ಧಿಕ್ಕಾರ.

೩೨) ಬಡ ಮಹಿಳೆಯರಿಗೆ ಬಿ.ಪಿ.ಎಲ್. ಅಂತ್ಯೋದಯ ಕಾರ್ಡುಗಳನ್ನು ನೀಡದಿರುವ ಸರಕಾರಕ್ಕೆ ಧಿಕ್ಕಾರ........ ಧಿಕ್ಕಾರ.

೩೩) ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯಗಳು ನಿಲ್ಲಲಿ......... ನಿಲ್ಲಲಿ.

೩೪) ಬ್ರೂಣಹತ್ಯ ಮಾಡುತ್ತಿರುವ ವೈದ್ಯರಿಗೆ ಧಿಕ್ಕಾರ......... ಧಿಕ್ಕಾರ.

೩೫) ಮಹಿಳೆಯರೆಲ್ಲ ಒಂದಾಗಿ ಒಂದಾಗಿ .... ಹೋರಾಟಕ್ಕೆ ಮುಂದಾಗಿ ಮುಂದಾಗಿ.

೩೬) ಮಹಿಳಾ ವಿಮೋಚನೆಯ ಹೋರಾಟ ಚಿರಾಯುವಾಗಲಿ .... ಮಾರ್ಚ್ ೮ ಚಿರಾಯುವಾಗಲಿ.

೩೭) ಎಲ್ಲಾ ಮಹಿಳೆಯರಿಗೂ ಉದ್ಯೋಗ ನೀಡಿ, ಎಲ್ಲಾ ಉದ್ಯೋಗಗಳಿಗೂ ಪೂರ್ಣವೇತನ ನೀಡಿ.

೩೮) ಮಹಿಳೆಯರ ವಿರುದ್ಧದ ದೌರ್ಜನ್ಯ ಮತ್ತು ಶೋಷಣೆ ನಿಲ್ಲಿಸಿ..... ನಿಲ್ಲಿಸಿ.

೩೯) ಅಧಿಕಾರದಲ್ಲಿರುವವರೇ ಪ್ರಜ್ಞಾವಸ್ಥೆಗೆ ಬನ್ನಿ .... ಪ್ರಜ್ಞಾವಸ್ಥೆಗೆ ಬನ್ನಿ.

೪೦) ಆಸಿಡ್ ದಾಳಿಯಿಂದ ನೊಂದ ಮಹಿಳೆಯರಿಗೆ ಸೂಕ್ತ ನ್ಯಾಯ ಬೇಕು .... ನ್ಯಾಯ ಬೇಕು.

೪೧) ಕೌಟುಂಬಿಕ ದೌರ್ಜನ್ಯಗಳಿಂದ ಮಹಿಳೆಯರಿಗೆ ರಕ್ಷಣೆ ಬೇಕು..... ರಕ್ಷಣೆ ಬೇಕು.

೪೨) ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಶೇ. ೫೦ ರಷ್ಟು ಉದ್ಯೋಗ ನೀಡಿ .... ಉದ್ಯೋಗ ನೀಡಿ.

ಅಡಿಟಿಪ್ಪಣಿಗಳು

೬) ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ. ಡಾ॥ ಡಿ. ಮಂಗಳಾ ಪ್ರಿಯದರ್ಶಿನಿ, ಮ.ಅ.ಕೇ.ಕ.ವಿ.ವಿ.ಹಂಪಿ ಪುಟ ಸಂಖ್ಯೆ–೩೦.

೭) ಅದೇ – ಪುಟ ಸಂಖ್ಯೆ ೩೪.

೮) ಅದೇ – ಪುಟ ಸಂಖ್ಯೆ ೩೮.

೯) ಅದೇ – ಪುಟ ಸಂಖ್ಯೆ ೨೪೭

ಅಧ್ಯಾಯ-೫

ಕಾರ್ಮಿಕ ಹೋರಾಟದ ಪರಿಭಾಷೆಯ ಸ್ವರೂಪ

ಅಧ್ಯಾಯ-೫

ಕಾರ್ಮಿಕ ಹೋರಾಟದ ಪರಿಭಾಷೆಯ ಸ್ವರೂಪ

೧೯ನೆಯ ಶತಮಾನದ ಮಧ್ಯಭಾಗದಿಂದ ಭಾರತ ದೇಶದಲ್ಲಿ ಆಧುನಿಕ ಉದ್ಯಮಗಳು ಪ್ರಾರಂಭವಾದವು. ಇಲ್ಲಿ ಉದ್ಯಮಗಳು ಅಭಿವೃದ್ಧಿಯಾಗುವ ಆಕಾಂಕ್ಷೆ ಬ್ರಿಟೀಷ್ ಸರಕಾರಕ್ಕೆ ಇಷ್ಟವಿರಲಿಲ್ಲ. ಭಾರತ ದೇಶವನ್ನು ಕೃಷಿ ಆಧಾರಿತ ಕಚ್ಚಾ ವಸ್ತುಗಳ ಉತ್ಪಾದನೆಗೆ ಬಳಸಿಕೊಳ್ಳವ ಉದ್ದೇಶವನ್ನು ಬ್ರಿಟೀಷ್ ಸರಕಾರ ಹೊಂದಿತ್ತು. ಚೀನಾ ದೇಶದಿಂದ ಟೀಯನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿ ಇಲ್ಲಿಯೇ ಟೀ, ಕಾಫಿ ತೋಟಗಳನ್ನು ಅಭಿವೃದ್ಧಿ ಮಾಡಲಾಯಿತು. ಹೀಗೆಯೇ ಅಫೀಮು, ಹತ್ತಿ ಮುಂತಾದ ಬೆಳೆಗಳನ್ನು ಬೆಳೆಯಲು ಗಮನಹರಿಸಲಾಯಿತು. ಟೀ ಮಾತ್ರ ಅಧಿಕ ಮಂದಿ ಕಾರ್ಮಿಕರನ್ನು ಒಳಗೊಂಡ ಬೃಹತ್ ಪ್ರಮಾಣದ ಉದ್ಯಮವಾಗಿ ಬೆಳೆಯಿತು. ಕಚ್ಚಾಮಾಲುಗಳನ್ನು ಸಾಗಿಸಲು ರೈಲ್ವೆ ಪ್ರಮುಖ ಬಂದರುಗಳು ನಿರ್ಮಾಣವಾದವು. ಇವುಗಳಿಗೆಲ್ಲ ಬ್ರಿಟೀಷ್ ಸರಕಾರವೆ ಬಂಡವಾಳವನ್ನು ಹಾಕಲಾಯಿತು. ಕಲ್ಕತ್ತಾದಲ್ಲಿ ವಿದೇಶೀಯ ಒಡೆತನದಲ್ಲಿ ಸೆಣಬು ಕಾರ್ಖಾನೆಗಳು, ಅಹಮದಾಬಾದಿನಲ್ಲಿ ಭಾರತೀಯ ಒಡೆತನದ ಹತ್ತಿ ಜವಳಿ ಉದ್ಯಮಗಳು ಪ್ರಾರಂಭವಾದವು. ಈ ಕಾರ್ಖಾನೆಗಳು ಹುಟ್ಟಿಕೊಂಡ ಪರಿಣಾಮವಾಗಿ ಕಾರ್ಮಿಕ ವರ್ಗ ರೂಪಗೊಂಡಿತು. ಕಾರ್ಖಾನೆಗಳ ಮಾಲೀಕರ ಶೋಷಣೆ, ಅಸಮಾನತೆ, ಕಡಿಮೆ ಕೂಲಿ, ಅಧಿಕ ಶ್ರಮ, ಮಿತಿಯಿಲ್ಲದ ದುಡಿಮೆ, ಹೀನಾಯವಾದ ವಸತಿ ಸೌಕರ್ಯ, ದಬ್ಬಾಳಿಕೆ ಮುಂತಾದವುಗಳ ವಿರುದ್ಧ ಪ್ರಾರಂಭದ ಹಂತದಲ್ಲಿಯೇ ಕಾರ್ಮಿಕರು ತಮಗೆ ತಿಳಿದ ರೀತಿಯಲ್ಲಿ ಹೋರಾಟ ಮಾಡಬೇಕಾಯಿತು. ಅಂದಿನ ರಾಷ್ಟ್ರೀಯ ಚಳುವಳಿಯ ನಾಯಕರು ಕಾಂಗ್ರೇಸ್ ಅಧಿವೇಶನಗಳಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಕುರಿತು ತೀರ್ಮಾನಗಳನ್ನು ಮಾಡಿ ಸಹಾನುಭೂತಿ ತೋರಿಸುತ್ತಿದ್ದರು.

'ಮೊದಮೊದಲ ಕೆಲವು ಹೋರಾಟಗಳೆಂದರೆ ೧೮೨೭ ರಲ್ಲಿ ಕಲ್ಕತ್ತೆಯ ಪಲ್ಲಕ್ಕಿ ಹೋರುವವರು. ೧೮೫೫-೫೭ ರಲ್ಲಿ ಕಾಚಾರ್ ಜಿಲ್ಲೆಯ ಟೀ ಕಾರ್ಮಿಕರು. ೧೮೬೩ ರಲ್ಲಿ ಹೌರಾ ರೈಲ್ವೆ ನಿಲ್ದಾಣದ ಪೋರ್ಟರುಗಳು ಹೂಡಿದ ಮುಷ್ಕರಗಳು. ೧೮೭೭ ರಲ್ಲಿ ನಾಗಪುರದ ಎಂಪ್ರೆಸ್ ಮಿಲ್ಲಿನ ಕಾರ್ಮಿಕರು ಹೂಡಿದ ಮುಷ್ಕರ ಮಿಲ್ ಕಾರ್ಮಿಕರ ಮೊದಲ ಮುಷ್ಕರ ಎಂದು ತೋರುತ್ತದೆ. ಇಂತಹ ಮುಷ್ಕರಗಳು ಸಹ ಸಾಕಷ್ಟು ಪ್ರಭಾವ ಬೀರಿದವು. ಕಾರ್ಮಿಕರಲ್ಲದವರು ಕಾರ್ಮಿಕರ ಸಮಸ್ಯೆಗಳತ್ತ ಗಮನಹರಿಸು-ವಂತಾಯಿತು. ಮುಂದೆ ಹೆಮ್ಮರವಾಗಿ ಬೆಳೆದ ಭಾರತೀಯ ಕಾರ್ಮಿಕ ಚಳುವಳಿಯು ಇಂತಹ ಸಹೃದಯಿಗಳು ಕೈಗೊಂಡ ಸಹಾನುಭೂತಿಯುತ ಕಾರ್ಯಗಳಿಂದ ಆರಂಭವಾಯಿತು[೧೦].

ರಾಷ್ಟ್ರೀಯ ಚಳುವಳಿಗೆ ಕಾರ್ಮಿಕ ಚಳುವಳಿಗಳು ಪೂರಕವಾಗಿ ಬೆಳೆಯಲಾರಂಭಿಸಿದವು. ಉಗ್ರಗಾಮಿ ನಾಯಕನಾಗಿದ್ದ ಚಿದಂಬರಂ ಪಿಳ್ಳೆ ಮತ್ತು ಸುಬ್ರಹ್ಮಣ್ಯ ಕಾರ್ಮಿಕರ ಕುಂದುಕೊರತೆಗಳನ್ನು ಕುರಿತು ಪ್ರಚಾರ ಮಾಡಿ, ಕಾರ್ಮಿಕರಲ್ಲಿ ತಮ್ಮ ಜೀವನದ ಸ್ಥಿತಿ ಉತ್ತಮಗೊಳ್ಳಬೇಕು. ತಾವು ಅದಕ್ಕಾಗಿ

---

೧೦ ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು. ಎನ್.ಪಿ. ಶಂಕರನಾರಾಯಣರಾವ್. ಪುಟ ಸಂ: ೨೨೨.

ಹೋರಾಡಬೇಕು ಎಂಬ ಅರಿವು ಮೂಡಿಸಿದರು. ಕಾರ್ಮಿಕರು ಮುಷ್ಕರ ಹೂಡಿ ತಮ್ಮ ಉದ್ದೇಶ ಸಾಧಿಸಬೇಕು ಇಲ್ಲವೇ ಯಂತ್ರ ಸ್ಥಾವರಗಳಿಗೆ ನಷ್ಟ ಮಾಡಿ ಸಾಧಿಸಬೇಕು ಎಂದು ಪ್ರಚಾರ ಮಾಡಿದರು. ಕಾರ್ಮಿಕರನ್ನು ಶೋಷಣೆಗೆ ಗುರಿ ಮಾಡಿ ಮಾಲಿಕರು ಶ್ರೀಮಂತರಾಗುತ್ತಿದ್ದಾರೆಂದು ಸ್ಪಷ್ಟಪಡಿಸಿದರು.

ಈ ರೀತಿ ಪ್ರಚಾರ ಕಾರ್ಯದಿಂದ ಎಚ್ಚರಗೊಂಡ ಕಾರ್ಮಿಕರು ಮುಷ್ಕರಗಳನ್ನು ಹೂಡಿದರು. ಮುಷ್ಕರಕ್ಕೆ ಜನ ಬೆಂಬಲ ಕೋರಿ ಸಭೆ ಸಮಾರಂಭಗಳು ನಡೆಯದಂತೆ ಬ್ರಿಟೀಷ್ ಸರಕಾರ ತಡೆಯಾಜ್ಞೆ ಹೊರಡಿಸಿತು. ನಾಯಕರು ಮನೆಗಳಲ್ಲಿ ಸಭೆ ನಡೆಸಿದರು. ಪತ್ರಿಕೆಗಳು ಮುಷ್ಕರ ನಿರತ ಕಾರ್ಮಿಕರನ್ನು ಬೆಂಬಲಿಸಿ ಅವರ ಸಹಾಯಕ್ಕೆ ಜನ ಮುಂದೆ ಬರಬೇಕೆಂದು ಕರೆ ನೀಡಿದವು. ಅಲ್ಲಲ್ಲಿ ಹಣವನ್ನು ಕೂಡಿಸಿ ಕಾರ್ಮಿಕರಿಗೆ ಗಂಜಿ (ಊಟ) ಕೇಂದ್ರಗಳನ್ನು ತೆರೆಯಲಾಯಿತು. ಇಷ್ಟು ಬಲವಾದ ನಿರಂತರವಾದ ಹೋರಾಟಕ್ಕೆ ಮಣಿದ ಕಾರ್ಖಾನೆಗಳು ಶೇಕಡ ಐವತ್ತರಷ್ಟು ವೇತನ ಹೆಚ್ಚಳ ನೀಡಿ ದುಡಿಮೆಯ ಅವಧಿಯನ್ನು ಕಡಿಮೆ ಮಾಡಿ ಭಾನುವಾರ ರಜಾ ನೀಡಲು ಒಪ್ಪಿಕೊಂಡವು.

ಈ ಕಾರ್ಮಿಕರ ಹೋರಾಟವನ್ನು ಗಮನಿಸಿದ ಬ್ರಿಟಿಷ್ ಸರಕಾರ ನಾಯಕರ ಮೇಲೆ ಉಗ್ರ ಕ್ರಮಕೈಗೊಳ್ಳಲು ನಿರ್ಧರಿಸಿತು. ಬಿಪಿನ್ ಚಂದ್ರಪಾಲರು ಸರಕಾರದ ತಡೆಯಾಜ್ಞೆ ಮುರಿದು ಸಭೆ ನಡೆಸಿದ ಆಪಾದನೆಯ ಮೇಲೆ ಚಿದಂಬರಂ ಪಿಳ್ಳೆ ಮತ್ತು ಸುಬ್ರಹ್ಮಣ್ಯ ಈ ಮೂವರನ್ನು ಸರ್ಕಾರ ಬಂಧಿಸಿತು. ಈ ಬಂಧನಕ್ಕೆ ವಿರುದ್ಧವಾಗಿ ಅನೇಕ ಮಿಲ್ಲುಗಳ, ಸಂಘ ಸಂಸ್ಥೆಗಳ ಕಾರ್ಮಿಕರು ಮುಷ್ಕರ ಹೂಡಿದರು. ಜನರ ಗುಂಪುಗಳು ಕೋರ್ಟು, ಪೋಸ್ಟ್ ಆಫೀಸು, ಪೋಲೀಸ್ ಸ್ಟೇಷನ್ ಮುಂತಾದ ಸರಕಾರಿ ಕಟ್ಟಡಗಳ ಮೇಲೆ ಹಲ್ಲೆ ನಡೆಸಿದವು. ಈ ಹೋರಾಟದಲ್ಲಿ ನಡೆದ ಗೋಲಿಬಾರ್‌ನಲ್ಲಿ ನಾಲ್ವರು ಜನರು ತೀರಿ ಹೋದರು. ಮುಂದೆ ನಡೆದ ತನಿಖೆಯಲ್ಲಿ ಈ ನಾಯಕರುಗಳು ೬ ವರ್ಷ ಕಠಿಣ ಶಿಕ್ಷೆಗೆ ಗುರಿಯಾದರು.

ಇದೇ ಸಮಯದಲ್ಲಿ ರೈಲ್ವೆ ಇಲಾಖೆ, ಪೋಸ್ಟ್ ಆಫೀಸುಗಳಲ್ಲಿ ಮುಷ್ಕರಗಳು ಜರುಗಿದವು. ಆಯಾ ಇಲಾಖೆಗಳ ನೌಕರರ ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜರುಗಿದವಾದರೂ ಆ ಕಾಲದ ರಾಜಕೀಯ ಚಳುವಳಿಗಳಿಗೆ ಬೆಂಬಲವೂ ಆದವು. ಪ್ರಮುಖ ರಾಜಕೀಯ ನಾಯಕರು ಸಭೆಗಳಲ್ಲಿ ಭಾಗವಹಿಸುವುದು ರೂಢಿಗತವಾಯಿತು. ಮಹಾತ್ಮ ಗಾಂಧೀಜಿ, ಲಾಲಾ ಲಜಪತರಾಯ್ ಮುಂತಾದವರು ಇಂತಹ ಸಭೆಗಳನ್ನು ನಡೆಸಿ ಉಳಿದವರಿಗೆ ಮಾದರಿಯಾದರು. ಕೆಲವೊಮ್ಮೆ ಸಭೆ ಸಮಾರಂಭಗಳ ಉದ್ದೇಶ ಯಾವ ಚಳುವಳಿಯ ಪ್ರಚಾರವೂ ಆಗಿರದೆ ತಿಲಕ್ ನಿಧಿ ಸಂಗ್ರಹದಂತಹ ಅತ್ಯಂತ ಶಾಂತ ಉದ್ದೇಶದ್ದೇ ಆಗಿದ್ದರೂ ಸ್ವಾತಂತ್ರ್ಯ ಹೋರಾಟವನ್ನು, ಕಾರ್ಮಿಕ ಚಳುವಳಿಯನ್ನು ಬೆಸೆಯುವ ಕಾರ್ಯದಲ್ಲಿ ಮಹತ್ವದ ಪಾತ್ರವಹಿಸಿ ಕಾರ್ಮಿಕರಲ್ಲಿ ಸ್ವಾತಂತ್ರ್ಯದ ಸಂದೇಶ ಸಾರುತ್ತಿದ್ದವು. ಈ ಪ್ರಚಾರದ ಪರಿಣಾಮವಾಗಿ ಕಾರ್ಮಿಕರು ವಿದೇಶಿ ವಸ್ತ್ರಗಳ ದಹನ, ರಾಜಕೀಯ ಮುಖಂಡರ ಬಂಧನಗಳಿಗೆ ಪ್ರತಿಭಟನೆ ಸೂಚಿಸುವ ಮುಷ್ಕರಗಳು ಇಂತಹ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸ ತೊಡಗಿದರು. ಕಾರ್ಮಿಕರ ಉತ್ಸಾಹದ ಕಾರಣ ಹಲವು ಬಾರಿ ಶಾಂತಿಯುತ ಕಾರ್ಯಾಚರಣೆಗಳು ಗಲಭೆಗಳಾಗಿ ಮಾರ್ಪಡುತ್ತಿದ್ದವು.

'ಭಾರತದಲ್ಲಿ ಉದ್ಯಮಗಳು ಅಭಿವೃದ್ಧಿಯಾಗುವುದು ಬ್ರಿಟನ್ನಿಗೆ ಇಷ್ಟವಿರಲಿಲ್ಲವಾದರೂ ಅನಿವಾರ್ಯವಾಗಿ ಅವು ತಲೆಯುತ್ತಿದ್ದವು. ಬ್ರಿಟೀಷ್ ಬಂಡವಾಳ, ಭಾರತೀಯ ಬಂಡವಾಳ ಎರೆಡೂ ಮುಂದಾಗಿ ಭಾರತದಲ್ಲಿ ಕೈಗಾರಿಕೋದ್ಯಮಿಗಳು ತಲೆಯತ್ತಿ, ಅದರೊಂದಿಗೆ ಕಾರ್ಮಿಕ ವರ್ಗವು ಹುಟ್ಟಿಕೊಂಡಿತು. ಅಸಹನೀಯ ಸನ್ನಿವೇಶಗಳನ್ನು ಎದುರಿಸುತ್ತಿದ್ದ ಕಾರಣ ಆರಂಭದಿಂದಲೇ ಕಾರ್ಮಿಕರು ಒಂಟೊಂಟಿಯಾಗಿ ಇಲ್ಲವೇ ಒಂದುಗೂಡಿ ಹೋರಾಡಲೇಬೇಕಾಯಿತು. ಆರಂಭಕ್ಕೆ ಕೆಲವು ಸಹೃದಯಿ ಸಹಾನುಭೂತಿಪರರು ಸೇವಾಕಾರ್ಯ ಮಾಡಲು ಮುಂದೆ ನಿಂತುದು ಆ ಮುಂದೆ ಕಾರ್ಮಿಕ ಚಳುವಳಿ ಬೆಳೆಯಲು ಭದ್ರ ಅಡಿಪಾಯ ಹಾಕಿತು. ಬಂಗಾಳದಲ್ಲಿ ಸ್ವದೇಶಿ ಚಳುವಳಿಯು ಆರಂಭವಾದ ಕಾಲದಲ್ಲಿ ಮೊದಮೊದಲಿಗೆ ರಾಷ್ಟ್ರೀಯ ಚಳುವಳಿಗೂ ಕಾರ್ಮಿಕರಿಗೂ ನಂಟು ಏರ್ಪಟ್ಟಿತು. ಅಲ್ಲಿಂದಲೇ ಮುಂದೆ ಕಾರ್ಮಿಕ ವರ್ಗವು ಸ್ವಾತಂತ್ರ್ಯ ಹೋರಾಟದಲ್ಲಿ ಗಣನೀಯ ಪಾತ್ರ ವಹಿಸುತ್ತಲೇ ಬಂದಿದೆ[೧೧].

ಕಾರ್ಮಿಕರು ತಮ್ಮ ಜೀವನದ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಕೆಲಸದ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಕಾರ್ಮಿಕರು ಒಂದಾಗಿ ಕೆಲಸವನ್ನು ನಿಲ್ಲಿಸುತ್ತಾರೆ, ಹೋರಾಟ ಮಾಡುತ್ತಾರೆ. ಉತ್ಪಾದನೆ ನಿಂತು ನಷ್ಟವಾಗುತ್ತದೆ ಎಂಬ ಭಯ, ಹೆದರಿಕೆ ಬಂದಾಗ ಬಂಡ್ವಾಳಗಾರರು ಕಾರ್ಮಿಕರ ಬೇಡಿಕೆಗಳನ್ನು ಎಷ್ಟರಮಟ್ಟಿಗೆ ಈಡೇರಿಸಬಹುದು ಎಂದು ವಿಚಾರ ಮಾಡುತ್ತಾರೆ. ಆದ್ದರಿಂದ ಬಂಡ್ವಾಳಗಾರರು ಮತ್ತು ಕಾರ್ಮಿಕರು ಒಗ್ಗಟ್ಟಾಗದಂತೆ ನೋಡಲು ಒಗ್ಗಟ್ಟನ್ನು ಒಡೆಯಲು ತಂತ್ರಗಳನ್ನು ಹೂಡುತ್ತಾರೆ. ಆ ತಂತ್ರಗಳ ಹಿನ್ನೆಲೆಯಲ್ಲಿ ಕಾರ್ಮಿಕರಿಂದ ಚನ್ನಾಗಿ ದುಡಿಸಿಕೊಳ್ಳುತ್ತಾರೆ.

ಕಾರ್ಮಿಕರು ಕೆಲಸಕ್ಕಾಗಿ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ನೆಲೆಸುವುದು ಹೆಚ್ಚು ಬಂಡ್ವಾಳಗಾರರು ಕಾರ್ಮಿಕರು ಒಗ್ಗಟಾಗಿರುವಂತೆ ನೋಡಲು ಒಂದು ಪ್ರದೇಶದಿಂದ ಬಂದಿರುವ ಕಾರ್ಮಿಕರನ್ನು ಇನ್ನೊಂದು ಪ್ರದೇಶದಿಂದ ಬಂದಿರುವ ಕಾರ್ಮಿಕರ ವಿರುದ್ಧವಾಗಿಯೂ ಸ್ಥಳೀಯ ಕಾರ್ಮಿಕರನ್ನು ಹೊರ ರಾಜ್ಯಗಳಿಂದ ಬಂದ ಕಾರ್ಮಿಕರ ಮೇಲೂ ಎತ್ತಿಕಟ್ಟುತ್ತಾರೆ. ಇತ್ತೀಚೆಗೆ ನಾಗರೀಕರಣ, ಯಾಂತ್ರೀಕರಣದ ಪ್ರಭಾವದಿಂದ ಅನೇಕ ಕೈಗಾರಿಕೆಗಳಲ್ಲಿ, ಸೇವೆಗಳಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಾಗಿ ದುಡಿಯುತ್ತಿದ್ದಾರೆ. ಬಂಡ್ವಾಳಗಾರರು ಸಾಮಾನ್ಯವಾಗಿ ಮಹಿಳಾ ಕಾರ್ಮಿಕರಿಗೆ ಕೊಡುವ ಕೂಲಿಯು ಪುರುಷ ಕಾರ್ಮಿಕರಿಗಿಂತ ಕಡಿಮೆ ಇರುತ್ತದೆ. ಈ ಅಸಮಾನತೆಯನ್ನು ಹೋಗಲಾಡಿಸಲು ಮಹಿಳಾ ಕಾರ್ಮಿಕರು ಮತ್ತು ಪುರುಷ ಕಾರ್ಮಿಕರು ಒಗ್ಗಟ್ಟಾಗಿ ಬಂಡ್ವಾಳಗಾರರ ವಿರುದ್ಧವಾಗಿ ಹೋರಾಡಬೇಕು. ಒಂದು ಕಡೆಯಿಂದ ಇಂಥ ಪ್ರಯತ್ನಗಳು ನಡೆದರೆ ಬಂಡ್ವಾಳಗಾರರ ಇನ್ನೊಂದು ವಿಭಾಗವು ಮಹಿಳಾ ಕಾರ್ಮಿಕರನ್ನು ಪುರಷ ಕಾರ್ಮಿಕರ ವಿರುದ್ಧವಾಗಿ ಎತ್ತಿಕಟ್ಟಿ ದುಡಿಸಿಕೊಳ್ಳುತ್ತಾರೆ. ಪುರುಷ ಮತ್ತು ಮಹಿಳಾ ಕಾರ್ಮಿಕರು ಒಗ್ಗಟ್ಟಾಗಿ ಹೋರಾಟಕ್ಕಿಳಿಯದಂತೆ ಬಂಡ್ವಾಳಶಾಹಿಗಳು ನೋಡಿಕೊಳ್ಳುತ್ತಾರೆ. ಕಾರ್ಮಿಕರಲ್ಲಿ ತೀರಾ ಹಿಂದುಳಿದ ಸಾಮಾಜಿಕ ಗುಂಪುಗಳಿಂದ ಬಂದವರೂ, ದಲಿತರೂ, ಆದಿವಾಸಿಗಳೂ ಇರುತ್ತಾರೆ. ಬಂಡ್ವಾಳಗಾರರ ಪ್ರಭುತ್ವ, ದಬ್ಬಾಳಿಕೆಯ ವಿರುದ್ಧ

---

೧೧ ಅದೇ, ಪುಟ ಸಂಖ್ಯೆ ೨೩೬

ಹೋರಾಡಲು ಕಾರ್ಮಿಕರು ಒಗ್ಗಟ್ಟಾಗದಿರುವಂತೆ ಇವರನ್ನು ಉಪಯೋಗಿಸಿಕೊಳ್ಳುತ್ತಾ ಬಂಡ್ವಾಳಗಾರರು ಬಂದಿದ್ದಾರೆ.

ಬಂಡ್ವಾಳಶಾಹಿ ವ್ಯವಸ್ಥೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಅಧಿಕ ಕೂಲಿಗಾಗಿ ಕಾರ್ಮಿಕರು ಮುಷ್ಕರ ಮಾಡಿದರೆ ನಿರುದ್ಯೋಗಿಗಳನ್ನು ಕಡಿಮೆ ಕೂಲಿ ಕೆಲಸಕ್ಕೆ ನೇಮಿಸಿಕೊಳ್ಳುವ ಬೆದರಿಕೆಯನ್ನು ಬಂಡ್ವಾಳಶಾಹಿಗಳು ಒಡ್ಡುತ್ತಾರೆ. ಕಾರ್ಮಿಕರ ಹೋರಾಟವನ್ನು ವಿಫಲಗೊಳಿಸಲು ಬಂಡ್ವಾಳಶಾಹಿಗಳು ಕಾರ್ಮಿಕರ ಮೇಲೆ ಎರಗುವಂತೆ ನಿರುದ್ಯೋಗಿಗಳನ್ನು ಗೂಂಡಾಗಳನ್ನಾಗಿ ಉಪಯೋಗಿಸುತ್ತಾರೆ. ತಪ್ಪಿತಸ್ಥರನ್ನು ಶಿಕ್ಷಿಸುವ ಕಾಯಿದೆಗಳು, ಕಾರ್ಮಿಕರ ಕಲ್ಯಾಣ ಕಾಯಿದೆಗಳು ಭಾರತ ಸಂವಿಧಾನದಲ್ಲಿ ರಚನೆಯಾಗಿವೆ. ಕಾರ್ಮಿಕರ ಕಲ್ಯಾಣ ಕಾಯಿದೆಗಳ ಪ್ರಕಾರ ಕಾರ್ಮಿಕರಿಗೆ ಕೊಡಬೇಕಾದುದನ್ನು, ಕಲ್ಪಿಸಬೇಕಾದ ಅನುಕೂಲತೆಗಳನ್ನು ಅನೇಕ ಬಂಡ್ವಾಳಶಾಹಿಗಳು ಕೊಡುವುದಿಲ್ಲ, ಕಲ್ಪಿಸುವುದಿಲ್ಲ. ಇಂಥ ಬಂಡ್ವಾಳಶಾಹಿಯ ವಿರುದ್ಧ ಕಾರ್ಮಿಕರೆಲ್ಲ ಒಂದಾಗಿ ಹೊರಾಡಬೇಕು. ಅಂತೆಯೇ ಕಾರ್ಲ್‌ಮಾರ್ಕ್ಸ್, ಫ್ರೆಡರಿಕ್ ಎಂಗೆಲ್ಸ್ ವಿರಚಿತ ಕಮುನಿಷ್ಟ್ ಘೋಷಣೆಯಾದ **'ಜಗತ್ತಿನ ಕಾರ್ಮಿಕರೇ ಒಂದಾಗಿರಿ'** ಎಂಬುದು ಬಂಡ್ವಾಳಶಾಹಿಗಳ ಅಸಮಾನತೆ ವಿರುದ್ಧ ಹೋರಾಡಲು ಕಾರ್ಮಿಕರಿಗೆ ಕರೆಕೊಟ್ಟ ಘೋಷಣೆಯಾಗಿದೆ.

ಸರಕಾರ, ಬಂಡ್ವಾಳಶಾಹಿಗಳ ಶೋಷಣೆ, ದಬ್ಬಾಳಿಕೆಯ ವಿರುದ್ಧ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ನಡೆಸಿದ ಅಖಿಲ ಭಾರತ ಮುಷ್ಕರಗಳು, ನವದೆಹಲಿ ಪ್ರದರ್ಶನಗಳು, ಭಾರತ್ ಬಂದ್‌ಗಳು, ಕರ್ನಾಟಕ ಬಂದ್‌ಗಳು, ಜೈಲ್‌ಭರೋ, ಪಂಜಿನ ಮೆರವಣಿಗೆ, ರೈಲು ತಡೆಗಳು, ಮಾನವ ಸರಪಳಿಗಳು ಮುಂತಾದವುಗಳ ಮುಖಾಂತರ ಕಾರ್ಮಿಕರು ಒಟ್ಟಾರೆ ದುಡಿಯುವ ವರ್ಗದವರು ತಮಗೆ ನ್ಯಾಯ ದೊರಕಿಸಿಕೊಳ್ಳಲು ಒಕ್ಕೊರಲಿನಿಂದ ಹೋರಾಟ ಮಾಡಿದ್ದಾರೆ, ಮಾಡುತ್ತಿದ್ದಾರೆ. ಕಾಫಿ, ಟೀ ಮತ್ತು ರಬ್ಬರ್ ಬೆಳೆಯುತ್ತಿದ್ದ ಕಡೆಗಳೆಲ್ಲೆಲ್ಲಾ ಗುಲಾಮರ ದುಡಿಮೆಯೇ ಆ ತೋಟಗಳ ಅಭಿವೃದ್ಧಿಗೆ ಕಾರಣವಾಗಿತ್ತು. ತೋಟಗಳ ಮಾಲಿಕರು ಹೊಟ್ಟೆಗಿಲ್ಲದ ಜನರಿಗೆ ದನಗಳಿಗೆ ಒಂದಿಷ್ಟು ಹುಲ್ಲು ಹಾಕಿದಂತೆ ಒಂದಿಷ್ಟು ಅನ್ನ ಹಾಕಿ ದುಡಿಸಿಕೊಳ್ಳುತ್ತಿದ್ದರು. ಕಾಫಿ, ಟೀ, ತೋಟಗಳಲ್ಲಿ ಕಾರ್ಮಿಕರು ಶತಮಾನಗಳಿಂದ ತುಳಿತ, ಸಾಮಾಜಿಕ ದಬ್ಬಾಳಿಕೆ, ಆರ್ಥಿಕ ಶೋಷಣೆಗೆ ಒಳಗಾಗಿರುವ ಸಮಾಜದ ತೀರಾ ಕೆಳ ಜಾತಿಗಳಿಂದ ಬಂದವರೇ ಅತಿ ಹೆಚ್ಚು. ತೋಟಗಳಲ್ಲಿ ಕೆಲಸ ಮಾಡಲು ಹೋಗಲು ಬಡತನವೇ ಅತೀ ಮುಖ್ಯ ಕಾರಣವಾಗಿತ್ತು.

ಕಾರ್ಮಿಕ ಹೋರಾಟದ ಪರಿಭಾಷೆ ಸೂಚಕ ಪದಗಳು

ಕಾರ್ಮಿಕರ ಸಮಾವೇಶ	ಕಾಂಟ್ರಾಕ್ಟರ್
ಮಾಲಿಕರು	ಗುತ್ತಿಗೆ
ಕನಿಷ್ಠಕೂಲಿ	ಬಂದ್
ಗುಂಡಾಗಿರಿ	ಜಿಂದಾಬಾದ್
ಲಾಲ್‌ಸಲಾಮ್	ರತ್ನಗಂಬಳಿ

ರೆಡ್ ಸೆಲ್ಯೂಟ್	ಸಾಮ್ರಾಜ್ಯಶಾಹಿ
ಗುತ್ತಿಗೆದಾರ	ಬಹುರಾಷ್ಟ್ರೀಯ ಕಂಪನಿ.
ಬೋನಸ್	ಮಾರುಕಟ್ಟೆ
ಬಂಡವಾಳಶಾಹಿ	ಮುಷ್ಕರ
ವಿಶ್ವಕಾರ್ಮಿಕ	ಪಿಂಚಣಿ
ಸಮವಸ್ತ್ರ	ಭವಿಷ್ಯನಿಧಿ
ಸಂಕೋಲೆ	ಸಹಾಯಧನ
ಸ್ವದೇಶಿ	ಉದ್ಯೋಗ
ವಿದೇಶಿ	ಜಿಂದಾಬಾದ್
ಗುಲಾಮ	ಕೈಗಾರೀಕರಣ
ತ್ಯಾಗ ಬಲಿದಾನ	ಭ್ರಷ್ಟರು
ಕಪ್ಪು ಮಾರುಕಟ್ಟೆ ವ್ಯವಸ್ಥೆ	ಬೇಡಿಕೆ ಈಡೇರಿಕೆ
ಸಾಮಾಜಿಕ ನ್ಯಾಯ	ಕಡಿಮೆ ಸಂಬಳ
ಬೆಲೆ ಏರಿಕೆ ನಿಯಂತ್ರಣ	ಹಾಜರಾತಿ ಭತ್ಯೆ
ಸಾರ್ವತ್ರಿಕ ಮುಷ್ಕರ	ಧರಣಿ
ಬಹಿರಂಗ ಸಭೆ	ಮಂಜೂರು
ಅನಿರ್ಧಿಷ್ಟಾವಧಿ	ಜನಶ್ರೀ ಯೋಜನೆ
ಸರಣಿ ಸತ್ಯಾಗ್ರಹ	ಬಡ್ತಿ
ಹಣದುಬ್ಬರ	ಪಡಿತರ ಚೀಟಿ
ಜೈಲ್‌ಭರೋ	ಪಂಜಿನ ಮೆರವಣಿಗೆ

ಕಾರ್ಮಿಕ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪಾರಿಭಾಷಿಕ ಪದಗಳನ್ನು ವಿವರಿಸಲಾಗಿದೆ.

೧) ಮುಷ್ಕರ :

ಮುಷ್ಕರ ಎಂದರೆ ಸತ್ಯಾಗ್ರಹ, ಚಳುವಳಿ, ಆಗ್ರಹ ಎಂಬ ಅರ್ಥಗಳು ಇವೆ. ಪ್ರತಿಭಟನಕಾರರು, ಹೋರಾಟಗಾರರು, ಚಳುವಳಿಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮಾಲಿಕರ ವಿರುದ್ಧ, ಅಧಿಕಾರಿಯ ವಿರುದ್ಧ, ಸರಕಾರದ ಆಡಳಿತದ ವಿರುದ್ಧ ಮುಷ್ಕರ ಹೂಡುತ್ತಾರೆ. ಈ ಮುಷ್ಕರಗಳು ಬೇಡಿಕೆಗಳು ಈಡೇರುವವರೆಗೆ ನಡೆಸುವ ಮುಷ್ಕರಗಳು ಒಂದು ತೆರನಾದರೆ, ಅನಿರ್ಧಿಷ್ಟಾವಧಿಯವರೆಗೆ ನಡೆಯುವ ಮುಷ್ಕರಗಳು ಒಂದು ರೀತಿಯಾಗಿರುತ್ತವೆ. ಈ ಮುಷ್ಕರಗಳಲ್ಲಿ ಪ್ರತಿಭಟನಕಾರರು ತಮ್ಮ ಸಮಸ್ಯೆಗಳ, ಮಾಲಿಕರ ವಿರುದ್ಧ ಘೋಷಣೆಗಳನ್ನು ಕೂಗುತ್ತಾರೆ. ಪ್ರತಿಭಟನಕಾರರು ಮುಷ್ಕರದಲ್ಲಿ ಸಂದರ್ಭಕ್ಕನುಗುಣವಾಗಿ ವಿಶಿಷ್ಟವಾದ ಪದಗಳ ಪ್ರಯೋಗ ಮಾಡುತ್ತಾರೆ. ಆ ಪದಗಳು ಹೋರಾಟದ ವಸ್ತು, ವಿಷಯವನ್ನಾಧರಿಸಿ ಮುಷ್ಕರಗಳು ರೂಪಗೊಳ್ಳುತ್ತವೆ. ಇಂತಹ ಮುಷ್ಕರಗಳಲ್ಲಿ ಪ್ರತಿಭಟನಕಾರರು ತಮ್ಮ ಕೆಲಸ ಕಾರ್ಯಗಳಿಗೆ ಬಹಿಷ್ಕಾರ ಹಾಕಿ ಮುಷ್ಕರಗಳಲ್ಲಿ ಭಾಗಿಯಾಗಿರುತ್ತಾರೆ. ಕೆಲವು ಮುಷ್ಕರಗಳು ಸಾರ್ವತ್ರಿಕ ಮುಷ್ಕರಗಳು ನಡೆಯುತ್ತವೆ.

೨) ಭೂತದಹನ (ಪ್ರತಿಕೃತಿ ದಹನ) :

ಪ್ರತಿಭಟನಕಾರರು ಪ್ರತಿಭಟನೆಯ ಸಂದರ್ಭದಲ್ಲಿ ತಮಗಾದ ಅನ್ಯಾಯ, ಶೋಷಣೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾರೆ. ಹೋರಾಟ ಯಾವ ವಲಯಕ್ಕೆ ಸಂಬಂಧಪಟ್ಟಿರುತ್ತದೆಯೋ ಆ ವಲಯದ ಮಂತ್ರಿ, ಅಧಿಕಾರಿಯ, ಮಾಲಿಕನ ಪ್ರತಿಕೃತಿ ದಹನವನ್ನು ಮಾಡಿ ಹೋರಾಟವನ್ನು ಚುರುಕುಗೊಳಿಸುತ್ತಾರೆ. ರೈತರು ಗೊಬ್ಬರ ನೀಡದ ಸರಕಾರದ ವಿರುದ್ಧ ಘೇರಾವ್ ಹಾಕುತ್ತ ಮುಖ್ಯಮಂತ್ರಿ ಯಡಿಯೂರಪ್ಪನವರ ಭೂತದಹನ ಮಾಡಿರುವುದನ್ನು ನಾವು ನೋಡಿದ್ದೇವೆ. ಈ ಭೂತದಹನ ಮಾಡುವುದರ ಮೂಲ ಉದ್ದೇಶ ಅವಮಾನ ಮಾಡುವುದು, ರಾಜೀನಾಮೆಗೆ ಒತ್ತಾಯಿಸುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಹೋರಾಟ, ಚಳುವಳಿಗಳಲ್ಲಿ ಪ್ರತಿಕೃತಿ ದಹನ ವಿಶೇಷವಾಗಿರುತ್ತದೆ.

೩) ಶ್ರಮಿಕ ವರ್ಗ :

ಶ್ರಮಿಕ ವರ್ಗವೆಂದರೆ ದುಡಿಯುವ ವರ್ಗ ಎಂದರ್ಥ. ಕೈಗಾರಿಕೆ, ಶಿಕ್ಷಣ, ಕಂಪನಿ, ಇತರೆ ವಲಯಗಳಲ್ಲಿ ದುಡಿಯುವ ವರ್ಗದವರನ್ನು ಶ್ರಮಿಕ ವರ್ಗವೆಂದು ಪರಿಗಣಿಸಲಾಗಿದೆ. ಶ್ರಮಪಟ್ಟು, ಬೆವರುಸುರಿಸಿ ದುಡಿಯುವ ವರ್ಗವಾಗಿದೆ. ಈ ವರ್ಗವೇ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉನ್ನತಮಟ್ಟಕ್ಕೊಯ್ಯುತ್ತದೆ. ಈ ವರ್ಗವನ್ನು ಮಾತ್ರ ಸರಕಾರ ಕಡೆಗಣಿಸುತ್ತಲೇ ಬಂದಿದೆ. ಆದರೂ ಶ್ರಮಿಕ ವರ್ಗ ಪ್ರಾಮಾಣಿಕವಾಗಿ ತಮ್ಮ ಶ್ರಮವನ್ನು ದುಡಿತಕ್ಕೆ ಹಾಕುತ್ತಿದ್ದಾರೆ. ಈ ಶ್ರಮಿಕ ವರ್ಗದವರಿಗೆ ಸಮಾನ ಕೂಲಿಗೆ ಸಮಾನ ವೇತನ ನೀಡಿದ್ದೇಯಾದರೆ ಶ್ರಮಿಕವರ್ಗದವರ ಬಾಳು ಹಸನಾಗುತ್ತದೆ. ಈ ದುಡಿಯುವ ವರ್ಗದವರ ಪ್ರತಿಭಟನೆ, ಹೋರಾಟವನ್ನು ಗಮನಿಸಿಯೇ ಶ್ರಮಿಕವರ್ಗ ಪದವು ಬಳಕೆಯಲ್ಲಿದೆ.

೪) ಕಾರ್ಮಿಕಾಂದೋಲನ :

ಕಾರ್ಮಿಕರು, ದುಡಿಯುವ ವರ್ಗದವರು ಮಾಡುವ ಚಳುವಳಿ, ಹೋರಾಟವನ್ನು ಕಾರ್ಮಿಕಾಂದೋಲನವೆಂದು ಕರೆಯಲಾಗುತ್ತದೆ. ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಿರ್ಧಿಷ್ಟವಾದ ಅಥವಾ ಅನಿರ್ಧಿಷ್ಟವಾದ ಕಾಲವಧಿಯಲ್ಲಿ ಮಾಡುವ ಚಳುವಳಿಯಾಗಿರುತ್ತವೆ. ಕಾರ್ಮಿಕರು ಬೋನಸ್, ಪಿಂಚಣಿ, ಕನಿಷ್ಟ ಕೂಲಿ, ಸಮವಸ್ತ್ರ, ಭವಿಷ್ಯ ನಿಧಿ, ಉದ್ಯೋಗ ಖಾಯಂಗೊಳಿಸುವುದು ಮುಂತಾದ ಸಮಸ್ಯೆಗಳ ಈಡೇರಿಕೆಗಾಗಿ ಮಾಡುವ ಆಂದೋಲನ ಕಾರ್ಮಿಕಾಂದೋಲನವಾಗಿದೆ.

೫) ಸಾಮಾಜಿಕ ನ್ಯಾಯ :

ಪ್ರತಿಭಟನಕಾರರು ಸಾಮಾಜಿಕವಾಗಿ ತಮಗೆ ದೊರಕಬೇಕಾದ ನ್ಯಾಯ, ಹಕ್ಕುಬಾದ್ಧತೆಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಪಡೆಯುವುದಾಗಿದೆ. ಈ ನ್ಯಾಯಕ್ಕೋಸ್ಕರ ಪ್ರತಿಭಟನಕಾರರು ಪ್ರತಿಭಟನೆಯಲ್ಲಿ ನಿರತರಾಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಈ ಪ್ರತಿಭಟನೆ ಸರಣಿ ಸತ್ಯಾಗ್ರಹವಾಗಿಯು ಪರಿಣಮಿಸಬಹುದು. ಬೇರೆ ಬೇರೆ ಸಂಘಟನೆಗಳು ಒಗ್ಗೂಡಿ ಬಲಪ್ರಧವಾಗಿ ಸಾಮಾಜಿಕ ನ್ಯಾಯವನ್ನು ಪಡೆಯಲು ಪ್ರತಿಭಟನಕಾರರು ಮುಂದಾದಾಗ ಈ ಪದದ ಬಳಕೆ ಕಂಡು ಬರುತ್ತದೆ. ವಿವಿಧ ವಲಯಗಳಲ್ಲಿ ಈ ಪದಪ್ರಯೋಗ ವಿಶೇಷವಾಗಿ ಬಳಕೆ ಯಾಗುತ್ತಿರುವುದು ಗಮನಾರ್ಹ ಅಂಶವಾಗಿದೆ.

ಕಾರ್ಮಿಕ ಹೋರಾಟದ ಹಾಡುಗಳಲ್ಲಿಯ ಪರಿಭಾಷೆಯ ಸ್ವರೂಪ :

ಸಾಮಾನ್ಯವಾಗಿ ಹೋರಾಟದ ಪರಿಭಾಷೆ ಆಯಾ ಸಾಮಾಜಿಕ ಸಂಘಟನೆಯ ಮೇಲೆ ನಿರ್ಧರಿತವಾಗಿರುತ್ತದೆ. ಕಾರ್ಮಿಕ ಹೋರಾಟದ ಹಾಡುಗಳಲ್ಲಿ ಬಳಕೆಯಾಗಿರುವ ಪರಿಭಾಷೆ ದೇಶೀಯ ನೆಲೆಯದ್ದಾಗಿದೆ. ಸಾಮಾಜಿಕ ಪರಿಸರದಲ್ಲಿನ ಭಾಷೆಯನ್ನು ಗಮನಿಸಿ ಹಾಡುಗಳನ್ನು ರಚನೆ ಮಾಡಲಾಗಿದೆ. ಸಂಸ್ಕೃತದ ಪ್ರಭಾವ ತುಂಬಾ ಕಡಿಮೆ ಎಂದೇ ಹೇಳಬಹುದು. ಕೆಲವು ಹಾಡುಗಳಲ್ಲಿ ಹಿಂದಿಯ ಪದಗಳನ್ನು ಬಳಸಿರುವುದು ಕಂಡು ಬರುತ್ತದೆ. ಕರ್ನಾಟಕದಲ್ಲಿ ಕಳೆದ ನಾಲ್ಕೈದು ದಶಕಗಳಿಂದ ಹಲವು ಹೋರಾಟಗಳು, ಪ್ರಗತಿಪರ ಚಳುವಳಿಗಳು ನಡೆದಿವೆ ಮತ್ತು ನಡೆಯುತ್ತಲಿವೆ. ಕರ್ನಾಟಕದ ಜನಸಾಮಾನ್ಯರ ಬದುಕಿನ ಪ್ರಗತಿಪರ ಬದಲಾವಣೆಗಾಗಿ ತಂತಮ್ಮ ಕೊಡುಗೆಗಳನ್ನು ನೀಡುತ್ತ ಬಂದಿವೆ. ಈ ಕಾರ್ಮಿಕ ಹೋರಾಟದ ಹಾಡುಗಳು, ಕ್ರಾಂತಿ ಗೀತೆಗಳು, ಘೋಷಣೆಗಳು ಸ್ಫೂರ್ತಿತುಂಬುತ್ತ ಅವುಗಳ ಜೊತೆ ಜೊತೆಯಲ್ಲಿಯೇ ಈ ಹೋರಾಟದ ಹಾಡುಗಳು, ಹಲವು ಆಡಿಯೋ ಕ್ಯಾಸೆಟ್‌ಗಳು ಜನಪ್ರೀಯವಾಗಿವೆ. ಒಟ್ಟಿನಲ್ಲಿ ಈ ಹಾಡುಗಳು ಕರ್ನಾಟಕದ ಕಾರ್ಮಿಕರ ಸಂಘರ್ಷಮಯ ಸಾಂಸ್ಕೃತಿಕ ಬದುಕಿನ ಆಸ್ತಿಯಾಗಿ ಉಳಿದು ಬೆಳೆದುಕೊಂಡು ಹೋಗುತ್ತಿವೆ. ಕಾರ್ಮಿಕ ಹೋರಾಟದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪ್ರಮುಖವಾದ ಹಾಡುಗಳನ್ನು ಗಮನಿಸಿರಿ.

'ಶಾಂತಿ ರಕ್ಷಕರು ನಾವು
ನಾವೆಲ್ಲಾ ಒಂದೇ ನಾವೆಲ್ಲರೂ ಒಂದೇ
ಅನ್ಯಾಯ ದಬ್ಬಾಳಿಕೆಗಳ ಧಿಕ್ಕರಿಸುವವರು
ನಾವ್ ಒಂದೇ..................'

'ಯಾರೂ ಯಾರಿಗೂ ಅನ್ಯರಲ್ಲ ಎಂದೂ ಅನ್ಯರಲ್ಲ
ಯಾರು ಯಾರಿಗೂ ಗುಲಾಮರಲ್ಲ
ಒಡೆಯರು ನಾವು ಗುಲಾಮರು ನೀವು
ಎಂಬ ವ್ಯವಸ್ಥೆಯ ಕೊನೆಗಾಣಿಸು'

'ಇರುವೆಯಂತೆ ಹರಿವ ಸಾಲು ಹುಲಿ ಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗೂ ಧಿಕ್ಕಾರ । ಧಿಕ್ಕಾರ ಧಿಕ್ಕಾರ ।
ಎಂದೆಂದಿಗೂ ಧಿಕ್ಕಾರ ಶ್ರೀಮಂತರ ಸೊಕ್ಕಿಗೆ'

'ಜಾತಿ ಧರ್ಮ ಮಡಿ ಮೈಲಿಗೆಯ ಭೇದ ಭಾವ ಈ ಮಣ್ಣಿಗಿಲ್ಲ
ಬಡವಾ ಬಲ್ಲಿದ ದಲಿತನೆಂಬ ಸ್ಪರ್ಶಾಸ್ಪೃಶ್ಯತೆ ಮಣ್ಣಿಗಿಲ್ಲ'

'ಅಡ್ಡ ಗೋಡೆಯನ್ನು ಒಡೆಯುತ ನಡೆದು
ಶೋಷಣೆ ಬೇರನ್ನು ಕಿತ್ತು ಎಸೆದು
ಸೋದರರೆಲ್ಲರೂ ಒಂದಾಗಿ ಕೂಡುತ
ಸವಿಯನ್ನು ಎಲ್ಲರೂ ಸವಿಯೋಣ ಬನ್ನಿ'

'ಕಂಪ್ಯೂಟರ್ ಬಂತು ಉದ್ಯೋಗ ಹೋಯ್ತು
ಯುಕವರ ಕೊರಳಿಗೆ ಉರುಳಣ್ಣ
ಡೊನೇಷನ್ ಫೀಜು ಕಟ್ಟಲಾಗದೇ
ಮಕ್ಕಳು ಮರಿಗಳು ಜೀತವಣ್ಣ'
'ಕಾಡನು ನುಂಗುವ ಟಾಟಾ ಬಿರ್ಲಾಗಳು
ಜನಗಳ ಜೇಬಿಗೆ ಕತ್ತರಿಯು
ಲೂಟಿಯಾಗುತಿದೆ ಕನ್ನಡ ದೇಶ
ಕಲ್ಲು ಜೋರರ ಹಾವಳಿಯ'

'ವಿಶ್ವಕ್ರಾಂತಿ ಬಾವುಟ, ದಾಸ್ಯ ಹರಿದ ಬಾವುಟ
ರಕ್ತ ಕ್ರಾಂತಿಯಿಂದ ಹುಟ್ಟಿ ಬಂದ ಕೆಂಪು ಬಾವುಟ
ಸುಲಿಗೆ ತಡೆಯಲಿಕ್ಕೆ ಸಮರ ಹೂಡಿದಂಥ ಬಾವುಟ
ಸಮತಾವಾದ ವಿಜಯಕಾಗಿ ಕರೆಕೊಟ್ಟ ಬಾವುಟ
ವಿಶ್ವ ಕಾರ್ಮಿಕರು ಒಂದುಗೂಡಿಸಿದ ಬಾವುಟ
ಜನಕೆ ಕ್ರಾಂತಿ ಕರೆಯನಿತ್ತ ಮೇದಿನದ ಬಾವುಟ
ಜಿಂದಾಬಾದ್ ಜಿಂದಾಬಾದ್ ಇಂಕ್ವಿಲಾಬ್ ಜಿಂದಾಬಾದ್
ಜಿಂದಾಬಾದ್ ಜಿಂದಾಬಾದ್ ಇಂಕ್ವಿಲಾಬ್ ಜಿಂದಾಬಾದ್'

'ಜಾಗತೀಕರಣ ತಡೆಯೋಣ
ಉದಾರೀಕರಣ ಓಡಿಸೋಣ
ಖಾಸಗೀಕರಣವ ನಿಲ್ಲಿಸೋಣ
ಸಾಮ್ರಾಜ್ಯಶಾಹಿಯ ಮೆಟ್ಟೋಣ'

ಕಾರ್ಮಿಕರ ಹೋರಾಟದ ಈ ಹಾಡುಗಳಲ್ಲಿ ದಬ್ಬಾಳಿಕೆ, ಗುಲಾಮರು, ಗುಲಾಮರಲ್ಲ, ಧಿಕ್ಕಾರ, ಅಸಮಾನತೆ, ಶೋಷಣೆ, ಜೀತವಣ್ಣ, ಲೂಟಿ ಮೊದಲಾದ ಪದಗಳು ಕಾರ್ಮಿಕ ಹೋರಾಟ ಅಥವಾ ಚಳುವಳಿಯ ಪಾರಿಭಾಷಿಕ ಪದಗಳಾಗಿ ರೂಪಗೊಂಡಿವೆ. ಕಾರ್ಮಿಕ ವರ್ಗವು ಶತಶತಮಾನಗಳಿಂದ ಅನುಭವಿಸುತ್ತಾ ಬಂದಿರುವ ಶೋಷಣೆಯ, ಅಸಮಾನತೆಯ, ನೋವಿನ ತುಡಿತವನ್ನು ಇವು ಧ್ವನಿಸುತ್ತವೆ. ಇಂತಹ ವಿಶಿಷ್ಟವಾದ ಪದಗಳೇ ಈ ಚಳುವಳಿಯ ಪಾರಿಭಾಷಿಕ ಪದಗಳಾಗಿ ಪರಿಣಮಿಸುತ್ತವೆ. ಇಂತಹ ಪಾರಿಭಾಷಿಕ ಪದಗಳು ಹೋರಾಟದ ಸಂದರ್ಭ, ಸನ್ನಿವೇಶಕ್ಕನುಗುಣವಾಗಿ ಕಾರ್ಮಿಕ ಹೋರಟಗಳಲ್ಲಿ ಬಳಕೆಯಾಗುತ್ತವೆ.

ಕಾರ್ಮಿಕ ಹೋರಾಟ ಅಥವಾ ಚಳುವಳಿಯಲ್ಲಿಯ ಘೋಷಣೆಗಳಲ್ಲಿ ಪರಿಭಾಷೆ :

ಕಾರ್ಮಿಕ ಹೋರಾಟದ ಪರಿಭಾಷೆ ಎಂದರೆ ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆ ಎಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ ಆಯಾ ಹೋರಾಟದ ವಸ್ತು, ಸಂದರ್ಭ, ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನೆಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಶೈಕ್ಷಣಿಕವಾಗಿ ಹೋರಾಟದಲ್ಲಿನ ಸಂದರ್ಭದ ಭಾಷೆ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ಯಾವುದೇ ಹೋರಾಟಕ್ಕೆ ಘೋಷಣೆಗಳು ಹೋರಾಟದ ಜೀವಾಳವಾಗಿರುತ್ತವೆ. ಈ ಘೋಷಣೆಗಳು ಹೋರಾಟದ ಮೂಲ ಧೋರಣೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಘೋಷಣೆಗಳು ಹೋರಾಟಕ್ಕೆ ತಕ್ಕಂತೆ ನಿರ್ಮಾಣವಾಗಿರುತ್ತವೆ. ಹೋರಾಟಕ್ಕೆ ತಕ್ಕಂತೆ ಘೋಷಣೆಗಳು ಕೂಡ ಪಾರಿಭಾಷಿಕ ಪದಗಳಿಂದ ಕೂಡಿರುತ್ತವೆ. ಘೋಷಣೆಗಳನ್ನು ಹೋರಾಟದ ಹಾಡುಗಳಲ್ಲಿಯ, ಕ್ರಾಂತಿಗೀತೆಗಳಲ್ಲಿಯ ಕೆಲವೊಂದು ಸಾಲುಗಳನ್ನು ಎತ್ತಿಕೊಂಡು ಎಣೆಯುವುದು ಒಂದು ರೀತಿಯಾದರೆ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿ ಮಾಡುವುದು ಇನ್ನೊಂದು ರೀತಿಯಾಗಿರುತ್ತದೆ. ನಿದರ್ಶನಕ್ಕೆ ಕೆಲವೊಂದು ಘೋಷಣೆಗಳನ್ನು ದಾಖಲಿಸಲಾಗಿದೆ.

೧) ವಿಶ್ವ ಕಾರ್ಮಿಕರೇ ಒಂದಾಗಿ...........ಒಂದಾಗಿ.

೨) ಸಾಮ್ರಾಜ್ಯಶಾಹಿ ಕೋಮುವಾದ ಅಳಿಯಲಿ...........ಅಳಿಯಲಿ.

೩) ರೈತ ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ...........ಚಿರಾಯುವಾಗಲಿ.

೪) ೧೨೧ನೇ ವರ್ಷದ ವಿಶ್ವಕಾರ್ಮಿಕ ದಿನಾಚರಣೆಗೆ...........ಜಯವಾಗಲಿ.

೫) ಎ.ಐ.ಟಿ.ಯು.ಸಿ. ಜಿಂದಾಬಾದ್...........ಇಂಕ್ವಿಲಾಬ್ ಜಿಂದಾಬಾದ್.

೬) ಬೇಕೇ ಬೇಕು...........ಬೋನಸ್ ಬೇಕು.

೭) ಬೇಕೇ ಬೇಕು...........ವಸತಿ ಯೋಜನೆ ಬೇಕು.

೮) ಮಾಲಿಕರ ದರ್ಪ, ದೌರ್ಜನ್ಯಕ್ಕೆ ಧಿಕ್ಕಾರ...........ಧಿಕ್ಕಾರ.

೯) ಬಂಡವಾಳಶಾಹಿಯ ದಬ್ಬಾಳಿಕೆಯ ವಿರುದ್ಧ ಧಿಕ್ಕಾರ...........ಧಿಕ್ಕಾರ.

೧೦) ಬೇಕೇ ಬೇಕು...........ನ್ಯಾಯ ಬೇಕು.

೧೧) ಬಂಡವಾಳಶಾಹಿಗಳು ಕೊಡುವ ಹಿಂಸೆಗೆ ಧಿಕ್ಕಾರ...........ಧಿಕ್ಕಾರ.

೧೨) ದರಕಾರ ಇಲ್ಲದ ಈ ಭ್ರಷ್ಟ ಸರಕಾರಕ್ಕೆ ಕ್ರಾಂತಿಗಳ ದಂಗೆಯಿಂದ ಬಡಿದೆಬ್ಬಿಸೋಣ ಬನ್ನಿ ಸಹೋದರರೆ ಬನ್ನಿ.

೧೩) ನಾವು ಹೆದರಿ ಹೋಗುವ ಹೇಡಿಗಳಲ್ಲ, ಬರುವ ಅಡ್ಡಿಗಳ ಮೇಲೆ ಸವಾರಿ ಮಾಡುವ ಕ್ರಾಂತಿಕಾರಿಗಳು, ನಾವು ಚಿಗುರುತ್ತೇವೆ. ಬನ್ನಿ ಸಹೋದರರೆ ಕ್ರಾಂತಿಯ ಪ್ರಪಂಚವನ್ನೆ ಕಟ್ಟೋಣ.

೧೪) ನಿಲ್ಲಲು ನೆಲೆಯಿಲ್ಲ ತಿನ್ನಲು ಕೂಳಿಲ್ಲ ನಿಮಗೇಕೆ ಬೇಕು ಈ ಕಷ್ಟದ ಸಂಕೋಲೆಗಳು ? ನಿಮ್ಮನ್ನು ಕಾಡುವ ಆ ಸಂಕೋಲೆಗಳನ್ನು ಬಿಟ್ಟು ಹೊರಬನ್ನಿ, ಕ್ರಾಂತಿಯೆಬ್ಬಿಸಲು ಇಡೀ ಪ್ರಪಂಚವೇ ನಮ್ಮ ಮುಂದೆ ಮಾನವೀಯತೆ, ಮನುಷ್ಯತ್ವ ಸಾಮಾಜಿಕ ಬದುಕಿನ ಹಕ್ಕಿಗಾಗಿ ನಮ್ಮ ಹೋರಾಟ .... ಹೋರಾಟ.

೧೫) ಬಂಡವಾಳಶಾಹಿಗಳ ಹಣದ ಗುಂಗಿನಲ್ಲಿ ಕಾಲಕಳೆಯುವ ಮಂತ್ರಿಗಳನ್ನು ಗಡಿಪಾರು ಮಾಡಿ .... ಗಡಿಪಾರು ಮಾಡಿ.

೧೬) ವಿಶ್ವಕಾರ್ಮಿಕರೆ ಒಂದಾಗಿ .... ಒಂದಾಗಿ

ಕಾರ್ಮಿಕರಶಕ್ತಿ ಕಟ್ಟಲು ಮುಂದಾಗಿ .... ಮುಂದಾಗಿ.

೧೭) ಭಗತ್‌ಸಿಂಗ್ ಕಂಡ ಕನಸಿನ ಸಾಮ್ರಾಜ್ಯಕ್ಕಾಗಿ ನಮ್ಮ ಹೋರಾಟ .... ನಮ್ಮ ಹೋರಾಟ.

೧೮) ಬೇಕೇ ಬೇಕು............ಸಾರಿಗೆ ವ್ಯವಸ್ಥೆ ಬೇಕು.

೧೯) ಬೇಕೇ ಬೇಕು............ಸಮವಸ್ತ್ರಬೇಕು.

೨೦) ಜ್ಞಾನಕ್ಕಾಗಿ ಅಬ್ಯಾಸ............ಬದುಕಿಗಾಗಿ ಹೋರಾಟ.

೨೧) ಪ್ರಾಣ ಬೇಕಾದರು ಬಿಟ್ಟೇವು ಈ ಭ್ರಷ್ಟರನ್ನು ಮಾತ್ರ ಸಹಿಸದೆ ಬಿಡೆವು .... ಬಿಡೆವು.

೨೨) ಹಿಂದು, ಮುಸ್ಲಿಂ, ಕ್ರೈಸ್ತರ ಐಕ್ಯತೆ ಚಿರಾಯುವಾಗಲಿ...........ಚಿರಾಯುವಾಗಲಿ.

೨೩) ನಮ್ಮಲ್ಲಿಲ್ಲ ಹಿಂದು ರಕ್ತ, ನಮ್ಮಲ್ಲಿಲ್ಲ ಮುಸ್ಲಿಂ ರಕ್ತ, ನಮ್ಮಲ್ಲಿಲ್ಲ ಕ್ರೈಸ್ತ ರಕ್ತ, ನಮ್ಮಲ್ಲಿದೆ ಒಂದೇ ರಕ್ತ ಅದುವೇ ಮಾನವ ಕೆಂಪು ರಕ್ತ.

೨೪) ಇಂದಿನ ಅನ್ಯಾಯ ಸಹಿಸುವವರಲ್ಲ...........ನಾಳಿನ ಸಾವಿಗೆ ಹೆದುರುವವರಲ್ಲ.

೨೫) ನೋವಿನ ಸಂಕೋಲೆಗಳನ್ನು ಇಟ್ಟುಕೊಂಡು ಹೇಡಿಗಳಂತೆ ಬದುಕುವುದಕ್ಕಿಂದ, ಕ್ರಾಂತಿಕಾರಿಗಳಾಗಿ ವೀರನಂತೆ ಘರ್ಜಿಸಿ, ರಣರಂಗದಲ್ಲಿ ಮರಣವನ್ನಪ್ಪೋಣ...........ಬನ್ನಿ ಸಹೋದರರೆ ಬನ್ನಿ.

೨೬) ಸ್ವದೇಶಿ ಜನರ ಮೇಲೆ ಇಲ್ಲದ ಪ್ರೀತಿ...........ಅಮೇರಿಕಾದ ಹಂದಿಗಳ ಮೇಲೇಕೆ.

೨೭) ರಕ್ತವನ್ನು ಚಲ್ಲುತ್ತೇವೆ...........ನ್ಯಾಯವನ್ನು ಗೆಲ್ಲುತ್ತೇವೆ.

೨೮) ಕಾರ್ಮಿಕರನ್ನು ಗಲಾಮರಂತೆ ದುಡಿಸಿಕೊಳ್ಳುತ್ತಿರುವ ಭ್ರಷ್ಟರಿಗೆ ದಿಕ್ಕಾರ .... ದಿಕ್ಕಾರ.

೨೯) ಸ್ವಾತಂತ್ರ್ಯ ಸಂಗ್ರಾಮದ ತ್ಯಾಗ ಬಲಿದಾನಗಳನ್ನು ಮರೆತು ಪರಂಗಿಗಳಿಗೆ ರತ್ನಗಂಬಳಿ ಹಾಸುವುದರ ಮೂಲಕ ಕಾರ್ಮಿಕರನ್ನು ಮಾರುತ್ತಿರುವ ಕೇಂದ್ರ ಸರ್ಕಾರಗಳಿಗೆ ದಿಕ್ಕಾರ .... ದಿಕ್ಕಾರ.

೩೦) ಸಾಮ್ರಾಜ್ಯಶಾಹಿಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು ಕಾರ್ಮಿಕರ ಹಿತಾಸಕ್ತಿಗಳನ್ನು ನಿರ್ಲಕ್ಷ ಮಾಡುತ್ತಿರುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೩೧) ೩೭ ಕೋಟಿ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದು ಹೊತ್ತಿನ ಅನ್ನವನ್ನು ನೀಡದಂತೆ ಕಾರ್ಮಿಕರ ಶ್ರಮವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವ ಸರ್ಕಾರಗಳಿಗೆ ಧಿಕ್ಕಾರ .... ಧಿಕ್ಕಾರ.

೩೨) ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಿಗೆ ನೀಡಿ ಚಿಲ್ಲರೆ ಕಾರ್ಮಿಕರನ್ನು ಕೊಲೆ ಮಾಡಿದ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೩೩) ಕಾರ್ಮಿಕರಿಗೆ ಸರಿಯಾದ ಕೂಲಿಯನ್ನು ನೀಡದೆ ಅಧಿಕ ವೇಳೆ ದುಡಿಸಿಕೊಳ್ಳುವ ಬಂಡವಾಳಶಾಹಿಗಳಿಗೆ ಧಿಕ್ಕಾರ .... ಧಿಕ್ಕಾರ.

೩೪) ಬಹುರಾಷ್ಟ್ರೀಯ ಮತ್ತು ವಿದೇಶಿ ಬಂಡವಾಳದ ಆಕ್ರಮಣಕ್ಕೆ ಬಲಿಯಾಗುತ್ತಿರುವ ಕಾರ್ಮಿಕರ ಮೇಲಿನ ದೌರ್ಜನ್ಯಗಳು ನಿಲ್ಲಲಿ...........ನಿಲ್ಲಲಿ.

೩೫) ನೇರ ವಿದೇಶಿ ಬಂಡವಾಳ ಮಾರುಕಟ್ಟೆಯ ನೆಪದಲ್ಲಿ ಕಾರ್ಮಿಕರನ್ನು ಬಲಿಪಶುಗಳನ್ನಾಗಿ ಮಾಡುತ್ತಿರುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೩೬) ಎಲ್ಲಾ ಕಾರ್ಮಿಕರ ಕಲ್ಯಾಣ ಮತ್ತು ಕ್ಷೇಮವನ್ನು ಖಾತ್ರಿಗೊಳಿಸದೆ ಇರುವ ಕೇಂದ್ರ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೩೭) ಎಲ್ಲಾ ಕಾರ್ಮಿಕರಿಗೂ ಮುಷ್ಕರ ನಡೆಸುವ ಹಕ್ಕುಗಳು ಜಾರಿಗೆ ಆಗಲಿ .... ಜಾರಿಗೆ ಆಗಲಿ.

೩೮) ಕಾರ್ಮಿಕರಿಗೆ ತುಟ್ಟಿಭತ್ಯೆ ನೀಡದಿರುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೩೯) ಕಾರ್ಮಿಕರಿಗೆ ಕನಿಷ್ಟ ವೇತನದ ಕಾಯಿದೆಯಲ್ಲಿ ವೇತನ ನೀಡದಿರುವ ಕಂಪನಿಗಳಿಗೆ ಧಿಕ್ಕಾರ .... ಧಿಕ್ಕಾರ.

೪೦) ಕಾರ್ಮಿಕರಿಗೆ ನಿವೃತ್ತಿ ವೇತನ ನೀಡದಿರುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೪೧) ಬೀಡಿ ಕಾರ್ಮಿಕರಿಗೆ ಲಾಗ್ ಪುಸ್ತಕ, ಗುರುತಿನ ಚೀಟಿಯನ್ನು ನೀಡಲೇಬೇಕು.......... ನೀಡಲೇಬೇಕು.

೪೨) ಕಾರ್ಮಿಕರ ಜೀವನವನ್ನು ಉತ್ತಮಗೊಳಿಸದೆ ಕಾರ್ಮಿಕರ ಕಣ್ಣಲ್ಲಿ ನೀರು ತರಿಸುತ್ತಿರುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೪೩) ಎಲ್ಲಾ ಬಡಕಾರ್ಮಿಕರಿಗೆ ಮನೆಗಳನ್ನು ನೀಡದೆ ವಸತಿಯನ್ನು ಕೊಡುವುದರಲ್ಲಿ ವಿಫಲವಾದ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೪೪) ಕಾರ್ಮಿಕ ಮಕ್ಕಳಿಗೆ ಉಚಿತ ಶಿಕ್ಷಣ ಸಿಗಲೇಬೇಕು .... ಸಿಗಲೇಬೇಕು.

೪೫) ಕಾರ್ಮಿಕರಿಗೆ ಮನೆ ಕಟ್ಟಲು ಧನ ನೀಡಲೇಬೇಕು .... ನೀಡಲೇಬೇಕು.

೪೬) ಕಾರ್ಮಿಕರಿಗೆ ವೈದ್ಯಕೀಯ ವ್ಯವಸ್ಥೆ ನೀಡಲು ಲಂಚ ಕೇಳುವ ಅಧಿಕಾರಿಗಳಿಗೆ ಧಿಕ್ಕಾರ .... ಧಿಕ್ಕಾರ.

೪೭) ಕಾರ್ಮಿಕರು ಕೆಲಸದ ವೇಳೆ ಮರಣಹೊಂದಿದರೆ ಸಹಾಯಧನ ಮತ್ತು ಅವರ ಮಕ್ಕಳಿಗೆ ಉದ್ಯೋಗ ಕೊಡಲೇಬೇಕು .... ಕೊಡಲೇಬೇಕು.

೪೮) ಕಾರ್ಮಿಕರು ಅಪಘಾತದಿಂದ ನರಳುತ್ತಿದ್ದರು ಖರ್ಚನ್ನು ನೀಡದಿರುವ ಕಾರ್ಮಿಕ ಮಂತ್ರಿಗೆ ಧಿಕ್ಕಾರ .... ಧಿಕ್ಕಾರ.

೪೯) ಕಾರ್ಮಿಕರಿಂದ ೮ ಗಂಟೆಗಿಂತ ಹೆಚ್ಚು ದುಡಿಸಿಕೊಂಡು ಸರಿಯಾಗಿ ಕೂಲಿಕೊಡದೆ ಕೊಲೆ ಮಾಡುತ್ತಿರುವ ಆಡಳಿತ ವರ್ಗಕ್ಕೆ ಧಿಕ್ಕಾರ .... ಧಿಕ್ಕಾರ.

೫೦) ಎಲ್ಲಾ ಕಾರ್ಮಿಕರಿಗೂ ನಿರ್ವಹಣೆ ಭತ್ಯ, ಪ್ರಯಾಣಭತ್ಯೆ ನೀಡಲೇಬೇಕು .... ನೀಡಲೇಬೇಕು.

೫೧) ಕಾರ್ಖಾನೆಗಳನ್ನು ಮುಚ್ಚಿ ಕಾರ್ಮಿಕರ ಬದುಕನ್ನು ನಾಶ ಮಾಡುತ್ತಿರುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೫೨) ಕಾರ್ಮಿಕರಿಗೆ ಕನಿಷ್ಟ ಕೂಲಿ ಕೂಡದ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೫೩) ಕಾರ್ಮಿಕರಿಗೆ ಪಿಂಚಣಿ ಮತ್ತು ಭವಿಷ್ಯ ನಿಧಿಗಾಗಿ ಗೋಳಾಡುವಂತೆ ಮಾಡಿದ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೫೪) ಕಾರ್ಮಿಕರಿಗೆ ಕಾರ್ಮಿಕ ವಿಮೆಗಳನ್ನು ನೀಡಲೇಬೇಕು .... ನೀಡಲೇಬೇಕು.

೫೫) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆಯನ್ನು ನೀಡಲೇಬೇಕು .... ನೀಡಲೇಬೇಕು.

೫೬) ಕಾರ್ಮಿಕರ ಮೇಲೆ ಅವೈಜ್ಞಾನಿಕ ನೀತಿಯನ್ನು ಜಾರಿಗೆ ಮಾಡುವ ಸರಕಾರಕ್ಕೆ ಧಿಕ್ಕಾರ .... ಧಿಕ್ಕಾರ.

೫೭) ಜನಶ್ರೀ ವಿಮಾ ಯೋಜನೆಯನ್ನು ಜಾರಿಗೊಳಿಸಬೇಕು...........ಜಾರಿಗೊಳಿಸಬೇಕು.

೫೮) ವೇತನವನ್ನು ಪ್ರತಿ ತಿಂಗಳು ಮೊದಲ ವಾರದಲ್ಲಿ ನೀಡಬೇಕು...........ನೀಡಬೇಕು.

೫೯) ದಿನಗೂಲಿ ನೌಕರರನ್ನು ಖಾಯಂಗೊಳಿಸಬೇಕು...........ಖಾಯಂಗೊಳಿಸಬೇಕು.

೬೦) ಅರ್ಹ ನೌಕರರಿಗೆ ಬಡ್ತಿಯನ್ನು ನೀಡಬೇಕು...........ನೀಡಬೇಕು.

೬೧) ಕೇಂದ್ರ ಸರಕಾರದ ಜನವಿರೋಧಿ ನೀತಿಗೆ ಧಿಕ್ಕಾರ...........ಧಿಕ್ಕಾರ.

೬೨) ಬೆಲೆ ಹೆಚ್ಚಳ ಮಾಡಿದ ಕೇಂದ್ರ ಸರಕಾರಕ್ಕೆ ಧಿಕ್ಕಾರ...........ಧಿಕ್ಕಾರ.

೬೩) ಗಣಿಗಾರಿಕೆ ರಾಷ್ಟ್ರೀಕರಣವಾಗಬೇಕು............ರಾಷ್ಟ್ರೀಕರಣವಾಗಬೇಕು.

ಅಡಿಟಿಪ್ಪಣಿಗಳು

೧೦) ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು. ಎನ್.ಪಿ. ಶಂಕರನಾರಾಯಣರಾವ್ ನವ ಕರ್ನಾಟಕ ಪಬ್ಲಿಕೇಷನ್ ಪ್ರವೇಟ್ ಲಿಮಿಟೆಡ್, ಪುಟ ಸಂಖ್ಯೆ-೨೨೨.

೧೧) ಅದೇ – ಪುಟ ಸಂಖ್ಯೆ ೨೩೬.

ಅಧ್ಯಾಯ–೬

ವಿದ್ಯಾರ್ಥಿ ಹೋರಾಟದ ಪರಿಭಾಷೆಯ ಸ್ವರೂಪ

ಅಧ್ಯಾಯ-೬

ವಿದ್ಯಾರ್ಥಿ ಹೋರಾಟದ ಪರಿಭಾಷೆಯ ಸ್ವರೂಪ

ನಮ್ಮ ಭಾರತ ದೇಶವು ಶತಶತಮಾನಗಳಿಂದ ವಸಾಹತುಶಾಹಿ, ಗುಲಾಮಗಿರಿ ಮತ್ತು ವಿದೇಶಿ ಸಾಮ್ರಾಜ್ಯಶಾಹಿ ಹಾಗೂ ದೇಶೀಯ ಪಾಳೆಗಾರರ ಶೋಷಣೆಯಿಂದ ನರಳುತ್ತಾ ಬಂದಿದೆ. ಇದು ದೇಶದ ಬಹುಸಂಖ್ಯಾತ ಜನರನ್ನು ಸಾಮೂಹಿಕ ಬಡತನ, ಹಸಿವು, ಸಂಕಷ್ಟಗಳು, ಸಾಮೂಹಿಕ ಪದ್ಧತಿಗಳು ಅವರ ಅತೀ ನಿಕೃಷ್ಟವಾದ ಬದುಕನ್ನು ನಡೆಸುವಂತೆ ಮಾಡಿತು. ಸಾಮೂಹಿಕ ಅನಿಷ್ಠಗಳ ವಿರುದ್ಧ ಬೆಳೆಯುತ್ತಿದ್ದ ಪ್ರಜ್ಞೆಯು ಸುಧಾರಣಾ ಚಳುವಳಿ, ಬ್ರಿಟೀಷ್ ವಸಾಹಾತು ಆಡಳಿತ ಮತ್ತು ಪಾಳೆಗಾರಿಕೆಯನ್ನು ಕೊನೆಗಾಣಿಸಲು ಜನರು ನಡೆಸಿದ ಹೋರಾಟವು ಸ್ವಾತಂತ್ರ್ಯಕ್ಕಾಗಿ ಒಂದು ಐತಿಹಾಸಿಕ ರಾಷ್ಟ್ರೀಯ ಚಳುವಳಿಗೆ ನಾಂದಿ ಹಾಡಿತು. ಇದರಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ಭಾಗಹಿಸಿದ್ದರು. ವಿದ್ಯಾರ್ಥಿಗಳ ವಿಭಿನ್ನ ರಾಜಕೀಯ ಬದ್ದತೆಗಳ ಹೊರತಾಗಿಯೂ ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳಡಿಯಲ್ಲಿ ವಿದ್ಯಾರ್ಥಿ ಸಂಘಟನೆಗಳು ಶುರುವಾದವು. ಜಾಗತಿ ಮಟ್ಟದಲ್ಲಿ ರಷ್ಯಾದ ಸಂಯುಕ್ತ ಸಂಸ್ಥಾನಗಳಲ್ಲಿನ ತೀವ್ರ ಪ್ರಗತಿ, ತದ್ವಿರುದ್ಧವಾಗಿ ಕೈಗಾರಿಕೆಯಲ್ಲಿ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆಳುತ್ತಿದ್ದ ಬಿಕ್ಕಟ್ಟು ವಿದ್ಯಾರ್ಥಿಗಳನ್ನು ಎಡಪಂತೀಯರ ಚಿಂತನೆಯತ್ತ ಆಕರ್ಷಿಸಿತು.

ಪ್ರಗತಿಪರ ವಿದ್ಯಾರ್ಥಿ ಚಳುವಳಿಯಲ್ಲಿ ಮೂಲಭೂತವಾಗಿದ್ದ ಎರಡು ವಿಷಯಗಳೆಂದರೆ ಮೊದನೆಯದು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ವಿದ್ಯಾರ್ಥಿಗಳು ಸಂಘಟಿತರಾಗುವುದು ಮತ್ತು ವಿದ್ಯಾರ್ಥಿಗಳ ಅವಶ್ಯಕತೆಗಾಗಿ ಹಾಗೂ ದೇಶದ ಬಹುಸಂಖ್ಯಾತ ಜನತೆಯ ಅಗತ್ಯವನ್ನು ಪೂರೈಸುವ ಶಿಕ್ಷಣವ್ಯವಸ್ಥೆಗೆ ಹೋರಾಡುವುದು. ಎರಡನೆಯದು ಇತರೆ ಜನವಲಯಗಳ ವಿಶಾಲ ಹೋರಾಟದಲ್ಲಿ ಭಾಗವಹಿಸುವುದು.

ವಿದ್ಯಾರ್ಥಿ ಚಳುವಳಿಗಳು **'ಅಭ್ಯಾಸ ಮತ್ತು ಹೋರಾಟದ'**ದ ಘೋಷಣೆಯನ್ನು ಯಶಸ್ವಿಯಾಗಿ ಎತ್ತಿ ಹಿಡಿದಿವೆ. ಮತ್ತು ಸಾಮಾಜಿಕ ಕ್ರಾಂತಿಯ ನಾಯಕತ್ವವನ್ನು ವಿದ್ಯಾರ್ಥಿ ಸಮುದಾಯದ ತಲೆಗೆ ಕಟ್ಟುವ **'ವಿದ್ಯಾರ್ಥಿ ಶಕ್ತಿ'** ಸಿದ್ಧಾಂತವನ್ನು ಪರಿಣಾಮಕಾರಿಯಾಗಿ ಎದುರಿಸಿದೆ. ಪ್ರಜಾಪ್ರಭುತ್ವದ ಹಕ್ಕುಗಳ ಮೇಲಿನ ದಾಳಿಗಳ ವಿರುದ್ಧ ದೃಢವಾಗಿ ನಿಂತು ತುರ್ತು ಪರಿಸ್ಥಿತಿಯ ಹೇರಿಕೆಯ ವಿರುದ್ಧ ಹೋರಾಡಿವೆ. 'ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ' ಎಂಬ ಘೋಷಣೆಯಿಂದ ದೇಶದ ವಿದ್ಯಾರ್ಥಿ ಸಮುದಾಯದಲ್ಲಿ ಒಂದು ಪ್ರಬಲವಾದ ಆಕರ್ಷಣೆಯನ್ನು ಗಳಿಸಿಕೊಂಡು ಅವರನ್ನು ಚಳುವಳಿ ಮತ್ತು ಸಂಘಟನೆಯ ತೆಕ್ಕೆಗೆ ತರುತ್ತಿವೆ.

ವಿದ್ಯಾರ್ಥಿ ಸಂಘ-ಸಂಸ್ಥೆಗಳು ಬಳಸುವ ಪರಿಭಾಷೆ :

S.F.I	- ಭಾರತ ವಿದ್ಯಾರ್ಥಿ ಫೆಡರೇಶನ್.
A.B.V.P.	- ಅಖಿಲ ಭಾರತ ವಿದ್ಯಾರ್ಥಿ ಪರಿಷತ್.
A.I.S.F.	- ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ.
A.I.D.S.O.	- ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ.
D.Y.F.I.	- ಭಾರತ ಪ್ರಜಾಸತ್ತಾತ್ಮಕ ಒಕ್ಕೂಟ.
A.I.T.U.C.	- ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೇಸ್.
C.P.M., C.P.I., C.P.I.M.L., A.I.K.S.	- ಎಡಪಂತೀಯ ಸಂಘಟನೆಗಳು.

ಈ ವಿದ್ಯಾರ್ಥಿ ಸಮುದಾಯದ ಹಿಂದಿನ ತಲೆಮಾರುಗಳು ಬ್ರಿಟೀಷರಿಂದ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ನಡೆಸಿದ ಹೋರಾಟದಲ್ಲಿ ತಮ್ಮದೇ ಆದ ಪಾತ್ರವನ್ನುವಹಿಸಿವೆ. ಅವರ ಮಾದರಿಯನ್ನು ಅನುಸರಿಸಿಕೊಂಡು, ಅನಿಷ್ಟ ಪರಂಪರೆಗಳಾದ ಅವಲಂಬನೆ, ಹಿಂದುಳಿದಿರುವಿಕೆ ಮತ್ತು ಬಡತನ ನಿರ್ಮೂಲನೆಗೊಳಿಸುವ ನಿಟ್ಟಿನಲ್ಲಿ, ನಮ್ಮ ಜನತೆಗೆ ನೈಜ ಸ್ವಾತಂತ್ರ್ಯ, ಸಮೃದ್ಧ ಮತ್ತು ಪ್ರಗತಿಶೀಲ ಭವಿಷ್ಯವನ್ನು ನಿರ್ಮಿಸಲು ಅಡಿಗಲ್ಲು ಹಾಕುವ ಹೋರಾಟದಲ್ಲಿ ಕ್ರಿಯಾಶೀಲವಾದ ಆಸಕ್ತಿಯನ್ನು ವಹಿಸಿದವು. ಈ ವಿದ್ಯಾರ್ಥಿ ಸಮುದಾಯಗಳು ಅಥವಾ ಸಂಘಟನೆಗಳು ಸಮಾಜದ ಪ್ರಮುಖ ಅವಿಭಾಜ್ಯ ಅಂಗಗಳಾಗಿವೆ. ವಿದ್ಯಾರ್ಥಿಗಳ ಬದುಕು ಮತ್ತು ಶಿಕ್ಷಣದ ಉನ್ನತಿ, ಪ್ರಗತಿಯು ಈ ಸಮಾಜದ ಸರ್ವತೋಮುಖ ಅಭಿವೃದ್ಧಿಯ ಪಥದತ್ತ ಈ ಸಂಘಟನೆಯ ಹೋರಾಟಗಳು ನಡೆಯುತ್ತವೆ. ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳು ಹಾಗೂ ಅದರ ಸರ್ವತೋಮುಖವಾದ ಅಮೂಲಾಗ್ರ ಬೆಳವಣಿಗೆ ಮತ್ತು ಪ್ರಗತಿಯೆಡೆಗೆ ಈ ಸಂಘಟನೆಗಳು ಶ್ರಮಿಸುತ್ತವೆ.

ವಿದ್ಯಾರ್ಥಿ ಚಳುವಳಿಗಳು ಕಾರ್ಮಿಕರ, ರೈತರ, ದಲಿತರ, ಮಹಿಳೆಯರ ಇತರೆ ಪ್ರಗತಿಪರ ಶಕ್ತಿಗಳ ವಿಶಾಲ ಪ್ರಜಾಸತ್ತಾತ್ಮಕ ಚಳುವಳಿಯ ಅವಿಭಾಜ್ಯ ಅಂಗಗಳಾಗಿವೆ. ನ್ಯಾಯ ಮತ್ತು ಸಮಾನತೆಯ ಒಂದು ಸಾಮಾಜಿಕ ವ್ಯವಸ್ಥೆಗಾಗಿ ಈ. ಚಳುವಳಿಗಳು, ಸಂಘಟನೆಗಳು ಹೋರಾಟ ನಡೆಸುತ್ತವೆ. ಕಾರ್ಮಿಕರ, ರೈತರ, ದಲಿತರ, ಮಹಿಳೆಯರ ಮತ್ತು ಮಧ್ಯಮ ವರ್ಗಗಳ ಪ್ರಜಾಸತ್ತಾತ್ಮಕ ಚಳುವಳಿಯ ಸಹಕಾರ ಮತ್ತು ಬೆಂಬಲವನ್ನು ಪಡೆಯುವ ರೀತಿಯಲ್ಲೇ ಈ ಎಲ್ಲಾ ಚಳುವಳಿಗಳಿಗೆ ಮತ್ತು ಅವರ ಬೇಡಿಕೆಗಳಿಗೆ ಸಹಕಾರ ಮತ್ತು ಬೆಂಬಲವನ್ನು ನೀಡುತ್ತವೆ. ದಲಿತರ, ಕಾರ್ಮಿಕರ, ರೈತರ, ಮಹಿಳೆಯರ ಮತ್ತು ಬುಡಕಟ್ಟು ಜನರ ಮೇಲೆ ನಡೆಯುವ ಎಲ್ಲಾ ಶೋಷಣೆ ಹಾಗೂ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತುತ್ತವೆ.

ವಿದ್ಯಾರ್ಥಿ ಸಮುದಾಯದ ಏಳಿಗೆ ಮತ್ತು ಅಭಿವೃದ್ಧಿಗಾಗಿ ಒಂದು ಬಲಿಷ್ಠ ವಿದ್ಯಾರ್ಥಿ ಸಂಘಟನೆಯನ್ನು ಕಟ್ಟುವುದಕ್ಕಾಗಿ ದೇಶದ ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಮತ್ತು ಇತರೆ ಶಿಕ್ಷಣ

ಸಂಸ್ಥೆಗಳಲ್ಲಿರುವ ಹಾಗೂ ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳನ್ನು ಸಂಘಟಿಸುವ ಕಾರ್ಯವನ್ನು ಈ ವಿದ್ಯಾರ್ಥಿ ಚಳುವಳಿಗಳು, ಹೋರಾಟಗಳು ಮಾಡುತ್ತಿವೆ. ಎಲ್ಲರಿಗೂ ಶಿಕ್ಷಣ ಮತ್ತು ಉದ್ಯೋಗವನ್ನು ಖಾತ್ರಿಗೊಳಿಸುವ ಹಾಗೂ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿಯನ್ನು ಈ ಚಳುವಳಿಗಳು ಹೊಂದಿವೆ.

ಧರ್ಮ, ಜಾತಿ, ಲಿಂಗ, ಭಾಷೆ ಮತ್ತು ಜನಾಂಗ ಇವುಗಳನ್ನು ಮೀರಿ ಎಲ್ಲರ ಸಮಾನತೆಗಾಗಿ ವಿದ್ಯಾರ್ಥಿ ಸಮುದಾಯಗಳು ಹೋರಾಡುತ್ತವೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಎಲ್ಲಾ ರೀತಿಯ ಲಿಂಗ ತಾರತಮ್ಯ ಮತ್ತು ದಬ್ಬಾಳಿಕೆಯನ್ನು ಈ ವಿದ್ಯಾರ್ಥಿ ಸಂಘಟನೆಗಳು ವಿರೋಧಿಸುತ್ತವೆ. ಪರಂಪರಾಗತವಾದ ಅನಿಷ್ಟ ಪದ್ಧತಿಗಳಾದ ಸತಿಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆಯ ಅಸ್ತಿತ್ವವು ದೇಶದಲ್ಲಿ ಮಹಿಳೆಯರ ಶೋಚನೀಯ ಸ್ಥಿತಿಯನ್ನು ಬಿಂಬಿಸುತ್ತವೆ. ಪುರುಷ ಪ್ರಧಾನ ಮೌಲ್ಯಗಳು ಮತ್ತು ಆಚರಣೆಗಳ ವಿರುದ್ಧ ಹೋರಾಡಲು ಇವು ಬದ್ಧವಾಗಿರುತ್ತವೆ. ಎಲ್ಲಾ ವಿಧವಾದ ಜಾತಿ ತಾರತಮ್ಯ ಮತ್ತು ದೌರ್ಜನ್ಯಗಳನ್ನು ವಿರೋಧಿಸುತ್ತವೆ. ಭಾಷೆ, ಗಡಿ, ಪ್ರದೇಶ ಅಥವಾ ಜನಾಂಗೀಯ ಆಧಾರಿತವಾದ ಎಲ್ಲಾ ರೀತಿಯ ಪ್ರತ್ಯೇಕತವಾದ ಮತ್ತು ಅಂಧಾಭಿಮಾನಗಳನ್ನು ಪ್ರಬಲವಾಗಿ ವಿರೋಧಿಸುತ್ತವೆ. ಸಾಮ್ರಾಜ್ಯಶಾಹಿ ದುರಾಕ್ರಮಣದ ವಿರುದ್ಧ ಸ್ವಾತಂತ್ರ್ಯ, ವಿಮೋಚನೆ, ಭೌಗೋಳಿಕ ಸಮಗ್ರತೆ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕಾಗಿ ಜಗತ್ತಿನಾದ್ಯಾಂತ ಹೋರಾಡುವ ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ತಮ್ಮ ಸೌಹಾರ್ದತೆಯನ್ನು ವಿಸ್ತರಿಸುತ್ತವೆ. ಈ ಚಳುವಳಿಗಳು ಜನತೆಗೆ ಒಂದು ಸಮೃದ್ಧ ಜೀವನವನ್ನು ನಿರ್ಮಿಸಲು ಮತ್ತು ಈ ಗುರಿಗಳನ್ನು ಈಡೇರಿಸಿಕೊಳ್ಳಲು ಒಂದಾಗುವಂತೆ ಕೈಜೋಡಿಸಬೇಕೆಂದು ತಮ್ಮ ರಾಷ್ಟ್ರ ಪ್ರಜಾಸತ್ತಾತ್ಮಕ ಮುನ್ನಡೆಯಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳು, ಯುವಜನತೆ, ಮಹಿಳೆಯರು, ಮಧ್ಯಮವರ್ಗದವರು, ರೈತರು, ಕಾರ್ಮಿಕರು ಮತ್ತು ಇತರೆ ಎಲ್ಲಾ ಶಕ್ತಿಗಳಿಗೆ ಕರೆ ನೀಡುತ್ತವೆ.

ವಿದ್ಯಾರ್ಥಿ ಚಳುವಳಿಗಳ ಉದ್ದೇಶಗಳು ಅಥವಾ ಗುರಿಗಳು :

೧) ಧರ್ಮ, ಜಾತಿ, ಭಾಷೆ, ಜನಾಂಗ, ಪ್ರದೇಶ ಅಥವಾ ಲಿಂಗಾಧಾರಿತವಾಗಿ ಪ್ರಕಟವಾಗುವ ಪ್ರತಿಯೊಂದು ದಬ್ಬಾಳಿಕೆ ವಿರುದ್ಧ ಹೋರಾಡುವುದು ಮತ್ತು ಕೋಮುಸೌಹಾರ್ದತೆ, ಎಲ್ಲರ ಸಮಾನತೆಗಾಗಿ ಕೆಲಸ ಮಾಡುವುದು.

೨) ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದಕ್ಕಾಗಿ ಹೋರಾಡುತ್ತಿರುವ ಜಗತ್ತಿನ ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ಸಮಾನತೆ, ಸ್ವಾತಂತ್ರ್ಯ, ಭಾತೃತ್ವ, ಸೌಹಾರ್ದತೆಯನ್ನು ವಿಸ್ತರಿಸುವುದು.

೩) ವಿದ್ಯಾರ್ಥಿ ಸಮುದಾಯದ ಏಳಿಗೆ ಮತ್ತು ಅಭಿವೃದ್ಧಿಗಾಗಿ ಒಂದು ಬಲಿಷ್ಠ ಮತ್ತು ವ್ಯವಸ್ಥಿತ ಜಾಲವುಳ್ಳ ವಿದ್ಯಾರ್ಥಿ ಚಳುವಳಿಯನ್ನು ಕಟ್ಟಲು ದೇಶದ ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಮತ್ತು ಇತರೇ ಶಿಕ್ಷಣ ಸಂಸ್ಥೆಗಳಲ್ಲಿರುವ ಹಾಗೂ ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳನ್ನು ಸಂಘಟಿಸುವುದು.

೪) ಜನತೆಗೆ ಒಂದು ಸಮೃದ್ಧ ಮತ್ತು ಪ್ರಗತಿಪರ ಭವಿಷ್ಯವನ್ನು ಖಾತ್ರಿಗೊಳಿಸಲು ವಸಾಹತುಶಾಹಿಯ ಅನಿಷ್ಟ ಪದ್ಧತಿಗಳನ್ನು ಕೊನೆಗಾಣಿಸುವ ಹಾಗೂ ದೇಶದಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಸಮಾಜವನ್ನು ಕಟ್ಟುವ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.

೫) ಕಾರ್ಮಿಕರ, ರೈತರ ಮತ್ತು ಇತರೆ ಪ್ರಗತಿಪರ ಶಕ್ತಿಗಳ ವಿಶಾಲ ಪ್ರಜಾಸತ್ತಾತ್ಮಕ ಚಳುವಳಿಯ ಹೋರಾಟಗಳಲ್ಲಿ ವಿದ್ಯಾರ್ಥಿ ಸಮುದಾಯವನ್ನು ಸಂಘಟಿಸುವುದು ಹಾಗೂ ತಕ್ಷಣದ ಬೇಡಿಕೆಗಳು ಮತ್ತು ಉದ್ದೇಶಗಳ ಈಡೇರಿಕೆಗಾಗಿ ಅವರ ಬೆಂಬಲ ಮತ್ತು ಸಹಕಾರವನ್ನು ಕೋರುವುದು ಸರ್ವರಿಗೂ ಶಿಕ್ಷಣ ಮತ್ತು ಉದ್ಯೋಗವನ್ನು ಖಾತ್ರಿಗೊಳಿಸುವ ಒಂದು ಪ್ರಜಾಸತ್ತಾತ್ಮಕ, ವೈಜ್ಞಾನಿಕ ಮತ್ತು ಪ್ರಗತಿಪರ ಶೈಕ್ಷಣಿಕ ವ್ಯವಸ್ಥೆಯನ್ನು ಸ್ಥಾಪಿಸುವುದು.

೬) ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಅಭಿವೃದ್ಧಿಪಡಿಸುವುದು, ವಿದ್ಯಾರ್ಥಿ ಸಂಘ ಸಂಸ್ಥೆಗಳನ್ನು ರಚನೆ ಮಾಡುವುದು ಮತ್ತು ಸಭೆ ಸಮಾರಂಭಗಳನ್ನು ಸೇರುವುದು. ಎಲ್ಲಾ ಶಿಕ್ಷಣ ಸಂಸ್ಥೆಗಳ ಆಡಳಿತದಲ್ಲಿ ಮತ್ತು ವಿದ್ಯಾರ್ಥಿ ಜೀವನದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಮಿತಿಗಳಲ್ಲಿ ಭಾಗವಹಿಸುವುದು.

೭) ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ಕೆಲಸ ಮಾಡಲು ಪಣತೊಟ್ಟಿರುವ ಇತರೆ ಎಲ್ಲಾ ವಿದ್ಯಾರ್ಥಿ ಸಂಘಟನೆಗಳೊಡನೆ ಭ್ರಾತೃತ್ವದ ಮತ್ತು ಸ್ನೇಹಪರ ಸಂಬಂಧಗಳನ್ನು ಬೆಳೆಸುವುದು ಹಾಗೂ ನಿರ್ಧಿಷ್ಟ ವಿಷಯ ಮತ್ತು ಬೇಡಿಕೆಗಳ ಆಧಾರದಲ್ಲಿ ಜಂಟಿ ಕಾರ್ಯಾಚರಣೆಯನ್ನು ಕೈಗೊಳ್ಳುವುದು.

ವಿದ್ಯಾರ್ಥಿ ಹೋರಾಟದ ಪರಿಭಾಷೆ ಸೂಚಕ ಪದಗಳು :

ಉದ್ಯೋಗ	ಪ್ರಜಾಪ್ರಭುತ್ವ	ಅನಿರ್ಧಿಷ್ಟ ಸತ್ಯಾಗ್ರಹ
ವಸತಿ ನಿಲಯ	ಹಕ್ಕು	ಪತ್ರ
ವೃತ್ತಿಪರ ಕೋರ್ಸು	ದಬ್ಬಾಳಿಕೆ	ಬೇಡಿಕೆ ಈಡೇರಿಕೆ
ಬಜೆಟ್	ದೌರ್ಜನ್ಯ	ಶಾಲಾಕಾಲೇಜು ಬಂದ್
ಭ್ರಷ್ಟತೆ	ಕೋಮುಸೌಹಾರ್ಧತೆ	ಗುಲಾಮಗಿರಿ
ಪರಂಗಿಯವರು	ಸಮಾನತೆ	ಬಹಿಷ್ಕಾರ
ಗುಲಾಮಗಿರಿ	ರಾಷ್ಟ್ರೀಯತೆ	ಭೂತದಹನ
ವ್ಯಾಪಾರೀಕರಣ	ಸ್ವಾತಂತ್ರ್ಯ	ರ್‍ಯಾಲಿ
ಖಾಸಗೀಕರಣ	ಜಿಂದಾಬಾದ್ ಜಿಂದಾಬಾದ್	ಕರಪತ್ರ
ಬಂಡವಾಳೀಕರಣ	ಧಿಕ್ಕಾರ	ಶುಲ್ಕ ಏರಿಕೆ
ಜಾಗತೀಕರಣ	ಅನ್ಯಾಯ	ಸರಣಿ ಸತ್ಯಾಗ್ರಹ
ಲೈಂಗಿಕ ಕಿರುಕುಳ	ಸಮಾಜವಾದ	ಡೊನೇಷನ್ ಹಾವಳಿ
ಉಚಿತ ಬಸ್‌ಪಾಸ್	ಡೌನ್‌ಡೌನ್	ವಿದ್ಯಾರ್ಥಿ ಸಂಘಗಳ ಚುನಾವಣೆ
ಬಿಸಿಯೂಟ	ಮೀಸಲಾತಿ	ಕರ್ನಾಟಕ ಬಂದ್
ಉಚಿತ ಶಿಕ್ಷಣ	ಮಾನವ ಸರಪಳಿ	ಭಾರತ್ ಬಂದ್
ಸಂಘಟನೆ	ವಿದ್ಯಾರ್ಥಿ ಆಂದೋಲನ	ಪಂಜಿನ ಮೆರವಣಿಗೆ

ಕಾವಲುಗಾರ	ಕೊಳ್ಳೆ	ಜಂಟಿ ಹೋರಾಟ ಸಮಿತಿ
ನ್ಯಾಯ	ಲೂಟಿ	ಉಚಿತ ಶಿಕ್ಷಣ
ಸಮಾಜವಾದಿ	ಮುಷ್ಕರ	ಮಹಿಳಾ ಕಾಲೇಜು
ಸೌಹಾರ್ದತೆ	ಕೋಮುವಾದೀಕರಣ	ವಸತಿ ನಿಲಯ
ವಾಕ್ ಸ್ವಾತಂತ್ರ್ಯ	ನಿರುದ್ಯೋಗ ಭತ್ಯೆ	
ಸಂಯುಕ್ತ ಹೋರಾಟ	ಲಿಂಗ ತಾರತಮ್ಯ	

ವಿದ್ಯಾರ್ಥಿ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ಪಾರಿಭಾಷಿಕ ಪದಗಳನ್ನು ವಿವರಿಸಲಾಗಿದೆ :

೧) ಶಿಕ್ಷಣದ ವ್ಯಾಪಾರೀಕರಣ :

ವಿದ್ಯಾರ್ಥಿ ಚಳುವಳಿಗಳಲ್ಲಿ ವಿಶೇಷವಾಗಿ ಬಳಕೆಯಾಗುವ ಪದಪ್ರಯೋಗವಾಗಿದೆ. ಇಂದು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಧಿಕ ಶುಲ್ಕ ಮತ್ತು ಡೊನೇಷನ್ ಹಾವಳಿಯ ವಿರುದ್ಧ ಈ ಪದ ಬಳಕೆಯಾಗಿದೆ. ಈ ಅಧಿಕ ಶುಲ್ಕ ಮತ್ತು ಡೊನೇಷನ್‌ನ್ನು ಕುರಿತು ಶಿಕ್ಷಣದ ವ್ಯಾಪಾರೀಕರಣ ಎಂದು ಬಳಸಿರುವುದರ ಉದ್ದೇಶವೆಂದರೆ ವ್ಯಾಪಾರ-ವಹಿವಾಟುಗಳಲ್ಲಿ ವ್ಯಾಪಾರೀಕರಣ ಬಳಕೆಯಾದರೆ ಇದೇ ಮಾದರಿಯಲ್ಲಿ ಶಿಕ್ಷಣ ವಲಯದಲ್ಲಿ ಕೂಡ ಅಧಿಕ ಶುಲ್ಕ ಮತ್ತು ಡೊನೇಷನ್ ಹಾವಳಿಯು ವ್ಯಾಪಾರದಂತೆ ನಡೆಯುತ್ತಿರುವುದರಿಂದ ಶಿಕ್ಷಣದ ವ್ಯಾಪಾರೀಕರಣ ಎಂಬ ಪದ ವಿದ್ಯಾರ್ಥಿ ಹೋರಾಟಗಳಲ್ಲಿ ಬಳಕೆಮಾಡಲಾಗುತ್ತದೆ.

೨) ಶಾಲಾ-ಕಾಲೇಜು ಬಂದ್ :

ವಿದ್ಯಾರ್ಥಿ ಸಮುದಾಯದ ಏಳಿಗೆ ಮತ್ತು ಅಭಿವೃದ್ಧಿಗಾಗಿ ಒಂದು ಬಲಿಷ್ಠ ಮತ್ತು ವ್ಯವಸ್ಥಿತ ಜಾಲವುಳ್ಳ ಚಳುವಳಿಯನ್ನು ಕಟ್ಟಲು ದೇಶದ ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಮತ್ತು ಇತರೇ ಶಿಕ್ಷಣ ಸಂಸ್ಥೆಗಳಲ್ಲಿರುವ ಹಾಗೂ ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳನ್ನು ಸಂಘಟಿಸುವುದು ವಿದ್ಯಾರ್ಥಿ ಚಳುವಳಿಯ ಮೂಲ ಉದ್ದೇಶವಾಗಿದೆ. ವಿದ್ಯಾರ್ಥಿ ಸಮುದಾಯಕ್ಕೆ ಅನ್ಯಾಯವಾದಾಗ, ವಿದ್ಯಾರ್ಥಿಗಳಿಂದ ಅಧಿಕ ಶುಲ್ಕ, ಡೊನೇಷನ್ ವಸೂಲಿ ಪ್ರಾರಂಭವಾದಾಗ ಇದರ ವಿರುದ್ಧ ವಿದ್ಯಾರ್ಥಿ ಸಂಘ ಸಂಸ್ಥೆಗಳು ಸಂಘಟನೆಯಾಗಿ ಶಾಲಾ-ಕಾಲೇಜುಗಳನ್ನು ಬಂದ್ ಮಾಡಲಾಗುತ್ತದೆ. ಈ ವಿದ್ಯಾರ್ಥಿ ಸಂಘಟನೆಗಳು ಧರಣಿ ನಿರತರಾದಾಗ ಶಾಲಾ-ಕಾಲೇಜು ಬಂದ್ ಪದ ಬಳಕೆಯಾಗುತ್ತದೆ. ಕರಪತ್ರಗಳನ್ನು ಹಂಚಲಾಗುತ್ತದೆ. ಇದೇ ಮಾದರಿಯಲ್ಲಿ ಕರ್ನಾಟಕ ಬಂದ್, ಭಾರತ್ ಬಂದ್ ಆಚರಿಸಲಾಗುತ್ತದೆ.

೩) ವಿದ್ಯಾರ್ಥಿ ಆಂದೋಲನ :

ವಿದ್ಯಾರ್ಥಿ ಸಮುದಾಯದ ಏಳಿಗೆ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತ ವಿದ್ಯಾರ್ಥಿಗಳ ಬೇಡಿಕೆಗಳ ಈಡೇರಿಕೆಗಾಗಿ ವಿವಿಧ ವಿದ್ಯಾರ್ಥಿ ಸಂಘಟನೆಗಳು ಮಾಡುವ ಹೋರಾಟವನ್ನು ವಿದ್ಯಾರ್ಥಿ ಆಂದೋಲನವೆಂದು ಕರೆಯುವರು. ಈ ವಿದ್ಯಾರ್ಥಿ ಆಂದೋಲನವು ತಮ್ಮ ಬೇಡಿಕೆಗಳನ್ನು ಕರಪತ್ರಗಳ

ಮೂಲಕ ಸಾಮಾಜಿಕರಿಗೆ ಜಾಗೃತಿಯನ್ನುಂಟು ಮಾಡುತ್ತದೆ. ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಿರ್ದಿಷ್ಟವಾದ ಕಾಲವಧಿಯಲ್ಲಿ ಮಾಡುವ ಆಂದೋಲನವಾಗಿರುತ್ತದೆ. ಗೋಡೆ ಬರಹದ ಮೂಲಕ ಸಾಮಾಜಿಕರಿಗೆ ಜಾಗೃತಿಯನ್ನುಂಟು ಮಾಡುವುದರ ಜೊತೆಗೆ ವಿದ್ಯಾರ್ಥಿ ಸಮುದಾಯದ ಬೇಡಿಕೆಗಳನ್ನು ತಿಳಿಸುತ್ತದೆ. ವಿದ್ಯಾರ್ಥಿ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿ ಆಂದೋಲನಗಳು ನಡೆಯುತ್ತವೆ.

ವಿದ್ಯಾರ್ಥಿ ಹೋರಾಟದ ಹಾಡುಗಳಲ್ಲಿಯ ಪರಿಭಾಷೆಯ ಸ್ವರೂಪ :

ಸಾಮಾನ್ಯವಾಗಿ ಹೋರಾಟದ ಪರಿಭಾಷೆ ಆಯಾ ವಿದ್ಯಾರ್ಥಿ ಸಂಘಟನೆಯ ಮೇಲೆ ನಿರ್ಧರಿತವಾಗಿರುತ್ತದೆ. ವಿದ್ಯಾರ್ಥಿ ಹೋರಾಟದ ಹಾಡುಗಳಲ್ಲಿ ಬಳಕೆಯಾಗಿರುವ ಪರಿಭಾಷೆ ದೇಶೀಯ ನೆಲೆಯದಾಗಿರುತ್ತದೆ. ಆಯಾ ಸಾಮಾಜಿಕ ಪರಿಸರದಲ್ಲಿನ ಭಾಷೆಯನ್ನು ಗಮನಿಸಿ ಹಾಡುಗಳನ್ನು ರಚನೆ ಮಾಡಲಾಗಿದೆ. ಕಳೆದ ನಾಲ್ಕೈದು ದಶಕಗಳಿಂದ ಕರ್ನಾಟಕ ಜನಸಾಮಾನ್ಯರ ಬದುಕಿನ ಪ್ರಗತಿಪರ ಬದಲಾವಣೆಗಾಗಿ, ವಿದ್ಯಾರ್ಥಿ ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗಾಗಿ, ಸಮಸ್ಯೆಗಳ ನಿವಾರಣೆಗಾಗಿ ತಮ್ಮ ಕೊಡುಗೆಗಳನ್ನು ನೀಡುತ್ತ ಬಂದಿವೆ. ಈ ವಿದ್ಯಾರ್ಥಿ ಹೋರಾಟಗಳಿಗೆ ಕ್ರಾಂತಿಗೀತೆಗಳು, ಹೋರಾಟದ ಹಾಡುಗಳು, ಘೋಷಣೆಗಳು ಸ್ಫೂರ್ತಿ ತುಂಬುತ್ತ ಬಂದಿವೆ. ವಿದ್ಯಾರ್ಥಿ ಹೋರಾಟದ ಪರಿಭಾಷೆ ಎಂದರೆ ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆಯಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ ವಿದ್ಯಾರ್ಥಿ ಸಂಘಟನೆಯ ಹೋರಾಟದ ವಸ್ತು ಮತ್ತು ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಶೈಕ್ಷಣಿಕವಾಗಿ ಹೋರಾಟದಲ್ಲಿನ ಸಂದರ್ಭದ ಭಾಷೆ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ಒಟ್ಟಿನಲ್ಲಿ ಈ ವಿದ್ಯಾರ್ಥಿ ಹೋರಾಟದ ಹಾಡುಗಳು ಕರ್ನಾಟಕದ ಜನಸಾಮಾನ್ಯರ ಬದುಕಿನ ಪ್ರಗತಿಗೆ ಹಾಗೂ ವಿದ್ಯಾರ್ಥಿ ಸಮುದಾಯದ ಶೈಕ್ಷಣಿಕ ಪ್ರಗತಿ, ಸಮಸ್ಯೆಗಳ ನಿವಾರಣೆಗೆ ಸಂಘರ್ಷಮಯ ಸಾಂಸ್ಕೃತಿಕ ಬದುಕಿನ ಆಸ್ತಿಯಾಗಿ ಉಳಿದು ಬೆಳೆದುಕೊಂಡು ಬಂದಿವೆ ಎಂಬುದು ವಾಸ್ತವಿಕ. ಈ ವಿದ್ಯಾರ್ಥಿ ಹೋರಾಟದಲ್ಲಿ ಕ್ರಾಂತಿಗೀತೆಗಳನ್ನು ಹೋರಾಟದ ಹಾಡುಗಳನ್ನು ಸಂದರ್ಭಕ್ಕೆ ತಕ್ಕಂತೆ ಸೃಷ್ಟಿಸಿ ಹಾಡುಲಾಗುತ್ತದೆ. ಹಲವು ಆಡಿಯೋ ಕ್ಯಾಸೆಟ್‌ಗಳು ಜನಪ್ರೀಯತೆಗಳಿಸಿವೆ. ವಿದ್ಯಾರ್ಥಿ ಹೋರಾಟದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವೊಂದು ಹೋರಾಟದ ಹಾಡುಗಳನ್ನು ಗಮನಿಸಿರಿ.

'ಸ್ವಾತಂತ್ರ್ಯ ಸ್ವಾತಂತ್ರ್ಯ ಬೇಕು ನಮಗೆ ಸ್ವಾತಂತ್ರ್ಯ
ಸ್ವಾತಂತ್ರ್ಯ ಸ್ವಾತಂತ್ರ್ಯ ಬೇಕು ನಮಗೆ ಸ್ವಾತಂತ್ರ್ಯ'

'ಕೂಲಿಗೆ ಬೇಕು ಸ್ವಾತಂತ್ರ್ಯ
ಕಾರ್ಮಿಕರಿಗೆ ಬೇಕು ಸ್ವಾತಂತ್ರ್ಯ
ರೈತರಿಗೆ ಬೇಕು ಸ್ವಾತಂತ್ರ್ಯ
ಯುವರಿಕಗೆ ಬೇಕು ಸ್ವಾತಂತ್ರ್ಯ
ನಿರದ್ಯೋಗಿಗೆ ಬೇಕು ಸ್ವಾತಂತ್ರ್ಯ
ಮಹಿಳೆಗೆ ಬೇಕು ಸ್ವಾತಂತ್ರ್ಯ'

'ವಿದ್ಯಾರ್ಥಿಗಳ ಗೋಳ ಕೇಳಬ್ಯಾಡ ಇನ್ನಾ
ಎಲ್ಲಿ ನೋಡಿದರೂ ಬರಿ ಡೊನೇಷನ್
ಬಡವರಿಗೆ ಶಿಕ್ಷಣ ಯಾಂಗ್ ಕೊಡತಾನ'

'ಜಾಗತೀಕರಣವ ತಡೆಯೋಣ
ಉದಾರೀಕರಣವ ಓಡಿಸೋಣ
ಖಾಸಗೀಕರಣವ ನಿಲ್ಲಿಸೋಣ
ಸಾಮ್ರಾಜ್ಯಶಾಹಿಯ ಮೆಟ್ಟೋಣ'

'ಭಾರತಾಂಬೆಯ ಸ್ವಾಭಿಮಾನಿ ಮಕ್ಕಳೇ ಏಳಿರಿ ಎದ್ದೇಳಿರಿ ಏಳಿ ಹೇಳಿ
ಇಂಕ್ವಿಲಾಬ್ ಜಿಂದಾಬಾದ್ ಇಂಕ್ವಿಲಾಬ್ ಜಿಂದಾಬಾದ್'

'ಮೇಲು ಕೀಳೆಂಬುದ ಕೀಳೋಣ
ಜಾತಿ ಭೇದ ನೀತಿ ಅಳಿಸೋಣ
ಸಮಾಜವಾದದತ್ತ ನುಗ್ಗೋಣ
ಸಮತಾ ಸಮಾಜವ ಕಟ್ಟೋಣ'

'ಸ್ವಾತಂತ್ರ್ಯ ಎಂದರೆ ಕೇವಲ
ಯಜಮಾನರ ಹಕ್ಕಲ್ಲ
ಇದು ಎಳೆಯ ಚಿಗುರುಗಳ
ಕ್ರಾಂತಿಯ ಕವಲೊಡಿಯುವಿಕೆ !'

'ಮೊಳಗಲಿ ಮೊಳಗಲಿ ಕ್ರಾಂತಿಗೀತೆ ಮೊಳಗಲಿ
ಕಳಚಲಿ ಕಳಚಲಿ ಕೋಮು ಗಲಭೆ ಕಳಚಲಿ !'

'ಯಾವ ಮೂಲೆಯಲ್ಲಾಗಲೀ
ಯಾವ ಬಡವನಿಗಾಗಲೀ
ಯಾವ ಮೋಸವಾಗಲಿ
ಯಾವ ಅನ್ಯಾಯವಾಗಲಿ
ಇದರ ವಿರುದ್ಧ ದನಿ ಎತ್ತು ದನಿ ಎತ್ತು
ಆಗ ನೀನು ನಿಜವಾದ ವಿದ್ಯಾರ್ಥಿ'

ಈ ವಿದ್ಯಾರ್ಥಿ ಹೋರಾಟದ ಹಾಡುಗಳಲ್ಲಿಯ ಸ್ವಾತಂತ್ರ್ಯ, ಡೊನೇಷನ್, ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಸಾಮ್ರಾಜ್ಯಶಾಹಿ, ಸಮಾಜವಾದ, ಹಕ್ಕು, ಕೋಮುಗಲಭೆ, ಅನ್ಯಾಯ ಮುಂತಾದ ಪದಗಳು ವಿದ್ಯಾರ್ಥಿ ಹೋರಾಟ ಅಥವಾ ಚಳುವಳಿಯ ಪಾರಿಭಾಷಿಕ ಪದಗಳಾಗಿ ರೂಪಗೊಂಡಿವೆ. ಜನಸಾಮಾನ್ಯರ, ವಿದ್ಯಾರ್ಥಿ ಸಮುದಾಯದ ಬದುಕಿನಲ್ಲಾದ ಅನ್ಯಾಯ, ಶೋಷಣೆ, ಅಸಮಾನತೆ ಮುಂತಾದ ನೋವಿನ ತುಡಿತನವನ್ನು ಇವು ಧ್ವನಿಸುತ್ತವೆ. ಇಂತಹ ವಿಶಿಷ್ಟವಾದ ಪದಗಳೇ ಈ ಚಳುವಳಿಯಲ್ಲಿ ಸಾಂದರ್ಭಿಕವಾಗಿ ಸೃಷ್ಟಿಯಾಗುತ್ತವೆ. ಇವೇ ವಿದ್ಯಾರ್ಥಿ ಚಳುವಳಿಯ ಪಾರಿಭಾಷಿಕ ಪದಗಳಾಗಿ ಪರಿಣಮಿಸುತ್ತವೆ. ಇಂತಹ ಪಾರಿಭಾಷಿಕ ಪದಗಳು ಹೋರಾಟದ ಸಂದರ್ಭ ಸನ್ನಿವೇಶಕ್ಕನುಗುಣವಾಗಿ ವಿದ್ಯಾರ್ಥಿ ಹೋರಾಟಗಳಲ್ಲಿ ಬಳಕೆಯಾಗುತ್ತವೆ.

ವಿದ್ಯಾರ್ಥಿ ಹೋರಾಟ ಅಥವಾ ಚಳುವಳಿಯಲ್ಲಿಯ ಘೋಷಣೆಗಳಲ್ಲಿ ಪರಿಭಾಷೆ :

ವಿದ್ಯಾರ್ಥಿ ಹೋರಾಟದ ಪರಿಭಾಷೆ ಎಂದರೆ, ಇನ್ನೊಂದು ಅರ್ಥದಲ್ಲಿ ಸಾಂದರ್ಭಿಕ ಭಾಷೆಯಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸಂದರ್ಭಕ್ಕೆ ಆಯಾ ಹೋರಾಟದ ವಸ್ತು, ಸಂದರ್ಭ, ಹೋರಾಟದ ಸ್ವರೂಪ ಇವುಗಳನ್ನಾಧರಿಸಿ ಪರಿಭಾಷೆಗಳು ಬಳಕೆಯಾಗುತ್ತವೆ. ಈ ಹಿನ್ನಲೆಯಿಂದ ಹೋರಾಟದ ಪರಿಭಾಷೆ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಅಷ್ಟೇ ಪ್ರಾಮುಖ್ಯತೆಯನ್ನು ವಿದ್ಯಾರ್ಥಿ ಹೋರಾಟ ಪಡೆದಿದೆ. ಯಾವುದೇ ಹೋರಾಟಕ್ಕೆ ಘೋಷಣೆಗಳು ಹೋರಾಟದ ಜೀವಾಳವಾಗಿರುತ್ತವೆ. ಈ ಘೋಷಣೆಗಳು ಹೋರಾಟದ ಮೂಲ ಧೋರಣೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಘೋಷಣೆಗಳು ಹೋರಾಟಕ್ಕೆ ತಕ್ಕಂತೆ ನಿರ್ಮಾಣವಾಗಿರುತ್ತವೆ. ಹೋರಾಟಕ್ಕೆ ತಕ್ಕಂತೆ ಘೋಷಣೆಗಳು ಕೂಡ ಪಾರಿಭಾಷಿಕ ಪದಗಳಿಂದ ಕೂಡಿರುತ್ತವೆ. ಈ ವಿದ್ಯಾರ್ಥಿ ಹೋರಾಟದಲ್ಲಿ ಘೋಷಣೆಗಳನ್ನು ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿ ಮಾಡಲಾಗುತ್ತದೆ. ನಿದರ್ಶನಕ್ಕೆ ಕೆಲವೊಂದು ಘೋಷಣೆಗಳನ್ನು ದಾಖಲಿಸಲಾಗಿದೆ.

೧) ಗ್ರಾಮೀಣ ಪ್ರದೇಶಗಳಿಂದ ಬರುವ ಎಲ್ಲಾ ವಿದ್ಯಾರ್ಥಿಗಳಿಗೂ ವಸತಿನಿಲಯದ ವ್ಯವಸ್ಥೆಯನ್ನು ಸರಕಾರ ಮಾಡಲೇಬೇಕು .... ಮಾಡಲೇಬೇಕು.

೨) ವಿದ್ಯಾರ್ಥಿಗಳಿಗೆ ಯೋಗ್ಯವಾದ ಪಠ್ಯ ವಿಷಯಗಳನ್ನು ಅಳವಡಿಸದಿರುವ ಸರಕಾರಕ್ಕೆ ದಿಕ್ಕಾರ ...... ದಿಕ್ಕಾರ.

೩) ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ವಸತಿ ವ್ಯವಸ್ಥೆ ಮಾಡದಿರುವ ಅಧಿಕಾರಿಗಳಿಗೆ ದಿಕ್ಕಾರ .... ದಿಕ್ಕಾರ.

೪) ಬಜೆಟ್‌ನಲ್ಲಿ ಶಿಕ್ಷಣಕ್ಕೆ ಸರಿಯಾದ ರೀತಿಯಲ್ಲಿ ಹಣ ಮೀಸಲಿಡದೆ ವಿದ್ಯಾರ್ಥಿಗಳಿಗೆ ಮೋಸ ಮಾಡುತ್ತಿರುವ ಸರಕಾರಕ್ಕೆ ದಿಕ್ಕಾರ .... ದಿಕ್ಕಾರ.

೫) ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡದೆ ಶಿಕ್ಷಣವನ್ನು ವಂಚನೆ ಮಾಡುತ್ತಿರುವ ಭ್ರಷ್ಟ ಶಿಕ್ಷಣದ ನೀತಿಗೆ ದಿಕ್ಕಾರ .... ದಿಕ್ಕಾರ.

೬) ಶಿಕ್ಷಣದಲ್ಲಿ ಪರಂಗಿಯವರ ಗುಲಾಮರಾಗಿರುವ ಭ್ರಷ್ಟ ಶಿಕ್ಷಣ ಮಂತ್ರಿಗಳಿಗೆ ದಿಕ್ಕಾರ .... ದಿಕ್ಕಾರ.

೭) ಬಡ ವಿದ್ಯಾರ್ಥಿಗಳು ಓದಲಾರದಷ್ಟು ಶಿಕ್ಷಣದ ವ್ಯಾಪಾರೀಕರಣವನ್ನು ಮಾಡುತ್ತಿರುವ ಶ್ರೀಮಂತ ಕಾಲೇಜುಗಳ ಆಡಳಿತ ಮಂಡಳಿಗಳಿಗೆ ದಿಕ್ಕಾರ .... ದಿಕ್ಕಾರ.

೮) ಸರಕಾರಿ ಶಾಲಾ ಕಾಲೇಜುಗಳಲ್ಲಿ ಸರಿಯಾದ ಮೂಲಭೂತ ಸೌಕರ್ಯಗಳನ್ನು ನೀಡದೆ ಬಡಮಕ್ಕಳ ಶಿಕ್ಷಣವನ್ನು ವಂಚನೆ ಮಾಡುತ್ತಿರುವ ಸರಕಾರದ ನೀತಿಗೆ ದಿಕ್ಕಾರ .... ದಿಕ್ಕಾರ.

೯) ಎಲ್ಲಾ ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಕಿರುಕುಳ ಸಮಿತಿಗಳನ್ನು ರಚಿಸಲೇಬೇಕು .... ರಚಿಸಲೇಬೇಕು.

೧೦) ಬಡ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್, ಉಚಿತ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತನ್ನಿ .... ಜಾರಿಗೆ ತನ್ನಿ.

೧೧) ಬಡ ವಿದ್ಯಾರ್ಥಿಗಳಿಗೆ ಬಿಸಿಯೂಟದ ಹೆಸರಿನಲ್ಲಿ ರಾಜಕೀಯ ಮಾಡಿ ಸರಿಯಾದ ಆಹಾರವನ್ನು ನೀಡದೆ ವಿದ್ಯಾರ್ಥಿಗಳ ಆರೋಗ್ಯ ಕೆಡಿಸಿ ಚೆಲ್ಲಾಟವಾಡುತ್ತಿರುವ ಅಧಿಕಾರಿಗಳಿಗೆ ದಿಕ್ಕಾರ ...... ದಿಕ್ಕಾರ.

೧೨) ಎಲ್ಲಾ ವಿದ್ಯಾರ್ಥಿನಿಯರಿಗೂ ಉಚಿತ ಶಿಕ್ಷಣ, ಉದ್ಯೋಗದ ಜೊತೆಗೆ ಅರ್ಧದಷ್ಟು ವಿದ್ಯಾರ್ಥಿನಿಯರಿಗೂ ಮೀಸಲು ನೀಡಲೇಬೇಕು .... ನೀಡಲೇಬೇಕು.

೧೩) ಎಲ್ಲಾ ಮಹಿಳಾ ಕಾಲೇಜುಗಳಲ್ಲಿ ಮತ್ತು ವಸತಿ ನಿಲಯಗಳಲ್ಲಿ ಕಡ್ಡಾಯವಾಗಿ ಕಾವಲುಗಾರರನ್ನು ನೇಮಿಸಬೇಕು .... ನೇಮಿಸಬೇಕು.

೧೪) ಶಾಲಾ ಬಿಸಿಯೂಟ ಯೋಜನೆಯನ್ನು ಖಾಸಗೀಕರಣಗೊಳಿಸಿದ ಸರಕಾರಕ್ಕೆ ದಿಕ್ಕಾರ ...... ದಿಕ್ಕಾರ.

೧೫) ಎಲ್ಲಾ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಯಲೇಬೇಕು .... ನಡೆಯಲೇಬೇಕು.

೧೬) ಕೇಂದ್ರ ಮತ್ತು ರಾಜ್ಯ ಸರಕಾರಗಳ ಶಿಕ್ಷಣ ನೀತಿಗೆ ದಿಕ್ಕಾರ .... ದಿಕ್ಕಾರ.

೧೭) ಡೊನೇಷನ್ ತೆಗೆದುಕೊಳ್ಳುವ ಖಾಸಗೀ ಸಂಸ್ಥೆಗಳಿಗೆ ದಿಕ್ಕಾರ .... ದಿಕ್ಕಾರ.

೧೮) ಖಾಲಿಯಿರುವ ಮತ್ತು ಅಗತ್ಯಕ್ಕನುಗುಣವಾಗಿ ಶಿಕ್ಷಕ-ಉಪನ್ಯಾಸಕರನ್ನು ನೇಮಿಸಬೇಕು .... ನೇಮಿಸಬೇಕು.

೧೯) ದೇಶದಲ್ಲಿ ವಿದೇಶಿ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶಕೊಡುತ್ತಿರುವ ಸರಕಾರಕ್ಕೆ ದಿಕ್ಕಾರ .... ದಿಕ್ಕಾರ.

೨೦) ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರಕಾರಗಳಿಗೆ ಅಧಿಕಾರ ನೀಡಲೇಬೇಕು .... ನೀಡಲೇಬೇಕು.

೨೧) ಸಾಮಾಜಿಕ ಬದಲಾವಣೆ .... ವಿದ್ಯಾರ್ಥಿಗಳ ನಮ್ಮ ಹೊಣೆ.

೨೨) ದೇಶೀಯ ಪಾಳೆಗಾರಿಕೆಯ ವಿರುದ್ಧ ವಿದ್ಯಾರ್ಥಿ ಚಳುವಳಿ .... ವಿದ್ಯಾರ್ಥಿ ಚಳುವಳಿ.

೨೩) ಇಂದಿನ ವಿದ್ಯಾರ್ಥಿ ಶಕ್ತಿಯೇ .... ನಾಳಿನ ದೇಶದ ಆಸ್ತಿ.

೨೪) ಸಮಾಜ ಸುಧಾರಣಾ ಚಳುವಳಿ ವಿದ್ಯಾರ್ಥಿಗಳ ಬಳುವಳಿ .... ಬಳುವಳಿ.

೨೫) ವಿದ್ಯಾರ್ಥಿಗಳ ಚಳುವಳಿಯು ವಿದ್ಯಾರ್ಥಿಗಳ ಹಕ್ಕಾಗಲಿ .... ಹಕ್ಕಾಗಲಿ.

೨೬) ವಿದ್ಯಾರ್ಥಿಗಳ ಬಿಕ್ಕಟ್ಟು ದೇಶಕ್ಕೆ ಸಿಗೋಲ್ಲ ತಾಕತ್ತು.

೨೭) ಪ್ರಗತಿಪರ ವಿದ್ಯಾರ್ಥಿ ಚಳುವಳಿಯನ್ನು ಮುರಿಯುತ್ತಿರುವ ಸರ್ಕಾರಗಳಿಗೆ ದಿಕ್ಕಾರ .... ದಿಕ್ಕಾರ.

೨೮) "ಪ್ರಜಾಸತ್ತಾತ್ಮಕ ರಾಷ್ಟ್ರೀಯ ನಿರ್ಮಾಣ" ವಿದ್ಯಾರ್ಥಿ ಹೋರಾಟದ ನಮ್ಮ ಗುರಿ ...... ನಮ್ಮ ಗುರಿ.

೨೯) ವಿದ್ಯಾರ್ಥಿಗಳಿಗೆ "ಕೋಮು ವಿಭಜನೆ" ಶಿಕ್ಷಣ ಬೇಡವೇಬೇಡ .... ಬೇಡವೇಬೇಡ.

೩೦) ಶಿಕ್ಷಣದ ಅಭಿವೃದ್ಧಿ ಪಥ .... ವಿದ್ಯಾರ್ಥಿಗಳ ಬಾಳಿನ ರಥ.

೩೧) ಭ್ರಷ್ಟರ ಜೊತೆ ವಿದ್ಯಾರ್ಥಿಗಳ ರಾಜಿಯು ಎಂದಿಗೂ ಸಲ್ಲದು .... ಎಂದಿಗೂ ಸಲ್ಲದು.

೩೨) ಕಡ್ಡಾಯವಾಗಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಲಿ .... ಜಾರಿಗೆ ಬರಲಿ.

೩೩) "ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ" ನೀಡದಿರುವ ಸರ್ಕಾರಗಳಿಗೆ ದಿಕ್ಕಾರ...... ದಿಕ್ಕಾರ.

೩೪) ಗ್ರಾಮೀಣ ಪ್ರದೇಶಗಳ ಶಿಕ್ಷಣದ ವ್ಯಾಪ್ತಿಗಾಗಿ ನಮ್ಮ ಸಂಯುಕ್ತ ಹೋರಾಟ .... ನಮ್ಮ ಸಂಯುಕ್ತ ಹೋರಾಟ.

೩೫) ವಿರೋಚಿತ ತ್ಯಾಗ ಬಲಿದಾನ ಮಾಡಿದ ಭಗತ್‌ಸಿಂಗ್‌ಗೆ ಜಯವಾಗಲಿ .... ಜಯವಾಗಲಿ.

೩೬) ಉದ್ಯೋಗದ ಅವಕಾಶಗಳನ್ನು ವಂಚನೆ ಮಾಡುತ್ತಿರುವ ಭ್ರಷ್ಟ ಸರ್ಕಾರಕ್ಕೆ ದಿಕ್ಕಾರ .... ದಿಕ್ಕಾರ.

೩೭) "ಮತೋನ್ಮಾದದ" ಶಿಕ್ಷಣ ದೇಶ ಕುಂಠಿತಕ್ಕೆ ಕಾರಣ .... ಕಾರಣ.

೩೮) ವಿದ್ಯಾರ್ಥಿಗಳಿಗೆ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವಂತೆ ಶಿಕ್ಷಣ ಅಳವಡಿಸಬೇಕು .... ಅಳವಡಿಸಬೇಕು.

೩೯) ವಿದ್ಯಾರ್ಥಿಗಳಿಗೆ ನೈಜ ಸ್ವಾತಂತ್ರ್ಯವನ್ನು ನೀಡದ ಶಿಕ್ಷಣ ಸಚಿವರಿಗೆ ದಿಕ್ಕಾರ .... ದಿಕ್ಕಾರ.

೪೦) ನವಉದಾರವಾದಿ ಆರ್ಥಿಕ ನೀತಿಗಳ ಏರಿಕೆಯ ನೀತಿಗೆ ವಿದ್ಯಾರ್ಥಿಗಳ ನಮ್ಮ ವಿರೋಧ ...... ನಮ್ಮ ವಿರೋಧ.

೪೧) ವಿದ್ಯಾರ್ಥಿ ಹಕ್ಕುಗಳ ರಕ್ಷಣೆ ಈ ದೇಶದ ಹೊಣೆ .... ಈ ದೇಶದ ಹೊಣೆ.

೪೨) "ಪ್ರಗತಿಶೀಲ" ಭವಿಷ್ಯ ನಿರ್ಮಿಸಲು ವಿದ್ಯಾರ್ಥಿ ಚಳುವಳಿ ಬೆಂಬಲಿಸಿ .... ಬೆಂಬಲಿಸಿ.

೪೩) ಪ್ರತಿಯೊಬ್ಬ ವಿದ್ಯಾರ್ಥಿಗು "ವಾಕ್ ಸ್ವಾತಂತ್ರ್ಯ" ನೀಡಲೇಬೇಕು .... ನೀಡಲೇಬೇಕು.

೪೪) "ದೀನಾವಸ್ಥೆಯ" ವಿರುದ್ಧ ನಮ್ಮ ಹೋರಾಟ .... ನಮ್ಮ ಹೋರಾಟ.

೪೫) ವಿದ್ಯಾರ್ಥಿಗಳ ಹಿತರಕ್ಷಣೆ ಪ್ರಜಾಪ್ರಭುತ್ವದ ಕರ್ತವ್ಯ .... ಕರ್ತವ್ಯ

೪೬) ಉನ್ನತ ಶಿಕ್ಷಣ ಎಲ್ಲಾ ವಿದ್ಯಾರ್ಥಿಗಳಿಗೆ ಸಿಗಲೇಬೇಕು .... ಸಿಗಲೇಬೇಕು.

೪೭) ವಿದೇಶಿ ವಿ.ವಿ.ಗಳು ಬೇಡವೇಬೇಡ .... ಬೇಡವೇಬೇಡ.

೪೮) ಎಲ್ಲರಿಗೂ ಸ್ವಯಂಪ್ರೇರಿತ ಶಿಕ್ಷಣ ಜಾರಿಗೆ ಬರಲಿ .... ಜಾರಿಗೆ ಬರಲಿ.

೪೯) ಪಿ.ಯು.ಸಿ.ವರೆಗೂ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ನೀಡಲೇಬೇಕು .... ನೀಡಲೇಬೇಕು.

೫೦) ಶಿಕ್ಷಣದ ಕೋಮುವಾದೀಕರಣವನ್ನು ನಿಲ್ಲಿಸಿ .... ನಿಲ್ಲಿಸಿ.

೫೧) ಶಿಕ್ಷಣ ವ್ಯಾಪಾರೀಕರಣಕ್ಕೆ ದಿಕ್ಕಾರ .... ದಿಕ್ಕಾರ.

೫೨) ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲೂ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು ಜಾರಿಗೆ ತನ್ನಿ .... ಜಾರಿಗೆ ತನ್ನಿ

೫೩) ನಿರುದ್ಯೋಗ ವಿದ್ಯಾವಂತರಿಗೆ ನಿರುದ್ಯೋಗ ಭತ್ಯೆ ಕೊಡಲೇಬೇಕು .... ಕೊಡಲೇಬೇಕು.

೫೪) ಶಿಕ್ಷಣದ ಮೇಲೆ ಜಾಗತೀಕರಣದ ಅಧಿಪತ್ಯ ನಿಲ್ಲಲಿ .... ನಿಲ್ಲಲಿ.

೫೫) ಸೌಹಾರ್ಧತೆಯು ಈ ದೇಶದ ಉಸಿರಾಗಲಿ .... ಉಸಿರಾಗಲಿ.

೫೬) ಮಹಿಳೆಯರ ವಿಮೋಚನೆಗಾಗಿ ವಿದ್ಯಾರ್ಥಿನಿಯರ ನಮ್ಮ ಹೋರಾಟ .... ನಮ್ಮ ಹೋರಾಟ.

೫೭) ಲಿಂಗ ತಾರತಮ್ಯಕ್ಕೆ ವಿದ್ಯಾರ್ಥಿಗಳ ನಮ್ಮ ವಿರೋಧ .... ವಿರೋಧ.

೫೮) ಕೋಮುವಾದಿ "ಫ್ಯಾಸಿಸಂ" ಬೇಡವೇಬೇಡ .... ಬೇಡವೇಬೇಡ.

೫೯) ಕೋಮುಸೌಹಾರ್ಧ ವಿದ್ಯಾರ್ಥಿಗಳ ಐಕ್ಯತೆಯಾಗಲಿ .... ಐಕ್ಯತೆಯಾಗಲಿ.

ಅಧ್ಯಾಯ-೭

ವಿವಿಧ ಹೋರಾಟಗಳ ಪರಿಭಾಷೆ : ತೌಲನಿಕ ಪದಪಟ್ಟಿ

ಅಧ್ಯಾಯ-೭

ವಿವಿಧ ಹೋರಾಟಗಳ ಪರಿಭಾಷೆ : ತೌಲನಿಕ ಪದಪಟ್ಟಿ

೧) ದಲಿತ ಚಳುವಳಿಯ ಪಾರಿಭಾಷಿಕ ಪದಗಳು :

ರಾಜಕೀಯವಾಗಿ ರೂಪಗೊಂಡ ಪರಿಭಾಷೆಗಳು :

ದೀನದಲಿತರ ಬಂಧು
ಹಿಂದುಳಿದ ಜನರ ನೇತಾರ ಅಥವಾ ನಾಯಕ
ಹರಿಜನ ಗಿರಿಜನರ ಉದ್ಧಾರಕ
ನವಸಮಾಜ ಪ್ರವರ್ತಕ ಅಥವಾ ನಿರ್ಮಾಪಕ
ಸಮಾಜ ಸುಧಾರಕ
ಮಾನವತಾವಾದಿ
ದಲಿತೋದ್ಧಾರಕ
ದಲಿತರ ಕಣ್ಮಣಿ
ದಲಿತರ ದ್ಯವತಾರೆ.

ದಲಿತ ಅಥವಾ ಹಿಂದುಳಿದ ಜನರ ಏಳ್ಗೆಗಾಗಿ ಬಳಸುವ ಪರಿಭಾಷೆಗಳು :

ಭಾಗ್ಯಜ್ಯೋತಿ
ಆಶ್ರಯ ಯೋಜನೆ
ಕೂಲಿಗಾಗಿ ಕಾಳು
ಮೀಸಲಾತಿ
ಒಳ ಮೀಸಲಾತಿ
ಅಸ್ಪೃಶ್ಯತೆಯ ನಿರ್ಮೂಲನೆ
ಸಮಾಜ ಕಲ್ಯಾಣ ಯೋಜನೆ
ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ನಿಧಿ ಮತ್ತು ಯೋಜನೆ
ಸಾಮಾಜಿಕ ನ್ಯಾಯ
ಸಮಾನತೆ
ಸ್ತ್ರೀ ಸಬಲೀಕರಣ
ಜಾತ್ಯಾತೀತತೆ
ಕೋಮುಸಾಮರಸ್ಯ / ಕೋಮುಸೌಹಾರ್ದ

ದಲಿತ ಹೋರಾಟ ಅಥವಾ ಚಳುವಳಿಯ ಹಿನ್ನೆಲೆಯಲ್ಲಿ ರೂಪಗೊಂಡ ಪರಿಭಾಷೆಗಳು :

ಸಂಘಟನೆ	ಹೋರಾಟ
ಬಂಡ್ವಾಳಶಾಹಿ	ಪುರೋಹಿತಶಾಹಿ
ಸಾಮ್ರಾಜ್ಯಶಾಹಿ	ಗುಲಾಮಗಿರಿ
ದಬ್ಬಾಳಿಕೆ	ದೌರ್ಜನ್ಯ
ಶೋಷಣೆ	ಅಜೆಂಡಾ
ಜಾಗತೀಕರಣ	ಉದಾರೀಕರಣ
ಖಾಸಗೀಕರಣ	ಬಹಿಷ್ಕಾರ
ಬ್ರಾಹ್ಮಣಶಾಹಿ	ವೈಧಿಕಶಾಹಿ

ರ್‍ಯಾಲಿ	ಜಾಥ
ಸಮಾಜವಾದ	ಸಮತಾವಾದ
ಶೋಷಿತವರ್ಗ	ದಲಿತವರ್ಗ
ಶ್ರಮಿಕವರ್ಗ	ಅಸಮಾನತೆ
ದಲಿತ ಚಳುವಳಿ	ದಲಿತ ಬಂಡಾಯ ಚಳುವಳಿ
ಅಧಿಕಾರ ಗದ್ದುಗೆ	ಪಟ್ಟಭದ್ರಹಿತಾಸಕ್ತಿಗಳು
ಹಸಿವು	ಕೆಳವರ್ಗ
ಬೆತ್ತಲೆ ಮೆರವಣಿಗೆ	ಹಲ್ಲೆ
ಜಾತಿನಿಂದನೆ	ಅತ್ಯಾಚಾರ
ದಲಿತರ ಕಗ್ಗೊಲೆ	ಊಳಿಗಮಾನ್ಯ ಪದ್ಧತಿ

ಅಸ್ಪೃಶ್ಯತೆಯ ವಿಮೋಚನೆಗಾಗಿ ಹೋರಾಟ.

ದಲಿತ ಸಂಘ–ಸಂಸ್ಥೆಗಳು ಬಳಸುವ ಪರಿಭಾಷೆಗಳು :

ದಲಿತ ಸಂಘರ್ಷ ಸಮಿತಿ
ಭಾರತೀಯ ಭೀಮಸೇನೆ
ದಲಿತ ಜನ ಜಾಗೃತಿ
ಪ್ರಜಾಲೋಂದನ
ಹರಿಜನ ಸೇವಕ ಸಂಘ
ಅಂಬೇಡ್ಕರ್ ಯುವಕ ಸಂಘ ಅಥವಾ ಮಿತ್ರ ಮಂಡಳಿ
ದಲಿತ ಸ್ಥಾನ
ಆತ್ಮ ರಕ್ಷಣಾ ಪಡೆ
ಶೋಷಿತ ವರ್ಗದ ಸಮಾವೇಶ/ಸಮ್ಮೇಳನ/ಆಂದೋಲನ
ಕೋಮುವಾದಿ ಕರಾಳ ಘಟನೆ
ದಲಿತರ ಕಗ್ಗೊಲೆ
ಸಾಮಾಜಿಕ ಸ್ವಾತಂತ್ರ್ಯ
ಅವೈದಿಕ ಚಿಂತನೆ
ಇಂಡಿಯನ್ ಲೇಬರ್ ಪಾರ್ಟಿ
ಬಹಿಷ್ಕೃತ ಭಾರತಿ ಹಿತಕಾರಣಿ ಸಭಾ
ದಲಿತ ಕಾರ್ಮಿಕ ಸಂಘ
ವಾಮಪಂಥೀಯರ ಸಂಘಟನೆ
ಸಾಮಾಜಿಕ ಬದ್ದತೆ
ಅಂಬೇಡ್ಕರವಾದ
ಲೋಹಿಯಾವಾದ
ದಲಿತತ್ವ
ದಲಿತ ವಿದ್ಯಾರ್ಥಿ ಒಕ್ಕೂಟ
ದಲಿತ ಕಲಾ ಮಂಡಳಿ
ದಲಿತ ಮಹಿಳಾ ಒಕ್ಕೂಟ
ಸಾಂಸ್ಕೃತಿಕ ಮನ್ನಣೆ

ಈ ಎಲ್ಲಾ ಪರಿಭಾಷೆಗಳನ್ನು ಬಳಸುವುದು ಶೋಷಿತರ, ಅಸಮಾನತೆಗೊಳಗಾದವರ ಸಾಂಸ್ಕೃತಿಕವಾಗಿ ಯಜಮಾನ್ಯ ಪ್ರಾಬಲ್ಯವನ್ನು ಸಾಧಿಸುವವರ ವಿರುದ್ಧ ಹೋರಾಡುವ ಸ್ವಾಭಿಮಾನದ ಪ್ರತಿಮೆ ಅಥವಾ ಸಂಕೇತಗಳು ಪರಿಭಾಷೆಯಾಗಿ ಮೂಡಿಬರುತ್ತವೆ.

ಸಾಹಿತಿಗಳು, ಬುದ್ಧಿಜೀವಿಗಳು ಜನಪರ ಕಾಳಜಿ ಇರುವ ಹೋರಾಟಗಾರರು ಕೂಡ ತಮ್ಮದೇ ಆದ ಕೆಲವು ಪರಿಭಾಷೆಗಳನ್ನು ಬಳಸುತ್ತಾರೆ.

ಅಸ್ಪೃಶ್ಯತೆಯ ವಿಮೋಚನೆಗಾಗಿ ಹೋರಾಟ
ಪ್ರಗತಿಪರ ಚಿಂತಕ
ಜನಪರ ಚಿಂತಕ
ದಲಿತ ಬಂಡಾಯ
ರ್‍ಯಾಡಿಕಲ್ ಚಳುವಳಿ
ಸಮಾಜ ಕಾರ್ಯಕರ್ತ
ದಲಿತ ಸಾಹಿತಿ
ಬಂಡಾಯ ಸಾಹಿತಿ
ಎಡಪಂಥೀಯ ಸಾಹಿತಿ.

ಧಾರ್ಮಿಕ ವಲಯದಲ್ಲಿ ಬಳಕೆಯಾಗುವ ಪರಿಭಾಷೆಗಳು :

ಮಡಿ
ಮೈಲಿಗೆ
ದೇವದಾಸಿಯರು
ಹೋಮ
ಅಗ್ನಿ
ತೀರ್ಥ
ಪ್ರಸಾದ.

ದಲಿತರನ್ನು ಗುರುತಿಸುವ ಸರಕಾರಿ ಪರಿಭಾಷೆಗಳು :

ಪರಿಶಿಷ್ಟ ಜಾತಿ
ಪರಿಶಿಷ್ಟ ಪಂಗಡ
ಆದಿ ಕರ್ನಾಟಕ, ಚಲವಾದಿ, ಅಸ್ಪೃಶ್ಯರು,
ಆದಿ ದ್ರಾವಿಡ, ಆದಿ ಜಾಂಬವ.

ಈ ಪ್ರಾದೇಶಿಕ ಭಾಷಾ ರೂಪಗಳು ಆಯಾ ಪ್ರದೇಶದ ಜನರ ಭಾಷೆ ಮತ್ತು ರಚನಾ ವಿನ್ಯಾಸವನ್ನು ಅನುಸರಿಸಿಕೊಂಡಿವೆ.

೨) ರೈತ ಚಳುವಳಿಯ ಪಾರಿಭಾಷಿಕ ಪದಗಳು :

ಭಾರಿ ಭೂಮಾಲೀಕರು / ಭೂ ಒಡೆಯರು
ವರ್ಗಹಿತಾಸಕ್ತಿ
ಜೀತ ವ್ಯವಸ್ಥೆ
ಬೆವರಿನ ಸಂಸ್ಕೃತಿಯವರು
ಸಬ್ಸಿಡಿ
ಸಂಯುಕ್ತ ರಂಗ
ಮುಷ್ಕರ
ಖಾತೆ ಪಾಣಿ
ಉಳುಮೆಗಾರ
ಭೂಮಸೂದೆ
ಗೇಣಿದಾರರು
ಕೂಲಿ
ಕೋಮುವಾದ
ದಿಕ್ಕಾರ
ಜಿಂದಾಬಾದ್ ಇಂಕ್ವಿಲಾಬ್ ಜಿಂದಾಬಾದ್
ಗೋಲಿಬಾರ್
ಹತ್ಯಾಕಾಂಡ
ರ್‍ಯಾಲಿ
ಜಾಥಾ
ಕೃಷಿ ಕಾರ್ಮಿಕರು
ಸಣ್ಣ ಹಿಡುವಳಿದಾರರು
ಮಾನವ ಸರಪಳಿ
ಇನಾಂ
ಜಮ್ಮಾ
ಜಹಗೀರು
ಗುತ್ತಿಗೆ
ಒಳಕಂದಾಯ
ಗೇಣಿ ಪದ್ಧತಿ
ಉಚ್ಚಾಟನೆ
ರೈತರ ಹುರಿಯಾಳುಗಳು
ರೈತ ಜನಾಂದೋಲನ
ಬಿಟ್ಟಿ ದುಡಿಮೆ
ಬಡ್ಡಿ ವ್ಯವಹಾರ
ಕೂಲಿಕಾರ
ಬಹಿರಂಗ ಸಭೆ
ಸಾಲಭಾದೆ

ವರಮಾನ
ಭೂಸುಧಾರಣ ಕಾಯ್ದೆ
ಹಸಿರು ಕ್ರಾಂತಿ
ಕಳೆನಾಶಕಗಳು
ಯಂತ್ರಗಳು
ಜಮೀನ್ದಾರರು
ಜಾಗತಿಕ ಮಾರುಕಟ್ಟೆ
ಸಾಮ್ರಾಜ್ಯಶಾಹಿ
ಗುಲಾಮಗಿರಿ
ದೌರ್ಜನ್ಯ–ದಬ್ಬಾಳಿಕೆ
ಭೂಪ್ರಶ್ನೆ
ಮೀನುಗಾರ
ಅಕ್ರಮ ದಾಸ್ತಾನುದಾರರು
ಕಳ್ಳ ಸಾಗಾಣಿಕೆದಾರರು
ಅಕ್ರಮ ವಸೂಲಿಗಳು
ರೈತರ ಕರಾಳ ದಿನ
ದಿಗ್ಬಂಧನ
ನಿಶಸ್ತ್ರೀಕರಣ
ಬಂಡವಾಳಶಾಹಿ
ಸಾವಯವ ಕೃಷಿ
ಹೈಬ್ರೀಡ್ ತಳಿಗಳು
ಬೆಲೆ ಏರಿಕೆ
ಕಾರಾಗೃಹ
ಕೃಷಿ ಸೇನೆ
ಎಕರೆ/ಗುಂಟೆ
ಉಚ್ಚಾಟನೆ
ಕಂದಾಯ
ಹಿಡುವಳಿದಾರ
ಸಾಗುವಳಿ
ಉಗ್ರಾಣ
ಮಣ
ಕಲಬೆರೆಕೆ
ಗೋಲಿಬಾರು
ಅನಿರ್ಧಿಷ್ಟ ಸತ್ಯಾಗ್ರಹ
ಸರಣಿ ಸತ್ಯಾಗ್ರಹ
ಕರಪತ್ರ

ಊಳಿಗಮಾನ್ಯ ಪದ್ಧತಿ
ಭೂ ಹೋರಾಟ
ಜಾಗತೀಕರಣ
ಉದಾರೀಕರಣ
ಖಾಸಗೀಕರಣ
ಸಣ್ಣ, ಅತಿಸಣ್ಣ ರೈತರು
ಬಹಿಷ್ಕಾರ
ಆಳುವ ವರ್ಗ
ಊಳಿಗಮಾನ್ಯಶಾಹಿ
ಭಾರಿ ರೈತಾಪಿವರ್ಗ
ಜೀತದಾಳು
ಎ.ಪಿ.ಎಂ.ಸಿ
ವಸೂಲಿ
ಗೇಣಿ
ಗುತ್ತಿಗೆದಾರರು
ಗೇಣಿದಾರರು
ದಸ್ತಗಿರಿ
ಮನ್ನಾ
ತೆರಿಗೆ
ನಾಲೆಗಳು
ಪಿತ್ರಾರ್ಜಿತ
ಆತ್ಮಹತ್ಯೆ
ಲೂಟಿ
ಕೊಳ್ಳೆ
ಸೆರೆಮನೆ
ಗಡಿಪಾರು
ಮರಣದಂಡನೆ
ಕೋರುಪಾಲು
ಲಾವಣಿ
ರೈತ ಬಂಡಾಯ
ಸಾಹುಕಾರರು
ಕರನಿರಾಕರಣೆ
ಜಾಮೀನು
ಸಾರ್ವತ್ರಿಕ ಮುಷ್ಕರ
ಭೂತದಹನ
ಪ್ರತಿಕೃತಿದಹನ

೩) ಮಹಿಳಾ ಚಳುವಳಿಯ ಪಾರಿಭಾಷಿಕ ಪದಗಳು

ಅಂತರಾಷ್ಟ್ರೀಯ ಮಹಿಳಾ ಚಳುವಳಿ	ಜೈವಿಕ ಪಿತೃತ್ವ	ಅತ್ಯಾಚಾರ (ರೇಪ್)
ಅಂತರ್ ಜನಾಂಗ ಗುಲಾಮಗಿರಿ	ತೀವ್ರಗಾಮಿ ಸ್ತ್ರೀವಾದ	ಹಿಂಸೆ
ವಿರೋಧಿ ಚಳುವಳಿ	ದರ್ಪಣ ಘಟ್ಟ	ಜೈವಿಕ ಲಿಂಗ
ಆಂದೋಲನಗಳ ಚರಿತ್ರೆ	ದರ್ಶನಾತ್ಮಕ ಪ್ರತಿಮೆ	ಪಿತೃ ಪ್ರಧಾನ
ಆವರ್ತನೀಯ ಸಿದ್ಧಾಂತ	ದ್ವಿಪತ್ಯ	ಪಿತೃ ಮೂಲ ಬಹುಪತ್ನಿತ್ವ
ಅತೀತೆಯವಾದ	ನಾಗರೀಕ ಅವಿಧೇಯ ಚಳುವಳಿ	ಪಿತೃ ವಂಶೀಯ
ಅಂತಃಸತ್ವವಾದ	ದ್ವಿಲಿಂಗತ್ವ	ಪುರುಷ ಕೃತಿ
ಅಪರಾಧ ದಂಡ ಸಂಹಿತೆ	ದ್ವಿಮುಖ ವ್ಯಕ್ತಿತ್ವ	ಪುರುಷ ಲೈಂಗಿಕತೆ
ಆವರ್ತನೀಯ ಸಿದ್ಧಾಂತ	ಸ್ತ್ರೀದ್ವೇಷ	ಪುರುಷಾತ್ಮಕವಾದ
ಕಾಮವಾಂಛೆ	ಸ್ತ್ರೀತ್ವ	ಪುರುಷ ಲಿಂಗೀಯ ಅನನ್ಯತೆ
ಕಾರ್ಮಿಕವರ್ಗ ಸ್ತ್ರೀವಾದ	ಸ್ತ್ರೀಗುಣ	ಭಾಷಿಕ ನಿರ್ದೇಶನ
ಕುಟುಂಬ ಸಂಹಿತೆ	ಸ್ತ್ರೀಯಾತ್ಮಕತೆ	ಭಿನ್ನ ಜೈವಿಕತೆ
ಕೂಲಿ	ಸ್ತ್ರೀವೈಶಿಷ್ಟ್ಯ	ಭಿನ್ನ ಲೈಂಗಿಕತೆ
ಚೈತನ್ಯಾತ್ಮಕ ಸ್ತ್ರೀಸ್ವತ್ತು	ಸ್ತ್ರೀ ಪರಿಸರವಾದ	ಮನೋವಿಶ್ಲೇಷಣಾತ್ಮಕ ಸ್ತ್ರೀವಾದ
ಜ್ಞಾತೃಸ್ಥಾನ	ಸ್ತ್ರೀಯಾತ್ಮಕ ಗುರುತು	ಮಹಿಳಾ ಸಂಕಥನ
ಜೀವಪರಿಸರ ಸ್ತ್ರೀವಾದ	ಸ್ತ್ರೀವಾದ	ಮಹಿಳಾ ವಿಷಯಗಳು
ಜೀವಶಾಸ್ತ್ರೀಯ ಸಾರ್ವತ್ರಿಕತೆ	ಮಹಿಳಾವಾದ	ಮಹಿಳಾ ಸಬಲೀಕರಣ
ಜೈವಿಕ ಲಿಂಗತ್ವ	ದೇವದಾಸಿ ಪದ್ಧತಿ	ಮಹಿಳೆಯ ಲೈಂಗಿಕ ಸಿದ್ಧರೂಪ
ಮಾತೃಮೂಲಕ ಬಹುಪತ್ನಿತ್ವ	ಲೈಂಗಿಕ ರಾಜಕಾರಣ	ಭಿನ್ನಲಿಂಗೀಯ
ಮಾತೃ ವಂಶೀಯ	ಮಹಿಳಾ ಕದನ	ಸ್ತ್ರೀಮಂಡಳಿ
ಮಾತೃ ವಂಶೀಯ ಉತ್ತರಾಧಿಕಾರತ್ವ	ಸ್ತ್ರೀವಾದಿ ಚರಿತ್ರೆ	ಸಬಲೀಕೃತ ಮಹಿಳೆ
ಲಿಂಗಾಧಾರಿತ ಸಂಬಂಧ	ಸ್ತ್ರೀವಾದಿಗಳಲ್ಲದವರು	ಮಹಿಳಾ ಸಂಘಟನೆ
ಲಿಂಗ ತಟಸ್ಥ	ಸರ್ವ ಸಮಾನತವಾದಿ ರಾಜಕೀಯ ಚಿಂತನೆ	ಸ್ತ್ರೀವಾದಿ ಚಳುವಳಿ
ಲಿಂಗ ಪಾತ್ರತೆ	ಸಮಾಜವಾದಿ ಸ್ತ್ರೀವಾದ	ಮಹಿಳಾ ಹೋರಾಟ
ಲಿಂಗ ಪಾತ್ರ ತಾತ್ವಿಕತೆ	ಸಾಮ್ರಾಜ್ಯವಾದಿ ಅಧಿಪತ್ಯ	ಮಹಿಳಾ ಆಂದೋಲನ
ಲಿಂಗ ಪಾತ್ರ ವರ್ತನೆ	ಸುಧಾರಣಾ ಕಾರ್ಯಸೂಚಿ	ಲೈಂಗಿಕ ಶ್ರಮ ವಿಭಜನೆ
ಲಿಂಗ ವ್ಯವಸ್ಥೆಯ ಪಾತ್ರ	ಸ್ಥಾನಮಾನದ ಕೀಳರಿಮೆ ಸಿದ್ಧಾಂತ	ಲೈಂಗಿಕ ಸಾಂಕೇತಿಕತೆ
ಲಿಂಗ ವ್ಯವಸ್ಥೆಯ ತಾರತಮ್ಯ	ಹೆಣ್ಣುತನ.	ಲೈಂಕಿತಾವಾದ
ಲಿಂಗಾತೀತತೆ	ಮಾರ್ಕ್ಸ್‌ವಾದಿ ಸ್ತ್ರೀವಾದ	ಸ್ತ್ರೀಯಾತ್ಮಕ ಗುರುತು
ಲೈಂಗಿಕ ವಿಭಜನೆ	ಮಹಿಳಾ ಕ್ಷೇತ್ರ	ಸ್ತ್ರೀವ್ಯಸನ
ಮಹಿಳಾ ವಿಮೋಚನೆಯ ಹೋರಾಟ	ಮಹಿಳಾ ಲೋಕ	ಸ್ತ್ರೀವಶೀಕರಣ
ಮಹಿಳಾ ಅಧ್ಯಯನ	ಮಹಿಳಾ ವಲಯ	ಸ್ತ್ರೀಧನ
ಸ್ತ್ರೀವಶ್ಯ	ಸ್ತ್ರೀವಧೆ	ಸ್ತ್ರೀಹತ್ಯೆ

೪) ಕಾರ್ಮಿಕ ಚಳುವಳಿಯ ಪಾರಿಭಾಷಿಕ ಪದಗಳು :

ಕೂಲಿಕಾರ	ಸ್ವದೇಶಿ	ಖಾಸಗೀಕರಣ
ಕಾರ್ಮಿಕರ ಸಮಾವೇಶ	ವಿದೇಶಿ	ರ್‍ಯಾಲಿ
ಮಾಲಿಕರು	ಗುಲಾಮ	ಶ್ರಮಿಕವರ್ಗ
ಕನಿಷ್ಠ ಕೂಲಿ	ರತ್ನಗಂಬಳಿ	ಜಾಗತಿಕ ಮಾರುಕಟ್ಟೆ
ಗುಂಡಾಗಿರಿ	ಸಾಮ್ರಾಜ್ಯಶಾಹಿ	ದೌರ್ಜನ್ಯ
ಕಾಂಟ್ರಾಕ್ಟರ್	ಬಹುರಾಷ್ಟ್ರೀಯ ಕಂಪನಿ	ದಬ್ಬಾಳಿಕೆ
ಗುತ್ತಿಗೆ	ಮಾರುಕಟ್ಟೆ	ಬಹಿಷ್ಕಾರ
ಬಂದ್	ಮುಷ್ಕರ	ಜೀತದಾಳು
ಜಿಂದಾಬಾದ್	ಪಿಂಚಣಿ	ಅನಿರ್ಧಿಷ್ಟ
ಲಾಲ್‌ಸಲಾಮ್	ಭವಿಷ್ಯನಿಧಿ	ಹಕ್ಕು
ರೆಡ್ ಸಲ್ಯೂಟ್	ಉಚ್ಚಾಟನೆ	ಸಾಮಾಜಿಕ ನ್ಯಾಯ
ಕೈಗಾರೀಕರಣ	ಕಾರ್ಮಿಕಾಂದೋಲನ	ಕಡಿಮೆ ಸಂಬಳ
ಗುತ್ತಿಗೆದಾರ	ತ್ಯಾಗಬಲಿದಾನ	ಹಾಜರಾತಿ ಭತ್ಯೆ
ಬೋನಸ್	ಸಹಾಯಧನ	ಬಹಿರಂಗ ಸಭೆ
ಬಂಡವಾಳಶಾಹಿ	ಉದ್ಯೋಗ	ಸಾರ್ವತ್ರಿಕ ಮುಷ್ಕರ
ಹಿಂಸೆ	ಭ್ರಷ್ಟರು	ಬೆಲೆ ಏರಿಕೆ ನಿಯಂತ್ರಣ
ಮಾನವ ಸರಪಳಿ	ಕೂಲಿಗಾಗಿ ಕಾಳು	ಸರಣಿ ಸತ್ಯಾಗ್ರಹ
ವಿಶ್ವಕಾರ್ಮಿಕ	ಪುರೋಹಿತಶಾಹಿ	ಭೂತದಹನ
ಸಮವಸ್ತ್ರ	ಉದಾರೀಕರಣ	ಬೇಡಿಕೆ ಈಡೇರಿಕೆ
ಸಂಕೋಲೆ	ಜಾಗತೀಕರಣ	ಕರಪತ್ರ

೫) ವಿದ್ಯಾರ್ಥಿ ಚಳುವಳಿಯ ಪಾರಿಭಾಷಿಕ ಪದಗಳು :

ಉದ್ಯೋಗ	ದಬ್ಬಾಳಿಕೆ	ಭ್ರಷ್ಟತೆ
ಸಂಘಟನೆ	ಕೋಮುಸೌಹಾರ್ಧತೆ	ಜಿಂದಾಬಾದ್ ಜಿಂದಾಬಾದ್
ನ್ಯಾಯ	ಸಮಾನತೆ	ಹೋರಾಟ
ಅನ್ಯಾಯ	ರಾಷ್ಟ್ರೀಯತೆ	ಬಹಿಷ್ಕಾರ
ವಸಾಹತುಶಾಹಿ	ಸ್ವಾತಂತ್ರ್ಯ	ಅಜೆಂಡಾ
ಸಮಾಜವಾದಿ	ಧಿಕ್ಕಾರ	ವಸತಿ ನಿಲಯ
ಪ್ರಜಾಪ್ರಭುತ್ವ	ಶಿಕ್ಷಣದ ವ್ಯಾಪಾರೀಕರಣ	ವೃತ್ತಿಪರ ಕೋರ್ಸು
ಹಕ್ಕು	ಮೀಸಲಾತಿ	ಬಜೆಟ್
ಪರಂಗಿಯವರು	ಬಿಸಿಯೂಟ	ಲೂಟಿ
ಗುಲಾಮಗಿರಿ	ಉಚಿತ ಶಿಕ್ಷಣ	ಕೊಳ್ಳೆ
ಖಾಸಗೀಕರಣ	ಕಾವಲುಗಾರ	ವಿದ್ಯಾರ್ಥಿ ಆಂದೋಲನ
ಬಂಡವಾಳೀಕರಣ	ದೌರ್ಜನ್ಯ	ಮುಷ್ಕರ
ಜಾಗತೀಕರಣ	ಶೋಷಣೆ	ರ್‍ಯಾಲಿ

ಲೈಂಗಿಕ ಕಿರುಕುಳ	ಮಾನವ ಸರಪಳಿ	ಅಸಮಾನತೆ
ಉಚಿತ ಬಸ್‌ಪಾಸ್	ಭೂತದಹನ	ಜಾಥಾ
ಬೇಡಿಕೆ ಈಡೇರಿಕೆ	ಕರಪತ್ರ	ಭಾರತ್ ಬಂದ್
ಶಾಲಾ-ಕಾಲೇಜು ಬಂದ್	ಶುಲ್ಕ ಏರಿಕೆ	ಕರ್ನಾಟಕ ಬಂದ್
ಬಹಿರಂಗ ಸಭೆ	ಡೊನೇಷನ್ ಹಾವಳಿ	ಬಹಿಷ್ಕಾರ
ಸಾಮಾಜಿಕ ನ್ಯಾಯ	ವಿದ್ಯಾರ್ಥಿ ಸಂಘಗಳ ಚುನಾವಣೆ	ಸಂಯುಕ್ತ ರಂಗ
ಪ್ರತಿಕೃತಿದಹನ	ರಸ್ತೆ ತಡೆ	ರೈಲು ತಡೆ
ಬಳ್ಳಾರಿ ಬಂದ್		

ಅಧ್ಯಾಯ–೮

ಪದಕೋಶ ಪಲ್ಲಟ ಸ್ವರೂಪ

ಅಧ್ಯಾಯ-೮

ಪದಕೋಶ ಪಲ್ಲಟ ಸ್ವರೂಪ

ಪ್ರತಿಯೊಂದು ಕ್ಷೇತ್ರಕ್ಕೂ ಅದರದೆ ಆದ ಪದಕೋಶ ಇರುವ ಹಾಗೆ ಹೋರಾಟದ ವಲಯಕ್ಕೂ ಅದರದೆ ಆದ ಪದಕೋಶವಿದೆ ಎಂಬುದನ್ನು ತಿಳಿಸುವುದೆ ಪ್ರಸ್ತುತ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ. ಪದಕೋಶದ ಪಲ್ಲಟ ಎಂದರೆ ಬದಲಾವಣೆ, ಮಾರ್ಪಾಡು ಎಂಬರ್ಥಗಳು ಇವೆ. ಕನ್ನಡ ಭಾಷೆ ಬೇರೆ ಬೇರೆ ಕಾರಣಗಳಿಂದ ಬೇರೆ ಬೇರೆ ವಲಯಗಳಲ್ಲಿ ಬಳಕೆಯಾಗುವ ಸಂದರ್ಭಗಳು ಸೃಷ್ಟಿಯಾಗಿರುವುದರಿಂದ ಹೊಸಪದ ನಿರ್ಮಾಣ ಅನಿವಾರ್ಯವಾಗಿದೆ. ಅಂದರೆ ನಿರ್ಧಿಷ್ಟ ವಲಯದ ಉದ್ದೇಶಗಳನ್ನು, ಆಶಯಗಳನ್ನು ಜನರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಬೇಕಾದರೆ, ಪರಿಣಾಮಕಾರಿ ಯಾದಂಥ ಪರಿಭಾಷೆಗಳ ನಿರ್ಮಾಣ ಅನಿವಾರ್ಯವೆನಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ಹೋರಾಟಗಳಲ್ಲಿ ಬಳಕೆಯಾಗುವ, ಬಳಕೆಯಾಗುತ್ತಿರುವ ಪರಿಭಾಷೆಗಳ ಸ್ವರೂಪ ಭಿನ್ನವಾಗಿದೆ. ಈ ಭಿನ್ನತೆಗೆ ಕಾರಣ ಆಯಾಕ್ಷೇತ್ರಗಳು ಹೊಂದಿರುವ ಉದ್ದೇಶ ಬಹಳ ಮುಖ್ಯವಾದದ್ದು. ದಲಿತ ಹೋರಾಟದಲ್ಲಿ ಬಳಕೆಯಾಗುವ ಪರಿಭಾಷೆ ಮಹಿಳಾ ಹೋರಾಟದಲ್ಲಿ ಬಳಕೆಯಾದರೂ ಅವುಗಳ ಸಂವಹನದಲ್ಲಿ ವ್ಯತ್ಯಾಸವಿದ್ದೇ ಇದೆ. ದಲಿತ ಹೋರಾಟದಲ್ಲಿ ಮಹಿಳೆ ಇರುವ ಹಾಗೆ ಮಹಿಳಾ ಹೋರಾಟದಲ್ಲಿ ದಲಿತ ಮಹಿಳೆ ಇರುವುದು ಸಹಜವಾದದ್ದೆ. ಅದೇ ರೀತಿಯಲ್ಲಿ ರೈತ ಹೋರಾಟ, ಕಾರ್ಮಿಕ ಹೋರಾಟಗಳಲ್ಲೂ ಮಹಿಳೆ ಪ್ರಮುಖ ಪಾತ್ರವಹಿಸಿದರು ಆಯಾ ಹೋರಾಟಗಳ ಹಿನ್ನೆಲೆಯಲ್ಲಿ ಪರಿಭಾಷೆಗಳು ಸೃಷ್ಟಿಯಾಗುತ್ತಿರುವುದು ಗಮನಾರ್ಹವಾದ ಸಂಗತಿ.

ಒಂದು ನಿರ್ಧಿಷ್ಟ ಕ್ಷೇತ್ರದಲ್ಲಿ ಬಳಕೆಯಾಗುವ ಪರಿಭಾಷೆ ಇನ್ನೊಂದು ಕ್ಷೇತ್ರದಲ್ಲಿ ಬಳಕೆಯಾಗುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಕೆಲವು ಸಂದರ್ಭದಲ್ಲಿ ಮೂಲ ಅರ್ಥಕ್ಕಿಂತ ಬೇರೆಯಾಗಿ ಬಳಕೆಯಾಗಬಹುದು ಅಥವಾ ಮೂಲ ಅರ್ಥವನ್ನೆ ಉಳಿಸಿಕೊಂಡು ಬಳಕೆಯಾಗುವ ಸಾಧ್ಯತೆಯು ಇದೆ. ಇಂತಹ ಪ್ರಕ್ರೀಯೆಯನ್ನು ಪದಕೋಶದ ಪಲ್ಲಟ ಎಂದು ಕರೆಯಲಾಗಿದೆ. ಭಾಷೆಯು ಪದಕೋಶದ ಬೆಳವಣಿಗೆಯಿಂದ ಅದರ ಸಮತೋಲನದಲ್ಲಾಗುವ ಏರುಪೇರುಗಳು ಅದರ ನಿಯಮಗಳಲ್ಲಾಗುವ ಪಲ್ಲಟಗಳು ಕುತೂಹಲಕಾರಿಯಾದ ಸಂಗತಿ. ಒಂದು ನಿರ್ಧಿಷ್ಟ ಭಾಷೆಯ ಚರಿತ್ರೆಯನ್ನು ನಿರ್ಮಾಣ ಮಾಡುವವರಿಗೆ ಪದಕೋಶದ ಪಲ್ಲಟ ಅತ್ಯಂತ ಒಳನೋಟಗಳನ್ನು ನೀಡಬಲ್ಲದು. ಪದಕೋಶಕ್ಕೆ ಒಂದು ಚರಿತ್ರೆ ಇರುವ ಹಾಗೆ ವಾಸ್ತವವೂ ಇರುತ್ತದೆ. ಅಂದರೆ ನಿರ್ಧಿಷ್ಟ ಕಾಲಮಾನದ ಪದಕೋಶದಲ್ಲೂ ಪರಿವರ್ತನೆಯ ಸೂಚನೆಗಳನ್ನು ಕಾಣಬಹುದು. ಇಂತಹ ಸೂಚನೆಗಳು ಮೇಲ್ನೋಟಕ್ಕೆ ಭಾಷಿಕವಾಗಿ ಕಂಡರು ಅವುಗಳ ನಿರ್ಮಾಣಕ್ಕೆ ಕಾರಣಗಳು ಭಾಷಿಕೇತರವೂ ಆಗಿರುವುವು. ಹೊಸ ಪದಗಳು ಒಂದು ನಿರ್ಧಿಷ್ಟ ಉದ್ದೇಶಕ್ಕೆ ಸೃಷ್ಟಿಸಿ

ಬಳಕೆಯಾದರೆ, ಪರಿಭಾಷೆಗಳು ಒಂದು ನಿರ್ಧಿಷ್ಟ ಆಶಯವನ್ನು ತಿಳಿಸಲು ಬಳಕೆ ಮಾಡಲಾಗುತ್ತದೆ. ಇಂತಹ ಒಂದು ನಿರ್ಧಿಷ್ಟ ವಲಯದಲ್ಲಿ ಬಳಕೆಯಲ್ಲಿರುವ ಪದ ಒಂದು ಅರ್ಥದಲ್ಲಿ ಬಳಕೆಯಲ್ಲಿದ್ದರೆ, ಅಂತಹ ಪದದ ಹಿಂದೆ ಅಥವಾ ಮುಂದೆ ಬೇರೊಂದು ವಲಯದ ಪದ ಬಂದು ಬೇರೊಂದು ಅರ್ಥದಲ್ಲಿ ಬಳಕೆಯಲ್ಲಿರುತ್ತದೆ. ಈ ಅಂಶ ಪದಕೋಶದ ಲಕ್ಷಣವನ್ನು ಹೇಳುತ್ತದೆ. **ಉದಾಹರಣೆಗೆ :** ದಿಕ್ಕಾರ, ಸಂಘಟನೆ, ದೌರ್ಜನ್ಯ, ಬಂದ್, ರ್‍ಯಾಲಿ, ಮುಷ್ಕರ, ಶೋಷಣೆ, ಅನ್ಯಾಯ, ಹಕ್ಕು, ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ಬಂಡವಾಳಶಾಹಿ ಮುಂತಾದ ಪರಿಭಾಷೆಗಳು ದಲಿತ, ರೈತ, ಮಹಿಳೆ, ಕೂಲಿಕಾರ್ಮಿಕ ಮತ್ತು ವಿದ್ಯಾರ್ಥಿ ಹೋರಾಟಗಳಲ್ಲಿ ಬಳಕೆಯಾಗುತ್ತಿರುವುದನ್ನು ನೋಡಬಹುದು. ಅದೇ ರೀತಿಯಲ್ಲಿ **'ತೀವ್ರಗಾಮಿ'** ಪದದ ಅರ್ಥ ಉಗ್ರ ಹೋರಾಟ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಈ ಪದದ ಮುಂದಿನ ಭಾಗಕ್ಕೆ ಸ್ತ್ರೀವಾದ ಪದ ಸೇರಿಕೊಂಡು ನಿರ್ಧಿಷ್ಟ ವಲಯದ ಪರಿಭಾಷೆಯಾಗಿ ಬಳಕೆಯಲ್ಲಿರುವುದನ್ನು ನೋಡಬಹುದು. ಅಂದರೆ ಇಲ್ಲಿ ತೀವ್ರಗಾಮಿ ಪದ ತನ್ನ ಮೂಲ ಅರ್ಥವನ್ನು ಉಳಿಸಿಕೊಂಡು ಬಂದು ನಿರ್ಧಿಷ್ಟ ವಲಯದ (ಮಹಿಳಾ ಹೋರಾಟ) ಪರಿಭಾಷೆಯಾಗಿ ಪಲ್ಲಟವಾಗಿರುವುದು ಗಮನಿಸುವಂತಹ ಅಂಶ. ಕಾರ್ಮಿಕ ವರ್ಗ ಒಂದು ನಿರ್ಧಿಷ್ಟ ಚಳುವಳಿಯನ್ನು ಸೂಚಿಸಿದರೆ ಈ ಪದದ ಮುಂದೆ ಸ್ತ್ರೀವಾದ ಸೇರಿಕೊಂಡು ನಿರ್ಧಿಷ್ಟ ವಲಯದ ಪದವಾಗಿ ಬಳಕೆಯಲ್ಲಿರುವುದನ್ನು ನೋಡಬಹುದು. ಇದೇ ರೀತಿಯಲ್ಲಿ **'ಕದನ'** ಮತ್ತು **'ಚರಿತ್ರೆ'** ಪದಗಳು ಯುದ್ಧ ಮತ್ತು ಇತಿಹಾಸ ಎಂಬ ಅರ್ಥದಲ್ಲಿ ಬಳಕೆಯಲ್ಲಿದ್ದು ಆ ಪದಗಳು ಮಹಿಳಾ ಪದದ ಮುಂದೆ ಬಂದು ನಿರ್ಧಿಷ್ಟ ಚಳುವಳಿಯ ಸೂಚಕ ಪರಿಭಾಷೆಯಾಗಿ ಪಲ್ಲಟವಾಗಿರುವುದು ಗಮನಾರ್ಹವಾದ ವಿಷಯವಾಗಿದೆ.

'ಸಬ್ಸಿಡಿ' ಪದ ಮೂಲತಹ ಬ್ಯಾಂಕ್ ವಲಯದ ಪರಿಭಾಷೆಯಾಗಿ ಬಳಕೆಯಲ್ಲಿರುವುದು ಸರಿ. ಆದರೆ ಇದು ಬೇರೆ ಬೇರೆ ಹೋರಾಟಗಳಿಗೆ ಪಲ್ಲಟವಾಗಿ ಮಹಿಳೆಯರಿಗೆ ಸಬ್ಸಿಡಿ, ದಲಿತರಿಗೆ ಸಬ್ಸಿಡಿ, ರೈತರಿಗೆ ಸಬ್ಸಿಡಿ ಎಂಬ ನಿರ್ಧಿಷ್ಟ ವಲಯದ ಪರಿಭಾಷೆಯಾಗಿ ಬಳಕೆಯಲ್ಲಿದೆ. **'ಕಲಬೆರಕೆ'** ಪದ ಮಿಶ್ರಣ ಎಂಬರ್ಥದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದೆ. ಇದು ತನ್ನ ಮೂಲಾರ್ಥವನ್ನು ಉಳಿಸಿಕೊಂಡು ಕೃಷಿ ವಲಯದಲ್ಲಿ ಕಲಬೆರಕೆ ಆಹಾರ, ಕಲಬೆರಕೆ ಗೊಬ್ಬರ, ಕಲಬೆರಕೆ ಬೀಜ, ಕಲಬೆರಕೆ ಎಣ್ಣೆ ಎಂಬರ್ಥದಲ್ಲಿ ಬಳಕೆಯಲ್ಲಿರುವುದು ಕಂಡುಬರುತ್ತದೆ. **'ಅತ್ಮಹತ್ಯೆ'** ಎಂಬ ಪದ ಮೂಲಾರ್ಥದಲ್ಲಿ ಸಾವು ಎಂಬುದನ್ನು ಸೂಚಿಸುತ್ತದೆ. ವಿವಿಧ ಹೋರಾಟಗಳಲ್ಲಿ ಆತ್ಮಹತ್ಯೆ ಪರಿಭಾಷೆ ದಲಿತರ ಆತ್ಮಹತ್ಯೆ, ರೈತರ ಆತ್ಮಹತ್ಯೆ, ಕಾರ್ಮಿಕರ ಆತ್ಮಹತ್ಯೆ, ಮಹಿಳೆಯರ ಆತ್ಮಹತ್ಯೆ ಮತ್ತು ವಿದ್ಯಾರ್ಥಿ ಆತ್ಮಹತ್ಯೆ ಹೀಗೆ ನಿರ್ಧಿಷ್ಟ ವಲಯದ ಸೂಚಕ ಪರಿಭಾಷೆಯಾಗಿ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. **'ಎಡಗೈ'** ಮತ್ತು **'ಬಲಗೈ'** ಪದಗಳು ಮನುಷ್ಯನು ಎರಡು ಅಂಗಾಂಗಗಳನ್ನು ಸೂಚಿಸುತ್ತವೆ. ಆದರೆ ಈ ಎರಡು ಪದಗಳು ದಲಿತ ಚಳುವಳಿಯಲ್ಲಿ ದಲಿತರಲ್ಲೇ ಎರಡು ಉಪ

ಪಂಗಡಗಳ ಸೂಚಕ ಪರಿಭಾಷೆಗಳಾಗಿ ಬಳಕೆಯಾಗಿವೆ. ಇಂತಹ ಪ್ರಕ್ರೀಯೆಯನ್ನು ಪದಕೋಶದ ಪಲ್ಲಟ ಎಂದು ಕರೆಯುವರು.

ಹೀಗೆ ಪದಕೋಶದ ಪಲ್ಲಟ ಭಾಷೆಯ ಬೆಳವಣಿಗೆಗೆ ಪೂರಕವಾಗಿದೆ. **'ಖಾತೆ'** ಪದದ ಬಗೆಗೆ ಹೇಳುವುದಾದರೆ ಖಾತೆ ಪದ ಮೂಲತಹ ಬ್ಯಾಂಕ್ ವಲಯದಲ್ಲಿ ಹೆಸರು ನೋಂದಾವಣಿ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಆದರೆ ರೈತರ, ದಲಿತರ ಮತ್ತು ಮಹಿಳಾ ಹೋರಾಟಗಳನ್ನು ಜಿಲ್ಲಾವಾರು ವೀಕ್ಷಿಸುವಾಗ ಅಥವಾ ಅಧ್ಯಯನಕ್ಕೊಳಪಡಿಸಿದಾಗ ಮಹಿಳಾ ಹೋರಾಟದ ಖಾತೆ ಈ ಜಿಲ್ಲೆಯಲ್ಲಿ ಇನ್ನು ತೆರೆದಿಲ್ಲ ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಅಂದರೆ ಖಾತೆ ತೆರದಿಲ್ಲ ಎಂಬುದು ಗೌರವಯುತವಾಗಿ ಹೇಳುವಂತಹ ಮಾತಲ್ಲ. ಆ ಒಂದು ಜಿಲ್ಲೆಯಲ್ಲಿ ಈ ಹೋರಾಟ ಆರಂಭವಾಗಿಲ್ಲ ಎಂತಲೂ ಆರಂಭವಾಗುವುದಕ್ಕೆ ಇರುವ ಸಮಸ್ಯೆಗಳು ಅಲ್ಲಿಲ್ಲ ಎಂಬರ್ಥಗಳು ಧ್ವನಿಸುತ್ತವೆ. ಹೀಗೆ ಭಾಷೆಯ ಒಳಗೆ ಪದಕೋಶದ ಪಲ್ಲಟ ಒಂದು ನಿರ್ಧಿಷ್ಟ ಭಾಷೆಯ ಬೆಳವಣಿಗೆಗೆ ಪೂರಕವಾಗಿದೆ ಹೊರತು ಮಾರಕವಾಗಿಲ್ಲ ಎಂದೆನಿಸುತ್ತದೆ.

'ಅಜಂಡಾ' ಪದ ಮೂಲತಹ ಸಭೆಯಲ್ಲಿ ಪರ್ಯಾಯಲೋಚಿಸಬೇಕಾದ ವಿಷಯಗಳ ಪಟ್ಟಿ, ಕಾರ್ಯಸೂಚಿ ಎಂಬರ್ಥದಲ್ಲಿ ಬಳಕೆಯಲ್ಲಿದ್ದರೆ ದಲಿತ ಅಜಂಡಾ, ರೈತ ಅಜಂಡಾ, ಮಹಿಳಾ ಅಜಂಡಾ, ವಿದ್ಯಾರ್ಥಿ ಅಜಂಡಾ ಪದಗಳಾಗಿ ಬಳಕೆಯಾಗುವಾಗ ಒಂದು ನಿರ್ಧಿಷ್ಟ ವಲಯದ ಪದಕೋಶವನ್ನು ಸೂಚಿಸುತ್ತದೆ.

ಅಧ್ಯಾಯ-೯

ಪರಿಭಾಷೆ : ಸಾಮಾಜಿಕ ಸಂವಹನ

ಅಧ್ಯಾಯ-೯

ಪರಿಭಾಷೆ : ಸಾಮಾಜಿಕ ಸಂವಹನ

ವ್ಯಕ್ತಿ ವ್ಯಕ್ತಿಗಳ ನಡುವೆ ವ್ಯವಹಾರಿಕ ಸಂಬಂಧವನ್ನು ಬಗೆಹರಿಸುವುದು ಭಾಷೆ. ಭಾಷೆ ಸಮಾಜ ಬೇರೆ ಬೇರೆಯಲ್ಲ ಒಂದಕ್ಕೊಂದು ಪೂರಕವಾದವುಗಳು.ಸಮಾಜದ ತಳಹದಿಯೆ ಭಾಷೆಯಾಗಿದೆ. ಮಾನವನು ತನ್ನ ಆಲೋಚನೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಭಾಷೆಯಿಂದ ಮಾತ್ರ ಸಾಧ್ಯ. ಮಾನವನಿಗೆ ಭಾಷೆಯೊಂದು ದೊರೆಯದಿದ್ದರೆ ಇತರರೊಂದಿಗೆ ಸಂವಹನ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಸಮಾಜದ ನಂಬಿಕೆಗಳನ್ನು ಆಧರಿಸಿಯೆ ಭಾಷೆಯು ಅರ್ಥ ಪಡೆಯುತ್ತದೆ. ಅರ್ಥದ ವಲಯಗಳು ಬಹುರೂಪಗಳಿಂದ ಕೂಡಿರುತ್ತವೆ. ಕನ್ನಡ ಭಾಷೆಯು ಒಂದೇ ಆಗಿದ್ದರೂ ಆ ಭಾಷೆಯ ಅರ್ಥದ ವಲಯಗಳು ಅನೇಕ ಬಗೆಯ ಸಾಮಾಜಿಕ ಪರಿಸರದಿಂದ ಭಿನ್ನವಾಗಿರುತ್ತವೆ. ಭಾಷೆಗೆ ಜಾತಿ ಇಲ್ಲವಾದರು ಭಾಷೆಯ ಸಂವಹನಕ್ಕೆ ಜಾತಿಯ ಗುಣವಿದೆ. ಜಾತಿಯಿಂದೊಡಗೂಡಿದ ಸಮಾಜದಲ್ಲಿ ಜಾತಿಯಿಲ್ಲದೆ ಸಂವಹನ ಇರಲು ಸಾಧ್ಯವಿಲ್ಲವೆಂದು ಹೇಳಬಹುದು. ಹಲವಾರು ಜಾತಿಗಳು ಭಾಷೆಯ ಒಂದು ಸೂಚನೆಯನ್ನು ಒಂದು ಸಂದರ್ಭದಲ್ಲಿ ತಮ್ಮ ತಮ್ಮ ಭಾಷಾ ಚೌಕಟ್ಟಿನಲ್ಲಿ ಅರ್ಥೈಸಿಕೊಳ್ಳುತ್ತವೆ.

ಭಾಷೆ ಮತ್ತು ಸಮಾಜ ಎರಡು ಬೇರೆ ಬೇರೆಯಲ್ಲ. ಭಾಷೆಯು ಸಮಾಜದ ತಳಹದಿಯಾಗಿದೆ. ಮಾನವರ ಆಲೋಚನೆಗಳು ಅಭಿವ್ಯಕ್ತರೂಪ ಪಡೆಯುವುದು ಭಾಷೆಯಿಂದ. ಸಮಾಜದಲ್ಲಿರುವ ನಂಬಿಕೆಗಳನ್ನು ಆಧರಿಸಿ ಭಾಷೆಯು ಅರ್ಥ ಪಡೆಯುವುದು. ಈ ಅರ್ಥದ ಸ್ತರಗಳು ಬಹುರೂಪವಾಗಿರುತ್ತವೆ. ಕನ್ನಡ ಭಾಷೆಯು ಒಂದೇಯಾಗಿದ್ದರೂ ಆ ಭಾಷೆಯ ಅರ್ಥ ವಲಯಗಳು ಅನೇಕ ಬಗೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ಪರಿಸರದಿಂದ ವಿಭಿನ್ನವಾಗಿರುತ್ತವೆ. ಕನ್ನಡ ಭಾಷೆಯು ಕೆಳವರ್ಗಗಳ ಬದುಕಿನ ಸಂಬಂಧಗಳ ನೆಲೆಯಲ್ಲಿ ಅನೇಕ ಬಗೆಯ ಅಂತರಗಳನ್ನು, ಅರ್ಥಸೂತಕದ ಕ್ರಮಗಳನ್ನು ಮತ್ತು ತಾರತಮ್ಯಗಳನ್ನು ಅನುಸರಿಸಿಕೊಂಡು ಬಂದಿದೆ. ಅದರ ಸಾಮಾಜಿಕ ಸಂವಹನದಲ್ಲಿ ಜಾತಿಸೂಚಕವು ಅಂತರ್ಗತವಾಗಿ ಬೆಸುಗೆಯಾಗಿದೆ. ಜಾತಿ ಹಾಗೂ ಲಿಂಗ ತಾರತಮ್ಯಗಳು ಯಾವ ಬಗೆಯ ಸಂವಹನ ಹಾಗೂ ಶ್ರೇಣೀಕೃತ ಅರ್ಥಗಳನ್ನು ಹಾಗೂ ಸಾಮಾಜಿಕ ಅಧಿಕಾರ ಕೇಂದ್ರಗಳನ್ನು ಅಳವಡಿಸಿಕೊಂಡಿವೆ ಎಂಬುದನ್ನು ಅಧಿಕಾರಿವರ್ಗ ಮತ್ತು ಪ್ರತಿಭಟನಕಾರವರ್ಗದವರ ಭಾಷೆ ಪರಸ್ಪರ ಸಾಮಾಜಿಕ ಸಂವಹನವನ್ನು ಮಾಡುತ್ತದೆ.

ಅಧಿಕಾರಿ ವರ್ಗ ಮತ್ತು ಪ್ರತಿಭಟನಕಾರವರ್ಗದವರ ಭಾಷೆ ಪರಸ್ಪರ ಸಾಮಾಜಿಕ ಸಂವಹನ ಮುರಿದುಬಿದ್ದರೆ ಇವರಿಬ್ಬರ ನಡುವೆ ನಡೆಯುವ ಒಂದು ಸಂವಹನಕ್ಕೆ ಒಂದು ಸಾಮಾಜಿಕ ಸಂವಹನ ಎಂದು ಕರೆಯಲಾಗುತ್ತದೆ. ಪ್ರಮುಖವಾಗಿ ಪ್ರತಿಭಟನಕಾರರ ಉದ್ದೇಶ ಅಧಿಕಾರಿ ವರ್ಗದವರಿಗೆ ಪರಿಣಾಮಕಾರಿಯಾಗಿ ಸಂವಹನಗೊಳ್ಳದಿದ್ದಲ್ಲಿ ಅಂತಹ ಸಂದರ್ಭದಲ್ಲಿ ಬಳಕೆಯಾಗುವ ಭಾಷೆಯೇ ಬೇರೆಯಾಗುತ್ತದೆ. ಅದೇ ರೀತಿಯಲ್ಲಿ ಅಧಿಕಾರಿ ವರ್ಗದವರು ಪ್ರತಿಭಟನಕಾರರ ಉದ್ದೇಶವನ್ನು

ಸರಿಯಾಗಿ ಗ್ರಹಿಸದೆ ಸಂವಹನಗೊಂಡಲ್ಲಿ ಅಂತಹ ಸಂದರ್ಭದಲ್ಲಿ ಬಳಕೆಯಾಗುವ ಭಾಷೆ ಬೇರೆಯಾಗಿರುತ್ತದೆ. ಅಂದರೆ ಸಾಮಾಜಿಕ ಸಂವಹನ ಎಂಬುದು ಆಡುಗ ಮತ್ತು ಕೇಳುಗನ ನಡುವೆ ನಡೆಯುವ ಒಂದು ಮಾಧ್ಯಮ ಎಂದೇ ಹೇಳಬಹುದು. ಅಧಿಕಾರಿವರ್ಗದವರು ಬಳಸುವ ಭಾಷೆಗೂ ಪ್ರತಿಭಟನಕಾರರು ಬಳಸುವ ಭಾಷೆಗೂ ವ್ಯತ್ಯಾಸವಿದೆ. ಈ ಎರಡು ವರ್ಗದವರು ಬಳಸುವ ಭಾಷೆ ಭಿನ್ನವಾಗಿರುತ್ತದೆ. ಹೋರಾಟದ ಪರಿಭಾಷೆ ಎಂದರೆ ಸಾಂದರ್ಭಿಕ ಭಾಷೆ ಎಂದೇ ತಿಳಿಯಬೇಕಾಗಿದೆ. ಏಕೆಂದರೆ ಆಯಾ ಸನ್ನಿವೇಶ, ಸಂದರ್ಭಕ್ಕೆ ಹೋರಾಟದ ವಸ್ತು ಮತ್ತು ಸ್ವರೂಪವನ್ನಾಧರಿಸಿ ಪರಿಭಾಷೆಗಳು ರೂಪಗೊಳ್ಳುತ್ತವೆ. ಈ ಹಿನ್ನೆಲೆಯಿಂದ ಅಧಿಕಾರಿವರ್ಗದ ಭಾಷೆ ಮತ್ತು ಪ್ರತಿಭಟನಕಾರನ ಭಾಷೆಯ ಸಾಮಾಜಿಕ ಸಂವಹನವನ್ನು ಹೋರಾಟಗಾರರು ಹೋರಾಟಗಳಲ್ಲಿ ಬಳಸುವ ಘೋಷಣೆಗಳ ಹಿನ್ನಲೆಯಲ್ಲಿ ಚರ್ಚಿಸಬಹುದು.

ಪ್ರತಿಭಟನಕಾರನ ಭಾಷೆ :

೧) ಆಡಳಿತ ವರ್ಗಕ್ಕೆ ದಿಕ್ಕಾರ .... ದಿಕ್ಕಾರ.

೨) ಹೋರಾಟ ಹೋರಾಟ .... ನ್ಯಾಯ ಸಿಗುವವರೆಗೂ ಹೋರಾಟ.

೩) ಬೇಕೇ ಬೇಕು .... ನ್ಯಾಯ ಬೇಕು.

೪) ಸಾಮ್ರಾಜ್ಯಶಾಹಿ ನಾಶವಾಗಲಿ .... ನಾಶವಾಗಲಿ.

೫) ದೌರ್ಜನ್ಯ, ದಬ್ಬಾಳಿಕೆ, ಶೋಷಣೆ .... ನಿಲ್ಲಲಿ ನಿಲ್ಲಲಿ.

೬) ಹೋರಾಟಕ್ಕೆ ಒಂದಾಗಿ .... ಒಂದಾಗಿ.

೭) ಹೋರಾಟಕ್ಕೆ ಮುಂದಾಗಿ .... ಮುಂದಾಗಿ.

೮) ಹೋರಾಟಕ್ಕೆ ಜಯವಾಗಲಿ .... ಜಯವಾಗಲಿ.

೯) ಐಕ್ಯತೆ ಚಿರಾಯುವಾಗಲಿ .... ಚಿರಾಯುವಾಗಲಿ.

೧೦) ಹೋರಾಟಕ್ಕೆ ಮುನ್ನುಗ್ಗೋಣ .... ಮುನ್ನುಗ್ಗೋಣ.

೧೧) ಭ್ರಷ್ಟರನ್ನು ತುಳಿಯೋಣ .... ತುಳಿಯೋಣ.

೧೨) ಹೋರಾಟ ಹೋರಾಟ .... ನಿತ್ಯ ಹೋರಾಟ.

೧೩) ಕಟ್ಟೋಣ ಕಟ್ಟೋಣ .... ಸಂಘಟನೆಯನ್ನು ಕಟ್ಟೋಣ.

೧೪) ಕ್ರಾಂತಿಕಾರಿಗಳು ನಾವು .... ನಮಗಿಲ್ಲ ಲೆಕ್ಕಕ್ಕೆ ಸಾವು ನೋವು.

೧೫) ಲಿಂಗ ತಾರತಮ್ಯ ಬೇಡವೇ .... ಬೇಡ.

೧೬) ಮಹಿಳೆಯರ ಮೇಲಿನ ನಿರ್ಲಕ್ಷ್ಯ ಬೇಡವೇ .... ಬೇಡ.

೧೭) ಮಹಿಳೆಯರ ಮೇಲಿನ ಅತ್ಯಾಚಾರಗಳು ನಿಲ್ಲಲಿ .... ನಿಲ್ಲಲಿ.

೧೮) ಮಹಿಳಾ ದಿನಾಚರಣೆ ನಡೆಯಲೇಬೇಕು .... ನಡೆಯಲೇಬೇಕು.

೧೯) ಭ್ರಷ್ಟರನ್ನು ಗಲ್ಲಿಗಾಕಿ .... ಗಲ್ಲಿಗಾಕಿ.

೨೦) ಮೂಢನಂಬಿಕೆಗಳಿಂದ ಮಹಿಳೆಯರನ್ನು ಬಿಡುಗಡೆ ಮಾಡಿ .... ಬಿಡುಗಡೆ ಮಾಡಿ.

೨೧) ಕೋಮುವಾದಿ ಸರಕಾರಕ್ಕೆ ದಿಕ್ಕಾರ .... ದಿಕ್ಕಾರ.

೨೨) ಮಹಿಳೆಯರಿಗೆ ರಕ್ಷಣೆಬೇಕು .... ರಕ್ಷಣೆಬೇಕು.

೨೩) ಕೋಮುವಾದ, ಬಂಡವಾಳಶಾಹಿ ಅಳಿಯಲಿ .... ಅಳಿಯಲಿ.

೨೪) ಭ್ರಷ್ಟರನ್ನು ಗಡಿಪಾರು ಮಾಡಿ .... ಗಡಿಪಾರು ಮಾಡಿ.

೨೫) ಹೋರಾಟ ಹೋರಾಟ .... ಬದುಕಿಗಾಗಿ ಹೋರಾಟ.

೨೬) ಪ್ರಾಣವನ್ನಾದರೂ ಕೊಟ್ಟೇವು .... ಭ್ರಷ್ಟರನ್ನು ಬಿಡೆವು.

೨೭) ಕನಿಷ್ಟ ವೇತನವನ್ನು ಕೊಡದ ಕಂಪನಿಗಳಿಗೆ ದಿಕ್ಕಾರ .... ದಿಕ್ಕಾರ.

೨೮) ಎಲ್ಲ ರೈತರು ಒಂದಾಗಿ .... ಒಂದಾಗಿ

ಭ್ರಷ್ಟರನ್ನು ಮೆಟ್ಟಲು ಮುಂದಾಗಿ .... ಮುಂದಾಗಿ.

೨೯) ಜನಪರ ಚಳುವಳಿಗಳು ಎಂದಿಗೂ ಸಾಯುವುದಿಲ್ಲ .... ಸಾಯುವುದಿಲ್ಲ.

೩೦) ಗೊಬ್ಬರ ಕೊಡದ ಗಬ್ಬು ಸರಕಾರಕ್ಕೆ ದಿಕ್ಕಾರ .... ದಿಕ್ಕಾರ.

೩೧) ಜಿಂದಾಬಾದ್ ಜಿಂದಾಬಾದ್ .... ಇಂಕ್ವಿಲಾಬ್ ಜಿಂದಾಬಾದ್.

೩೨) ಮುರ್ದಾಬಾದ್ ಮುರ್ದಾಬಾದ್ (ದಿಕ್ಕಾರ .... ದಿಕ್ಕಾರ).

೩೩) ಅಧಿಕಾರಿ ವರ್ಗಕ್ಕೆ ಡೌನ್ ಡೌನ್ (ದಿಕ್ಕಾರ .... ದಿಕ್ಕಾರ).

೩೪) we want .... justice (ನಮಗೆ ನ್ಯಾಯಬೇಕು).

೩೫) ಎ + ಬಿ + ... ಸರಕಾರ ಹೋಪ್ಲೆಸ್.

೩೬) ....ಡೌನ್ ಡೌನ್.

ಈ ಘೋಷಣೆಗಳಲ್ಲಿ ಬಳಕೆಯಾದ ಪ್ರತಿಭಟನಕಾರರ ಭಾಷೆಯು ಅಧಿಕಾರಿವರ್ಗವನ್ನು, ಆಡಳಿತವರ್ಗವನ್ನು, ಆಳಲ್ಪಟ್ಟ ಸರಕಾರವನ್ನು, ಮಹಿಳೆಯರು ಪರುಷಪ್ರಧಾನ ವ್ಯವಸ್ಥೆಯನ್ನು, ದಬ್ಬಾಳಿಕೆ, ದೌರ್ಜನ್ಯ, ಶೋಷಣೆ ಮುಂತಾದವುಗಳ ವಿರುದ್ಧವಾಗಿರುತ್ತದೆ. ಆಯಾ ಹೋರಾಟದ ವಲಯಗಳಲ್ಲಿಯ ಪ್ರತಿಭಟನಕಾರರು ಬಳಸುವ ಭಾಷೆ ಅಧಿಕಾರಿವರ್ಗ, ಬಂಡವಾಳಶಾಹಿ, ಸರಕಾರ, ಶೋಷಣೆಯ ವಿರುದ್ಧವೇ ಆಗಿರುತ್ತದೆ. ಹೋರಾಟದ ಅಥವಾ ಚಳುವಳಿಯ ಭಾಷೆ ಎಂದರೆ ಸಾಂದರ್ಭಿಕ ಭಾಷೆ ಎಂದೇ ತಿಳಿಯಬೇಕಾಗುತ್ತದೆ. ಏಕೆಂದರೆ ಹೋರಾಟದ ವಿವಿಧ ವಲಯಗಳಲ್ಲಿ ಪ್ರತಿಭಟನಕಾರರ ಭಾಷೆ ಹೋರಾಟದ ವಸ್ತು, ಸಂದರ್ಭ, ಸನ್ನಿವೇಶ ಮತ್ತು ಸ್ವರೂಪವನ್ನಾಧರಿಸಿರುತ್ತದೆ. ಹೋರಾಟಗಳಲ್ಲಿ ಪ್ರತಿಭಟನಕಾರರು ಘೋಷಣೆಗಳನ್ನು ಕೂಗುವ ಮೂಲ ಉದ್ದೇಶವೆಂದರೆ ಜನಸಾಮಾನ್ಯರಿಗೆ ಹೋರಾಟದ ವಿಷಯವನ್ನು ಜಾಗೃತಗೊಳಿಸುವುದು ಮತ್ತು ಪ್ರತಿಭಟನಕಾರರಿಗಾಗಿರುವ ಅನ್ಯಾಯ, ಅಸಮಾನತೆ, ದೌರ್ಜನ್ಯ, ದಬ್ಬಾಳಿಕೆ, ಶೋಷಣೆ ಮುಂತಾದ ದುಷ್ಕೃತ್ಯಗಳಿಂದ ಮುಕ್ತರಾಗುವುದು. ಈ ಹಿನ್ನೆಲೆಯಲ್ಲಿ ಪ್ರತಿಭಟನಕಾರರು ಹೋರಾಟಗಳಲ್ಲಿ ಘೋಷಣೆಗಳನ್ನು ಕೂಗುತ್ತಿರುತ್ತಾರೆ.

ಪ್ರತಿಭಟನಕಾರರು ಕೂಗುವ ಘೋಷಣೆಗಳು ಹೋರಾಟಕ್ಕೆ ಜೀವಾಳವಾಗಿರುತ್ತವೆ. ಹೋರಾಟದ ಮೂಲ ಧೋರಣೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಘೋಷಣೆಗಳು ಹೋರಾಟಕ್ಕೆ ತಕ್ಕಂತೆ ನಿರ್ಮಾಣವಾಗಿರುತ್ತವೆ. ಹೋರಾಟದಲ್ಲಿ ಕೂಗುವ ಘೋಷಣೆಗಳು ಪ್ರತಿಭಟನಕಾರರ ನೋವಿನ, ಶೋಷಣೆಯ ಅಭಿವ್ಯಕ್ತಿಯಾಗಿರುತ್ತವೆ. ಘೋಷಣೆಗಳನ್ನು ಹೋರಾಟದ ಹಾಡುಗಳಲ್ಲಿಯ ಕೆಲವೊಂದು ಸಾಲುಗಳನ್ನು ಎತ್ತಿಕೊಂಡು ಎಣೆಯುವುದು ಒಂದು ರೀತಿಯಾದರೆ, ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿ ಮಾಡುವುದು ಇನ್ನೊಂದು ರೀತಿಯಾಗಿರುತ್ತದೆ. ಈ ಘೋಷಣೆಗಳಲ್ಲಿ ಪ್ರತಿಭಟನಕಾರರು ತಮಗಾದ ಅನ್ಯಾಯವನ್ನು ಶೋಷಣೆಯನ್ನು ತೊಲಗಿಸಲು ಮತ್ತು ಕೇಳುಗರಿಗೆ ಅಥವಾ ಸಾಮಾಜಿಕರಿಗೆ ಪರಿಣಾಮಕಾರಿಯಾಗಿ ಜಾಗೃತಿಯನ್ನುಂಟು ಮಾಡಲು ಏಕ ವ್ಯಕ್ತಿ ಘೋಷಣೆಯನ್ನು ಕೂಗಿದ ನಂತರ ಅದಕ್ಕನುಗುಣವಾಗಿ ಇತರೆ ಪ್ರತಿಭಟನಕಾರರು ಕೂಗುವ ಕೋರಸ್ ಇನ್ನೂ ಪರಿಣಾಮಕಾರಿಯಾಗಿರುತ್ತದೆ. ಪ್ರತಿಭಟನಾಕಾರರು ಬೀದಿಗಳಲ್ಲಿ (ಜಾಥಾ ಹೋಗುವಾಗ) ಧರಣಿ ನಿರತರಾದಾಗ ಕೂಗುವ ಘೋಷಣೆಗಳು ಒಂದು ರೀತಿಯ ಪರಿಣಾಮವನ್ನುಂಟು ಮಾಡಿದರೆ, ಅಧಿಕಾರಿ ವರ್ಗದ ಎದುರಿಗೆ ಕೂಗುವ ಘೋಷಣೆಗಳಾಗಲಿ ಅಥವಾ ಅವರೊಂದಿಗಿನ ಸಂವಹನವಾಗಲಿ ಇನ್ನೂ ಪರಿಣಾಮಕಾರಿ ಯಾಗಿರುತ್ತದೆ. ಪ್ರತಿಭಟನಕಾರರು ಹೋರಾಟಗಳಲ್ಲಿ ಕನ್ನಡದ ದೇಶೀಯ ಪದಗಳನ್ನಲ್ಲದೆ ಇಂಗ್ಲೀಷ್, ಹಿಂದಿ ಭಾಷೆಯ ಪದಗಳನ್ನು ಹೋರಾಟದ ಘೋಷಣೆಗಳಲ್ಲಿ ಬಳಸುತ್ತಾರೆ. ಅನ್ಯಭಾಷಾ ಪದಗಳನ್ನು ಹೋರಾಟಗಳಲ್ಲಿ ಬಳಸುವ ಮೂಲ ಉದ್ದೇಶವೆಂದರೆ ಕೇಳುಗರಿಗೆ ಹೋರಾಟದ ಪರಿಣಾಮವುಂಟು ಮಾಡುವುದಾಗಿರುತ್ತದೆ. ಅದರಲ್ಲೂ ಬ್ಯಾಂಕ್ ನೌಕರರು, ಅಂಚೆ ಇಲಾಖೆಯವರು, ಎಲ್.ಐ.ಸಿ. ನೌಕರರು, ಕಂಪನಿಯ ಕೆಲಸಗಾರರು, ಕಾರ್ಖಾನೆಯ ಕೆಲಸಗಾರರು, ಶಿಕ್ಷಣ ಇಲಾಖೆಯವರು ಮುಂತಾದ ದುಡಿಯುವ ನೌಕರಿ ವರ್ಗದವರು ವಿಶೇಷವಾಗಿ ಇಂಗ್ಲೀಷ್ ಮತ್ತು ಹಿಂದಿಯ ಕೆಲವೊಂದು ಪದಗಳನ್ನು ಮಾತ್ರ ಬಳಸುವುದು ಕಂಡುಬರುತ್ತದೆ. ಆದರೆ ಎಡಪಂಥೀಯ ಚಳುವಳಿಗಳಲ್ಲಿ ಅಥವಾ ಹೋರಾಟಗಳಲ್ಲಿ ಅನ್ಯಭಾಷಾ ಪದಗಳ ಬಳಕೆ ತುಂಬಾ ಕಡಿಮೆ ಎಂದು ಹೇಳಬಹುದು. ಇನ್ನು ರಾಜ್ಯದ ಗಡಿ ಪ್ರದೇಶಗಳಲ್ಲಿ ದ್ವಿಭಾಷಿಕತೆ ಮತ್ತು ಬಹುಭಾಷಿಕತೆ ಇರುವುದರಿಂದ ಅಂಥ ಪ್ರದೇಶಗಳಲ್ಲಿ ಬಹುಸಂಖ್ಯಾತರು ಮಾತಾಡುವ ಭಾಷಾ ಪದಗಳನ್ನು ಘೋಷಣೆಗಳಲ್ಲಿ ಬಳಸುವುದು ಕಂಡು ಬರುತ್ತದೆ. ಅಂಥ ಘೋಷಣೆಗಳು ಆಯಾ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುತ್ತದೆ. **ಉದಾಹರಣೆಗೆ** : ಕರ್ನಾಟಕ–ಆಂಧ್ರಪ್ರದೇಶದ ಗಡಿಭಾಗ, ಕರ್ನಾಟಕ–ಮಹರಾಷ್ಟ್ರ ಗಡಿಭಾಗ, ಕರಾವಳಿ ಪ್ರದೇಶದ ಬಂದರುಗಳಲ್ಲಿ, ಕಾಫಿಸೀಮೆ ಮುಂತಾದ ಬಹುಸಂಖ್ಯಾತ ಕಾರ್ಮಿಕ ವರ್ಗದವರು ವಾಸಿಸುವ ಪ್ರದೇಶಗಳಲ್ಲಿ ಹೋರಾಟದ ಘೋಷಣೆಗಳಲ್ಲಿ ಅನ್ಯ ಭಾಷಾ ಪದ ಪ್ರಯೋಗಗಳನ್ನು ಬಳಸುವುದು ಕಂಡು ಬರುತ್ತದೆ.

ಅಧಿಕಾರಿ ವರ್ಗದ ಭಾಷೆ :

ಪ್ರತಿಭಟನಕಾರರ ಭಾಷೆ ಅಧಿಕಾರಿ ವರ್ಗದ ಭಾಷೆಯಾಗಿ ಪರಿವರ್ತನೆ ಆಗುವ ಸಾಧ್ಯತೆಯಿದೆ. ಆದರೆ ಅಧಿಕಾರಿ ವರ್ಗದ ಭಾಷೆ ಪ್ರತಿಭಟನಕಾರರ ಭಾಷೆಯಾಗಿ ಬದಲಾವಣೆ ಆಗುವ ಸಂದರ್ಭ ತುಂಬ ಕಡಿಮೆ. ಪ್ರತಿಭಟನೆ ಭಾಷೆ ಸಾಮಾಜಿಕ ಸಂವಹನ ಪರಿಣಾಮಕಾರಿ ಆಗುವುದು ಯಾವಾಗ

ಅಂದರೆ ಪ್ರತಿಭಟನಕಾರ ಭಾಷೆ ಮತ್ತು ಅಧಿಕಾರಿ ವರ್ಗದ ಭಾಷೆ ಪರಸ್ಪರ ಅರ್ಥವಾದಾಗ. ಉಳಿದಂತೆ ಇವರಿಬ್ಬರ ನಡುವಿನ ಸಂವಹನ ಮುರಿದು ಬೀಳುತ್ತದೆ. ಅಧಿಕಾರಿ ಪ್ರತಿಭಟನಕಾರನಾಗಿ ಪಾತ್ರವಹಿಸಿರಬಹುದು. ಆದರೆ ಎಲ್ಲಾ ಪ್ರತಿಭಟನಕಾರರು ಅಧಿಕಾರಿಗಳು ಆಗುವುದಕ್ಕೆ ಸಾಧ್ಯವಿಲ್ಲವೆನಿಸುತ್ತದೆ. ಏನು ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆಂದರೆ ಪ್ರತಿಭಟನಕಾರನಿಗೆ ಒಂದು ಭಾಷೆ ಇರುವಾಗ; ಅಧಿಕಾರದ ಭಾಷೆ ಒಂದಿದೆಯೇ ಎಂಬುದು ಗಮನಿಸುವಂತಹ ಅಂಶ. ಅಧಿಕಾರದ ಭಾಷೆ ಯಾವಾಗಲೂ ನೀಡುವ ಭಾಷೆಯಾಗಿರುತ್ತದೆ. ಪ್ರತಿಭಟನಕಾರನ ಭಾಷೆ ಯಾವಾಗಲೂ ಬೇಡುವ ಭಾಷೆಯಾಗಿರುತ್ತದೆ. ಅಧಿಕಾರದ ಭಾಷೆ ಪ್ರಭುತ್ವದಿಂದ ಕೂಡಿದರೆ, ಪ್ರತಿಭಟನಾಕಾರನ ಭಾಷೆ ಅಧೀನತೆಯಿಂದ ಕೂಡಿರುತ್ತದೆ. ಅಧಿಕಾರಿಯು ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡುವಾಗ ನಾನು ಸರ್ಕಾರಕ್ಕೆ ಬರೆಯುತ್ತೇನೆ, ನಿಮ್ಮ ಮನವಿ ಪತ್ರಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ನಿಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ, ನಿಮ್ಮ ಸಮಸ್ಯೆಗಳನ್ನು ಪರಿಶೀಲಿಸುತ್ತೇನೆ ಮುಂತಾದ ಮಾತುಗಳನ್ನು ಬಳಕೆ ಮಾಡುತ್ತಾನೆ. ಇಲ್ಲಿ ಸರ್ಕಾರ ಅಂದರೆ ಅಧಿಕಾರಿಯ ಮೇಲಿನ ಅಧಿಕಾರಿಯೇ ಹೊರತು ಮತ್ತೇನು ಅಲ್ಲ. ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡುವಾಗ ಏಕವಚನ ಬಳಕೆ ತುಂಬ ಕಡಿಮೆ. ಎಲ್ಲವನ್ನು ಬಹುವಚನದಲ್ಲಿ ನಿರ್ವಹಿಸಬೇಕಾಗುತ್ತದೆ. ಒಂದು ವೇಳೆ ಸರ್ವಾಧಿಕಾರದ ಮಾದರಿಯ ಭಾಷೆಯನ್ನು ಬಳಕೆ ಮಾಡಿದರೆ ಪ್ರತಿಭಟನಕಾರನ ಭಾಷೆಯಲ್ಲಿ ಬದಲಾವಣೆ ಆಗುತ್ತದೆ.

ಅಧಿಕಾರಿ ವರ್ಗದ ಭಾಷೆಯು ಆಶ್ವಾಸನೆ ಮತ್ತು ಭರವಸೆಗಳಿಂದ ಕೂಡಿರುತ್ತದೆ. ಅಧಿಕಾರಿ ವರ್ಗವು ಪ್ರತಿಭಟನೆಯ ನೇತೃತ್ವ ವಹಿಸಿಕೊಂಡು ಮುಖಂಡರೊಂದಿಗಿನ ಸಂವಹನವು ಬಹುವಚನದಿಂದ ಕೂಡಿರುತ್ತದೆ. ಪ್ರತಿಭಟನಕಾರರ ಮುಂದೆ ಅಧಿಕಾರಿ ವರ್ಗದ ಭಾಷೆಯು ಆಶ್ವಾಸನೆ ಮತ್ತು ಭರವಸೆಗಳಿಂದ ಕೂಡಿರುತ್ತದೆ. ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡುವಾಗ ನಾನು ಸರಕಾರಕ್ಕೆ ಪತ್ರ ಬರೆಯುತ್ತೇನೆ. ನಿಮ್ಮ ಮನವಿ ಪತ್ರಗಳನ್ನು ಸರಕಾರದ ಗಮನಕ್ಕೆ ತರುತ್ತೇನೆ, ನಿಮ್ಮ ಸಮಸ್ಯೆಗಳನ್ನು ಪರಿಶೀಲಿಸುತ್ತೇನೆ, ನಿಮ್ಮ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮುಕ್ತವಾಗಿ ಚರ್ಚಿಸುತ್ತೇನೆ, ಅದಕ್ಕಾಗಿ ತನಿಖಾದಳವೊಂದು ರಚಿಸುತ್ತೇನೆ ಮುಂತಾದ ಮಾತುಗಳನ್ನು ಬಳಕೆ ಮಾಡುತ್ತಾನೆ. ಇಲ್ಲಿ ಸರಕಾರ ಅಂದರೆ ಅಧಿಕಾರಿಯ ಮೇಲಿನ ಅಧಿಕಾರಿಯೇ ಹೊರತು; ಬೇರೇನು ಅಲ್ಲ. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುವಾಗ ಸರ್ವಾಧಿಕಾರದ ಮಾದರಿಯ ಭಾಷೆಯನ್ನು ಬಳಸದೆ ಎಲ್ಲವನ್ನು ಬಹುವಚನದಲ್ಲಿ ನಿರ್ವಹಿಸಬೇಕಾಗುತ್ತದೆ. ಹಾಗಾದಾಗ ಅಧಿಕಾರಿ ವರ್ಗ ಮತ್ತು ಪ್ರತಿಭಟನಕಾರರ ನಡುವಿನ ಸಂವಹನ ಔಚಿತ್ಯವಾಗಿರುತ್ತದೆ. ಒಂದು ವೇಳೆ ಈ ಸಂವಹನ ಮುರಿದು ಬಿದ್ದರೆ ಈರ್ವರ ನಡುವೆ 'ಘರ್ಷಣೆಗಳು' ನಡೆಯಲು ದಾರಿಯಾಗುತ್ತದೆ.

ಅಧಿಕಾರಿಯ ಭಾಷೆ ಹೋರಾಟಗಳಿಗನುಗುಣವಾಗಿ ಭಿನ್ನವಾಗಿರುವುದನ್ನು ನೋಡಬಹುದು. ದಲಿತರು ದಲಿತರ ಹೋರಾಟಕ್ಕೆ ಸಂಬಂದಿಸಿದಂತೆ ಪ್ರತಿಕ್ರಿಯಿಸುವ ಅಧಿಕಾರಿ ಭಾಷೆಗೂ ಮಹಿಳೆ ಮತ್ತು ಇನ್ನಿತರ ಹೋರಾಟಗಳಿಗೂ ಪ್ರತಿಕ್ರಿಯಿಸುವ ಅಧಿಕಾರಿ ಭಾಷೆಗೂ ವ್ಯತ್ಯಾಸವಾಗುವುದನ್ನು ನೋಡಬಹುದಾಗಿದೆ. ಮಹಿಳಾ ಪ್ರತಿಭಟನಕಾರರೊಂದಿಗೆ ಅಧಿಕಾರಿವರ್ಗವು ಆಶ್ವಾಸನೆ, ಭರವಸೆಗಳನ್ನು

ಕೊಟ್ಟರೂ ಕೂಡ ಅವುಗಳು ಪ್ರತಿಭಟನೆಯನ್ನು ಹಿಂತೆಗೆಯುವಂತೆ ಪ್ರೇರೇಪಿಸುತ್ತವೆ. ಅಧಿಕಾರಿವರ್ಗದ ಪ್ರೇರಣೆಯ ಮೇರೆಗೆ ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದರ ಜೊತೆಗೆ ಇಷ್ಟು ದಿನಗಳೊಳಗಾಗಿ ನಮ್ಮ ಸಮಸ್ಯೆಗಳನ್ನು, ಬೇಡಿಕೆಗಳನ್ನು ಬಗೆಹರಿಸದಿದ್ದರೆ ರಾಜ್ಯಾದ್ಯಾಂತ ಉಗ್ರ ಹೋರಾಟವನ್ನು ಅನಿರ್ಧಿಷ್ಟ ಕಾಲದವರೆಗೆ ಸತ್ಯಾಗ್ರಹವನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂಬ ಮಾತುಗಳಲ್ಲಿ ಅಧಿಕಾರಿ ವರ್ಗಕ್ಕೆ ಪ್ರತಿಭಟನಕಾರ ವರ್ಗವು ಎಚ್ಚರಿಕೆಯನ್ನು ಕೊಡಲಾಗುತ್ತದೆ. ಹೀಗೆ ಪ್ರತಿಭಟನಕಾರರ ಘೋಷಣೆಗಳಿಂದ ಮತ್ತು ಅಧಿಕಾರಿ ವರ್ಗದವರ ಆಶ್ವಾಸನೆ ಮತ್ತು ಭರವಸೆಗಳ ಹಿನ್ನೆಲೆಯಲ್ಲಿ ಪರಿಭಾಷೆಯ ಸಾಮಾಜಿಕ ಸಂವಹನವನ್ನು ಕಂಡುಕೊಳ್ಳಬಹುದು.

ಅಧ್ಯಾಯ-೧೦

ವಿವಿಧ ಹೋರಾಟಗಳ ಹೊಸ ಪರಿಭಾಷೆ ರಚನೆಯ ಸ್ವರೂಪ

ಅಧ್ಯಾಯ-೧೦

ವಿವಿಧ ಹೋರಾಟಗಳ ಹೊಸ ಪರಿಭಾಷೆ ರಚನೆಯ ಸ್ವರೂಪ

ಮಾಹಿತಿ ತಂತ್ರಜ್ಞಾನದ ಪ್ರಭಾವದಿಂದ ಇತ್ತೀಚಿನ ದಿನಗಳಲ್ಲಿ ಕನ್ನಡ ಬಳಕೆಯು ಮಾಧ್ಯಮಗಳಲ್ಲಿ ಬಹು ಎಚ್ಚರದಿಂದ ಹೊಸಹೊಸದಾಗಿ ಬಳಕೆಯಾಗುತ್ತವೆ. ಯಾವುದೇ ಜೀವಂತ ಭಾಷೆಯ ಶಬ್ದಸಂಪತ್ತು ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಳಗಾಗುತ್ತದೆ. ಇದು ಜೀವಂತ ಭಾಷೆಯ ಲಕ್ಷಣ. ಪದಲೋಕ ಎಂಬುದು ತುಂಬಾ ಸ್ವಾರಸ್ಯವಾದುದು, ಅಷ್ಟೇ ಸಂಕೀರ್ಣವಾದದ್ದು. ಹೋರಾಟದ ಲೋಕವನ್ನು ಪರಿಚಯ ಮಾಡಿಕೊಡಬೇಕಾದರೆ ಈಗಾಗಲೆ ಇರುವ ಪದಗಳಿಗಿಂತ ಹೋರಾಟದ ತೀವ್ರತೆಯನ್ನು ಬಿಂಬಿಸಲು ಅನೇಕ ಹೊಸ ಪದಗಳನ್ನು ಮಾಧ್ಯಮಗಳು ಸೃಷ್ಟಿ ಮಾಡುತ್ತಿರುವುದು ನಮಗೆಲ್ಲ ತಿಳಿದಿರುವ ವಿಚಾರ. ಇಂತಹ ಸಂದರ್ಭದಲ್ಲಿ ಅವುಗಳ ಬಳಕೆಯ ಸ್ವರೂಪವನ್ನು ಒಂದೆಡೆ ಸಂಗ್ರಹಿಸುವುದು ಇಲ್ಲಿನ ಉದ್ದೇಶವಾಗಿದೆ. ಹೋರಾಟದ ಹೊಸಪರಿಭಾಷೆಯ ಪದಗಳನ್ನು ಆಯಾ ಹೋರಾಟಕ್ಕನುಗುಣವಾಗಿ ವರ್ಗೀಕರಣ ಮಾಡದೆ ಒಟ್ಟಾರೆಯಾಗಿ ಪದಗಳನ್ನು ನೀಡಲಾಗಿದೆ.

ಪರಿಭಾಷೆಯ ರಚನೆ ನಿಯಮಗಳು ಅಥವಾ ಪರಿಭಾಷೆ ರೂಪಿಸುವ ಕ್ರಮ :

ಅದಲಿತ : ದಲಿತರಲ್ಲದ ದಲಿತೇತರ.

ಪದದ ನೇತ್ಯಾತ್ಮಕ ಅರ್ಥ ಪಡೆಯಲು ಬಹು ಸುಲಭ ಮಾರ್ಗ 'ಅ' ಪೂರ್ವ ಪ್ರತ್ಯಯ ಬಳಕೆಯಾಗಿದೆ. ಮಾದರಿ : ಜಾತ್ಯತೀತ, ಅಜಾತ್ಯತೀತ 'ನಾನ್ ದಲಿತ' ಪದಕ್ಕೆ ಸಂವಾದಿಯಾಗಿ ಮೇಲಿನ ಪದವನ್ನು ರಚನೆ ಮಾಡಲಾಗಿದೆ.

ಅಧಿಕಾರೀಕರಣ : ಅಧಿಕಾರ ಮಾಡುವುದು.

ಬ್ಯೂರೋಕ್ರಸಿ ಸಂವಾದಿಯಾಗಿ ಪದವನ್ನು ಬಳಸಿರಬಹುದು. ಇತ್ತೀಚೆಗೆ 'ಈಕರಣ' ಪ್ರತ್ಯಯ ಹಚ್ಚಿ ಅನೇಕ ಪದಗಳನ್ನು ಸೃಷ್ಟಿಸಲಾಗುತ್ತಿದೆ. ಆ ಮಾದರಿಗೆ ಇದೊಂದು ಸೇರ್ಪಡೆ.

ಎಡಪಂಥೀಕರಣ : ಎಡಪಂಥದ ವಿಚಾರ.

ಇಂಗ್ಲೀಷಿನ 'ಐಸೇಶನ್'ಗೆ ಸಂವಾದಿಯಾಗಿ 'ಈಕರಣ' ಪ್ರತ್ಯಯವನ್ನು ಬಳಕೆ ಮಾಡಲಾಗುತ್ತಿದೆ. ಸಾಧ್ಯ: ಬಲಪಂಥೀಕರಣ.

ಕೂಗುವೀರ : ಹೋರಾಟಗಾರ.

ಅನ್ಯಾಯ, ಅಕ್ರಮ, ಭ್ರಷ್ಟ ವ್ಯವಸ್ಥೆ ವಿರುದ್ಧ ಹೋರಾಡುವಂತಹ ಜನರನ್ನು ಹೋರಾಟಗಾರ ಅಥವಾ ಚಳವಳಿಗಾರ ಎಂದು ಕರೆಯುವುದು ರೂಢಿ. ಇದೇ ಅರ್ಥದಲ್ಲಿ ಮೇಲಿನ ಪದವನ್ನು ರಚನೆ ಮಾಡಲಾಗಿದೆ. ಕೂಗಾಟ ಮಾಡುವುದರಲ್ಲಿ ವೀರ.

ಕೋಮುವಾದೀಕರಣ : ಜಾತಿಪರವಾಗಿ ವಾದ ಮಾಡುವವರು/ನು ಇಂಗ್ಲೀಷಿನ 'ಕಮ್ಯುನಲೈಷನ್'ಗೆ ಸಂವಾದಿಯಾಗಿ ಬಳಕೆಯಾಗಿರುವ ಪದ. 'ಈಕರಣ' ಪ್ರತ್ಯಯವನ್ನು ಬಳಸಿ ಕನ್ನಡದಲ್ಲಿ ಈಚಗೆ ಇಂತಹ

ಬರವಣಿಗೆ ರೂಪಗಳನ್ನು ರಚಿಸಿ ಬಳಸಲಾಗುತ್ತಿದೆ. ಮಾದರಿ : ಉದಾರೀಕರಣ, ಖಾಸಗೀಕರಣ, ವ್ಯಾಪಾರೀಕರಣ, ಜಾಗತೀಕರಣ.

ಗುಲಾಮೀಕರಣ : ಗುಲಾಮ ಸ್ಥಿತಿ ತಲುಪುವುದು. ಗುಲಾಮಿತನಕ್ಕೆ ಒಳಗಾಗುವುದು. 'ಗುಲಾಮ' ಪದಕ್ಕೆ 'ಈಕರಣ' ಪ್ರತ್ಯಯ ಹತ್ತಿಸಿ ಬಳಕೆ ಮಾಡಲಾಗಿದೆ. ಮಾದರಿ : ಜಾಗತೀಕರಣ, ಖಾಸಗೀಕರಣ.

ದಲ್ಲಾಳಿತನ : ಮಧ್ಯವರ್ತಿ ಕೆಲಸ.

ದಲ್ಲಾಳಿ ಪದ ಈಗಾಗಲೆ ಬಳಕೆಯಲ್ಲಿದೆ. ಇಲ್ಲಿ ನಾಮಪದ ರೂಪಕ್ಕೆ 'ತನ' ಪ್ರತ್ಯಯ ಸೇರಿ ಬಳಕೆ ಮಾಡಲಾಗಿದೆ.

ದಲಿತತ್ವ : ದಲಿತರ ಬಗೆಗೆ ಅಭಿಮಾನವನ್ನು ಹೊಂದಿರುವುದು.

'ದಲಿತ' ಪದಕ್ಕೆ 'ತ್ವ' ಪ್ರತ್ಯಯ ಸೇರಿಸಿ ರಚಿಸಲಾಗಿದೆ. ಸಾಧ್ಯರೂಪ 'ದಲಿತತನ'.

ಪ್ರತಿಭಟನಾಕೋರ : ಪ್ರತಿಭಟನೆ ಮಾಡುವ ವ್ಯಕ್ತಿ.

'ಕೋರ' ಎಂಬ ಸಾಧಕ ಪ್ರತ್ಯಯ ಪರ್ಸೋ ಅರಾಬಿಕ್ ಮೂಲದ್ದು. ಅದನ್ನಿಲ್ಲಿ 'ಪ್ರತಿಭಟನೆ' ಪದಕ್ಕೆ ಹತ್ತಿಸಿ ಹೊಸ ರೂಪವೊಂದನ್ನು ರಚನೆ ಮಾಡಲಾಗಿದೆ. 'ಕೋರ' ಪ್ರತ್ಯಯಕ್ಕಿರುವ ತಿರಸ್ಕಾರ ಸೂಚಕತೆಯನ್ನು ಬಳಸಿಕೊಳ್ಳಲು ಈ ರೂಪವನ್ನು ಪಡೆದುಕೊಂಡಂತೆ ತೋರುತ್ತದೆ. ಮಾದರಿ : ಲಂಚಕೋರ, ದೌರ್ಜನ್ಯಕೋರ.

ಭ್ರಷ್ಟಾಸುರ : ಭ್ರಷ್ಟತೆಗೆ ಹೆಸರುವಾಸಿಯಾದವ.

ಬಕಾಸುರ, ರಾವಣಾಸುರ, ಮಾದರಿಯಲ್ಲಿ ರಚನೆ ಮಾಡಲಾಗಿದೆ.

ಮಹಿಳೋದಯ : ವಿವಿಧ ವಲಯಗಳಲ್ಲಿ ಮಹಿಳೆಯ ಅಭಿವೃದ್ಧಿ. ಜವಾಬ್ದಾರಿಗಳನ್ನು ನಿಭಾಯಿಸಲು ಮಹಿಳೆಯರೇ ಕಂಡುಕೊಂಡ ದಾರಿ ಮಹಿಳೋದಯ. ಮಹಿಳೆ + ಉದಯ ಎಂಬ ಎರಡು ಪದಗಳು ಸೇರಿ ಸಂಧಿ ಕ್ರಿಯೆಗೆ ಅನುಗುಣವಾಗಿ ಬಂದಿರುವ ಪದ.

ಹೆಣ್ಣತ್ವ : ಹೆಣ್ಣುತನ, ಧೀರ್ಘಕಾಲದ ಪರಿಣಾಮ : ಹೆಣ್ಣುಮಕ್ಕಳಾದರೆ ತಮ್ಮ ಹೆಣ್ಣತ್ವ ಹಾಳಾಯಿತು. 'ಪುರಷತ್ವ' ಮಾದರಿಯಲ್ಲಿ ಪದರಚನೆ ಮಾಡಲಾಗಿದೆ. ಸಾಧ್ಯತೆ : ಗಂಡತ್ವ

ಲೆಪ್ಪೀಕರಣ : ಎಡಪಂಥೀಯ ವಿಚಾರ.

'ವೈದ್ಯ ಪ್ರಪಂಚವನ್ನು ಅಚ್ಚರಿಯಲ್ಲಿ ಕೆಡವಿದ ಮಹತ್ವದ ಸಂಶೋಧನೆಯೇ ಪ್ಲಾಸ್ಟಿನೇಶನ್. ಅಚ್ಚಗನ್ನಡದಲ್ಲಿ ಇದನ್ನೇ ಲೆಪ್ಪೀಕರಣ ಎನ್ನುತ್ತಾರೆ. ಇಂಗ್ಲೀಷಿನ ಪ್ಲಾಸ್ಟಿನೇಶನ್ ಪದಕ್ಕೆ ಸಂವಾದಿಯಾಗಿ ಲೆಪ್ಪೀಕರಣ ಪದವನ್ನು ಪ್ರಯೋಗ ಮಾಡಲಾಗಿದೆ.

ಆತ್ಮದಹನ : ಆತ್ಮಹತ್ಯೆ ಮಾಡಿಕೊಳ್ಳುವ. 'ಸಾಲದ ಬಾಧೆ : ರೈತನ ಆತ್ಮದಹನ' ಇಂಗ್ಲೀಷಿನ ಸೂಯಿಸೈಡ್ ಎಂಬುದರ ಸಂವಾದಿಯಾಗಿ ಬಂದಿದೆ. ಆತ್ಮಹತ್ಯೆ ಪದ ಈಗಾಗಲೇ ಬಳಕೆಯಲ್ಲಿದೆ. ಮೇಲಿನ ಪದ ಪ್ರತಿಕೃತಿದಹನ, ಭೂತದಹನ, ಸಜೀವದಹನ, ಮಾದರಿಯಲ್ಲಿ ಬಳಸಲಾಗಿದೆ.

ಆಂದೋಲನಗಾರ : ಕ್ರಾಂತಿ ನಡೆಸುವವ, ಚಳುವಳಿ ನಡೆಸುವವ. ಯಾವುದಾದರು ಒಂದನ್ನು ಮಾಡಬಲ್ಲ ಎಂಬುದನ್ನು ಸೂಚಿಸಲು 'ಗಾರ' ನಾಮಸಾಧಕ ಪ್ರತ್ಯಯ ಬಳಸಲಾಗುತ್ತದೆ. ಮೇಲಿನ ಪ್ರಯೋಗದ ಸಮನಾರ್ಥಕವಾಗಿ 'ಚಳುವಳಿಕಾರ' ಪದ ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಕೃಷಿಗಾರಿಕೆ: ವಿಭಿನ್ನ ಮಾದರಿಯ ಸಾಗುವಳಿ ದಾವಣಗೆರೆಯ ಡಾ.ಎಂ.ಕೆ ರೇಣುಕಾರ್ಯರವರೇ ಈ ಫಾರ್ಮಿನ ನಿಜವಾದ ರುವಾರಿಗಳು. ಹಾಗಿದ್ದರೆ ಈ ಕೃಷಿಗಾರಿಕೆಯ ಹೆಚ್ಚುಗಾರಿಕೆಯಾದರೂ ಏನು............. ತೋಟಗಾರಿಕೆ, ಹೈನುಗಾರಿಕೆ ಮಾದರಲ್ಲಿಯಲ್ಲಿ ಬಂದಿರುವ ಪದ. ವಿಶೇಷವಾದ ಜ್ಞಾನವನ್ನು ಬಳಸಿಕೊಂಡು ನಡೆಸುವ ಕೃಷಿಯಾದ್ದರಿಂದ ಇಲ್ಲಿ 'ಗಾರಿಕೆ' ಪ್ರತ್ಯಯ (ಗಾರ+ಇಕೆ) ಬಳಸಾಗಿದೆ. ಆದರೆ ಕೃಷಿಗಾರ ಪದವಿಲ್ಲವೆಂಬುದನ್ನು ಗಮನಿಸಬಹುದು.

ದಲಿತೆ : ಶೋಷಣೆಗೆ ಒಳಗಾದ ಮಹಿಳೆ, ಕೆಳವರ್ಗದ ಮಹಿಳೆ. ಗುಣವಾಚಕವಾಗಿ ಬಂದ 'ದಲಿತ' ಪದ ನಂತರ ಪುಲ್ಲಿಂಗ ಸೂಚಕ ನಾಮಪದವಾಗಿ ಬಳಕೆಯಾಯಿತು. ಈಗ ಸ್ತ್ರೀವಾಚಕವಾಗಿ ಮೇಲಿನ ಪ್ರಯೋಗದಲ್ಲಿ ಬಳಕೆಯಾಗಿದೆ.

ಧರಣಿಕಾರ : ತಮ್ಮ ಕೋರಿಕೆಯ ಈಡೇರಿಕೆಗಾಗಿ ಪಟ್ಟು ಬಿಡದೆ ಧರಣಿಯಲ್ಲಿ ನಿರತರಾದವರು, ಕುಳಿತಿರುವವರು. 'ಕಾರ' ಪ್ರತ್ಯಯ ಸಂಸ್ಕೃತ/ಕನ್ನಡ ಪದಗಳೊಂದಿಗೆ ಬಂದು ಹೊಸ ಪದಗಳ ಸೃಷ್ಟಿಗೆ ಕಾರಣವಾಗುತ್ತದೆ. ಕನ್ನಡದಲ್ಲಿ ಬಳಕೆಯಲ್ಲಿರುವ ಇನ್ನಿತರ ಭಾರತೀಯ ಭಾಷಾ ಪದಗಳೊಂದಿಗೂ ಇಂದು ಬಳಕೆಯಾಗುತ್ತಿದೆ. ಹಿಂದಿಯ 'ಧರನಾ' ಕನ್ನಡದಲ್ಲಿ 'ಧರಣಿ'ಯಾಗಿ ಮಾರ್ಪಟ್ಟು 'ಕಾರ'ದೊಂದಿಗೆ ಬಂದಿದೆ. ಸಾಮಾನ್ಯವಾಗಿ 'ಧರಣಿಯಲ್ಲಿ ನಿರತ' ಎಂಬುದಾಗಿ ವಿವರಣಾತ್ಮಕವಾಗಿಯೇ ಬಳಕೆಯಾಗುತ್ತಿತ್ತು.

ಬಂಡವಾಳೀಕರಣ : ಬಂಡವಾಳ ತುಂಬಿಸುವುದು.

'ಈಕರಣ' ಪ್ರತ್ಯಯ ಬಳಕೆಗೆ ಉದಾಹರಣೆ.

ಬಾಲಕಾರ್ಮಿಕತೆ : ಮಕ್ಕಳ ದುಡಿಮೆ, ಮಕ್ಕಳಿಂದ ದುಡಿಸಿಕೊಳ್ಳುವಿಕೆ.

ಕಾರ್ಮಿಕ ಪದದಿಂದ ಸೃಷ್ಟಿಯಾದ ಬಾಲಕಾರ್ಮಿಕಕ್ಕೆ 'ತೆ' ಪ್ರತ್ಯಯ ಸೇರಿಸಿ ನಾಮಪದ ರಚನೆ ಮಾಡಲಾಗಿದೆ. ಆದರೆ ಮೂಲ ಪದದ ನಾಮಪದ ರೂಪ 'ಕಾರ್ಮಿಕತೆ' ಸೃಷ್ಟಿಯಾಗಿಲ್ಲ ಎಂಬುದನ್ನು ಗಮನಿಸಬಹುದು.

ಯಜಮಾನಶಾಹಿ : ಯಜಮಾನನ ಆಡಳಿತ, ಸರ್ವಾಧಿಕಾರಿ ಮಾದರಿ ಆಡಳಿತ. 'ಶಾಹಿ' ಪದ ಬಳಸಿ 'ಆಡಳಿತ' ಎಂಬರ್ಥ ಪಡೆಯಲಾಗುತ್ತದೆ. ಮಾದರಿ : ವಸಾಹತುಶಾಹಿ, ನೌಕರಶಾಹಿ, ಬಂಡವಾಳಶಾಹಿ.

ವಸೂಲಿದಾರ : ಕೊಡಬೇಕಾದ ಹಣ, ತೆರಿಗೆ ಇತ್ಯಾದಿಗಳನ್ನು ಒತ್ತಾಯದಿಂದ ಪಡೆದುಕೊಳ್ಳುವವ. 'ದಾರ' ಪತ್ಯಯದೊಡನೆ ಬಂದಿರುವ ಹೊಸ ಪದ.

ಸರ್ವಾಧಿಕಾರಿತನ : ಎಲ್ಲ ಅಧಿಕಾರಿಗಳ ಹಿಡಿತ.

'ತನ' ಅಥವಾ 'ತೆ' ಪ್ರತ್ಯಯ ಹಚ್ಚಿ ಪದಗಳನ್ನು ನಾಮವಾಚಕಗಳನ್ನಾಗಿ ಮಾಡುತ್ತಿರುವುದು ಇತ್ತೀಚೆಗೆ ಹೆಚ್ಚುತ್ತಿದೆ. ಈ ಮಾದರಿಯಲ್ಲಿ ಬಂದಿರುವ ಪದ. ಮಾದರಿ : ಸಿರಿತನ, ಬಡತನ, ಸರ್ವಾಧಿಕಾರತ್ವ ಸರಿಯಾದ ರೂಪ.

ಉಗ್ರಶೋಷಣೆ : ಹೆಚ್ಚು ತುಳಿತಕ್ಕೆ ಒಳಗಾಗುವುದು.

ಶತಶತಮಾನದಿಂದಲೂ ಉಗ್ರಶೋಷಣೆಗೆ ಒಳಗಾದವರು ಮುಖ್ಯವಾಗಿ ಎರಡು ವರ್ಗ ಒಂದು ಶೂದ್ರ ಇನ್ನೊಂದು ಸ್ತ್ರೀ. ಶೋಷಣೆ ಎಂಬ ನಾಮರೂಪಕ್ಕೆ 'ಉಗ್ರ' ಎಂಬ ಗುಣವಾಚಕವನ್ನು ಹತ್ತಿಸಲಾಗಿದೆ. ಮಾದರಿ : ಉಗ್ರ ಪ್ರತಿಭಟನೆ, ಉಗ್ರ ಪ್ರತಿಗಾಮಿ.

ಉಪದಲ್ಲಾಳಿ : ಕಮಿಷನ್ ಪಡೆಯುವವರಿಗೆ ಅಧೀನವಾಗಿದ್ದುಕೊಂಡು ವ್ಯವಹಾರದಲ್ಲಿ ತಾವೂ ಕಮಿಷನ್ ಪಡೆಯುವವರು ಮತ್ತು ಅವರು ಪಡೆಯುವ ಕಮಿಷನ್. 'ಉಪ' ಎನ್ನುವ ಪೂರ್ವಪ್ರತ್ಯಯವನ್ನು ಕನ್ನಡದಲ್ಲಿ ಹಲವಾರು ರೀತಿಯಲ್ಲಿ ಬಳಸಲಾಗುತ್ತದೆ. ಅಧೀನವಾಗಿದ್ದರೂ ಸ್ವಯಂಪೂರ್ಣವಾಗಿರುವ ವ್ಯವಸ್ಥೆಗೆ ಉಪ ಎನ್ನುವ ಪೂರ್ವಪ್ರತ್ಯಯವನ್ನು ಹಚ್ಚುವುದು ಒಂದು ಬಗೆ. ಇಂಗ್ಲೀಷಿನ ಸಬ್ ಪೂರ್ವ ಪ್ರತ್ಯಯಕ್ಕೆ ಇದು ಸಂವಾದಿ. ಮಾದರಿ : ಉಪನೋಂದಣಿ ಅಧಿಕಾರಿ, ಉಪ ವಿಭಾಗ.

ಗುತ್ತಿಗೆದಾರಿಕೆ : ಗುತ್ತಿಗೆ ಕೆಲಸ ವ್ಯವಸ್ಥೆ. ಗುತ್ತಿಗೆ ಕೆಲಸವನ್ನು ಮಾಡುವವನು ಗುತ್ತಿಗೆದಾರ. ಈ ರೂಪ ಬಳಕೆಗೆ ಬಂದ ಮೇಲೆ ಗುತ್ತಿಗೆದಾರ ಮಾಡುವ ಕೆಲಸವನ್ನು ಗುತ್ತಿಗೆದಾರಿಕೆ ಎಂದು ಸೂಚಿಸಲಾಗುತ್ತಿದೆ. ಈ ರೂಪಕ್ಕೆ ಯಜಮಾನಿಕೆ, ಜಮೀನ್ದಾರಿಕೆ, ಅಮಲ್ದಾರಿಕೆ ಮುಂತಾದ ರೂಪಗಳು ಮಾದರಿಯಾಗಿವೆ. ಗುತ್ತಿಗೆ ಹಾಗೂ ಗುತ್ತಿಗೆದಾರಿಕೆ ರೂಪಗಳಲ್ಲಿ ಅರ್ಥ ವ್ಯತ್ಯಾಸಗಳು ಕಡಿಮೆ. ಆದರೂ ಗುತ್ತಿಗೆ ಪದ ಹಲವು ಲಕ್ಷಣಾರ್ಥಗಳನ್ನು ಪಡೆದ ಮೇಲೆ ಈ ರೀತಿ ಹೊಸ ರೂಪವನ್ನು ಬಳಸುವುದು ಅನಿವಾರ್ಯವಾಗಿರಬಹುದು.

ಗುಲಾಮತನ : ಅಧೀನವಾಗಿರುವುದು, ಇನ್ನೊಬ್ಬರ, ಇನ್ನೊಂದು ದೇಶದ ಆಡಳಿತಕ್ಕೆ, ಯಜಮಾನ್ಯಕ್ಕೆ ಒಳಪಟ್ಟಿರುವುದು. ಗುಲಾಮಗಿರಿ ಎಂಬ ಪದವೊಂದು ಆಗಾಗ ಕನ್ನಡದಲ್ಲಿ ಬಳಕೆಯಾಗುವುದು. 'ತನ' ಪ್ರತ್ಯಯವನ್ನು ಬಳಸಿ ನಾಮರೂಪಗಳನ್ನು ರಚಿಸುವುದು ವಾಡಿಕೆ. ಬಡತನ, ದೊಡ್ಡಸ್ತನ, ಸಿರಿತನ, ಕಳ್ಳತನ ಇತ್ಯಾದಿ ರೂಪಗಳನ್ನು ಗಮನಿಸಿ, ತನ ಪ್ರತ್ಯಯ ಸಾಮಾನ್ಯವಾಗಿ ಗುಣವೊಂದರ ಇರುವಿಕೆಯನ್ನು ಸೂಚಿಸುತ್ತದೆ. ಗುಲಾಮ ಪದ ತಂತಾನೇ ಒಂದು ನಾಮಪದ. ಗುಲಾಮಿ ಬಹಶಃ ಗುಣವನ್ನು ಹೇಳುವ ರೂಪವಾದೀತು.

ಜಾಗತೀಕರಣ : ಇಡೀ ಜಗತ್ತಿಗೆ ಅನ್ವಯಿಸುವ ಹಾಗೆ ಮಾಡುವುದು. ಜಗದ್ವ್ಯಾಪಿಯಾಗಿಸುವುದು. ಈಕರಣ ಪದಭಾಗವನ್ನು ಹಚ್ಚುವ ಇನ್ನೊಂದು ಮಾದರಿ.

'ಆರ್ಥಿಕತೆಯ ಉದಾರೀಕರಣ ಮತ್ತು ಜಾಗತೀಕರಣವನ್ನು ಸರ್ಕಾರ ಎಷ್ಟೇ ಸಮರ್ಥಿಸಿಕೊಂಡರೂ ಅನುಮಾನಗಳು ಮಾತ್ರ ಪರಿಹಾರವಾಗುತ್ತಿಲ್ಲ'.

ಇದೇ ವಾಕ್ಯದಲ್ಲಿ ಬಂದಿರುವ ಉದಾರೀಕರಣ ರೂಪವನ್ನು ಗಮನಿಸಿದರೆ ಜಾಗತೀಕರಣ ರೂಪದ ರಾಚನಿಕ ಏರುಪೇರು ಸ್ಪಷ್ಟವಾಗುತ್ತದೆ. ಉದಾರದಿಂದ ಉದಾರೀಕರಣ ಸಾಧ್ಯ ಹಾಗಾದರೆ ಜಾಗತೀಕರಣದ ಪ್ರತಿರೂಪ ಯಾವುದು ? ಜಾಗತವಂತೂ ಅಲ್ಲ. ಜಾಗತಿಕ ಎಂದಾದರೆ ಜಾಗತೀಕರಣ-ದಲ್ಲಿರುವ ಈಕಾರವನ್ನು ವಿವರಿಸುವುದು ಹೇಗೆ ?

ದೌರ್ಜನ್ಯಕೋರ : ಕರಪತ್ರವೊಂದರಲ್ಲಿ ಬಳಕೆ. ದೌರ್ಜನ್ಯವನ್ನು ಮಾಡುವ ವ್ಯಕ್ತಿ, ದುರಾಚಾರದಲ್ಲಿ ತೊಡಗಿರುವ ವ್ಯಕ್ತಿ. 'ಅಸ್ಪೃಶ್ಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಿ ದೌರ್ಜನ್ಯಕೋರರನ್ನು ಗಡಿಪಾರು ಮಾಡಬೇಕು'. ಮಾದರಿ: ಲಂಚಕೋರ, ದಗಾಕೋರ, ದರೋಡೆಕೋರ. ಕೋರ ಎಂಬ ಸಾಧಕ ಪ್ರತ್ಯಯ ಪರ್ಷಿಯ ಅರಾಬಿಕ್ ಮೂಲದ್ದು. ಅದನ್ನಿಲ್ಲಿ ಸಂಸ್ಕೃತ ಪದಕ್ಕೆ ಹತ್ತಿಸಿ ಹೊಸ ರೂಪವೊಂದನ್ನು ಪಡೆಯಲಾಗಿದೆ. ಕೋರ ಪ್ರತ್ಯಯಕ್ಕಿರುವ ತಿರಸ್ಕಾರ ಸೂಚಕತೆಯನ್ನು ಬಳಸಿಕೊಳ್ಳಲು ಈ ರೂಪವನ್ನು ಪಡೆದುಕೊಂಡಂತೆ ತೋರುತ್ತದೆ.

ಬಂಡುಗಾರ : ನಿರ್ದಿಷ್ಟ ತಾತ್ವಿಕ ಹಿನ್ನೆಲೆಯನ್ನು ಹೊಂದಿರುವ ಪ್ರತಿಭಟನಕಾರ. ಬಂಡಾಯಗಾರ ಬಳಕೆಯಲ್ಲಿರುವ ಪದ. ಬಂಡುಖೋರ, ಬಂಡುಕೋರ ಎಂಬ ರೂಪಗಳೂ ಇವೆ. ಬಂಡಾಯಗಾರರ ಬಗೆಗೆ ಕೋಪ, ತಿರಸ್ಕಾರಗಳಿದ್ದಾಗ, ಅವರ ಕ್ರಮಗಳನ್ನು ವಿರೋಧಿಸುವಾಗ ಖೋರ ಪ್ರತ್ಯಯವನ್ನು ಬಳಸಲಾಗುವುದು.

ಸ್ತ್ರೀತನ : ಹೆಂಗಸಿನ ವಿಶಿಷ್ಟ ಗುಣ.

'ನಿಮ್ಮ ಉಡುಗೆಯಲ್ಲಿ ತೃಪ್ತಿಯನ್ನು ತಂದುಕೊಡುವುದು ಮಾತ್ರವಲ್ಲ, ನಿಮ್ಮ ಸ್ತ್ರೀತನವನ್ನು ಹೆಚ್ಚಿಸುತ್ತವೆ'. ಸಾಧ್ಯ ರೂಪಗಳು : ಪುರಷತನ, ಶಿಶುತನ, ಮನೆತನ, ವಯಸ್ಕತನ, ಕೋಪಿತನ.

ವಿವಿಧ ಹೋರಾಟಗಳಲ್ಲಿ ಅನ್ಯಭಾಷಾ ಪದಗಳ ಬಳಕೆ :

ಅಜೆಂಡಾ Agenda : ಸಭೆಯಲ್ಲಿ ಪರ್ಯಾಲೋಚಿಸಬೇಕಾದ ವಿಷಯಗಳ ಪಟ್ಟಿ, ಕಾರ್ಯಸೂಚಿ ಇವತ್ತಿನ ಅಜೆಂಡಾದಲ್ಲಿ ನೀವು ಹೇಳಿದ ವಿಷಯ ಇಲ್ಲ.

ಅಪಾಲಜಿ Apology : ಕ್ಷಮೆಯಾಚನೆ. ಅನ್ನೋದೇನೋ ಅಂದ್ಬಿಟ್ರು, ಆಮೇಲೆ ಅಪಾಲಜಿ ಕೇಳಬೇಕಾಗಿ ಬಂತು. ಅಪಾಲಜಿ ಲೆಟರ್ Apology letter ಕ್ಷಮಾಯಾಚನೆ ಪತ್ರ. ಅವನದೇ ತಪ್ಪು ಅಂತ ಒಂದು ಅಪಾಜಿ ಲೆಟರ್ ಬರೆಸಿಕೊಂಡರಂತೆ.

ಆಸಿಡ್ Acid : ಆಸಿಡ್ಡು ಆಮ್ಲ.

ಕಿಡಿಗೇಡಿಗಳು ಸುಂದರ ತರುಣಿಯ ಮುಖಕ್ಕೆ ಆಸಿಡ್ ಎರಚಿ ವಿರೂಪಗೊಳಿಸಿದ್ದಾರೆ.

ಬಾಯ್ಕಾಟ್ Boycott : ಬಹಿಷ್ಕಾರ; ಬಹಿಷ್ಕರಿಸು.

ಸರಿಯಾದ ರೀತೀಲಿ ಆರ್ಗನೈಸ್ ಮಾಡಿಲ್ಲ ಅಂತ ಇಡೀ ಪಂದ್ಯಾನ ಬಾಯ್ಕಾಟ್ ಮಾಡಿದ್ರು.

ಬ್ಲ್ಯಾಕ್‌ಮನಿ Black Money : ಕಪ್ಪು ಹಣ, ಲೆಕ್ಕಕ್ಕೆ ತೋರಿಸದ ಕಳ್ಳ ಹಣ.

ಇವರಿಗೆಲ್ಲಾ ಸಾಲಕೊಟ್ಟು, ಬ್ಲಾಕ್ ಮನಿನೆಲ್ಲ ವೈಟ್ ಮಾಡ್ಕೊಳ್ತಾರೆ.

ಕಂಪ್ಯೂಟರ್, ಕಂಪ್ಯೂಟ್ರು, Computer : ಕಂಪ್ಯೂಟರ್, ಗಣಕಯಂತ್ರ.

ಇದು ಕಂಪ್ಯೂಟರ್ ಯುಗ. ಎಲ್ಲರಿಗೂ ಇದರ ಬಗ್ಗೆ ಜ್ಞಾನ ಅವಶ್ಯಕ.

ಕಮ್ಯೂನಲ್ Communal : ಕೋಮು, ಸಮುದಾಯಕ್ಕೆ ಸಂಬಂಧಿಸಿದೆ.

ಏನು ಹೇಳಿದ್ರೂ ಅದಕ್ಕೆ ಕಮ್ಯೂನಲ್ ಬಣ್ಣ ಕೊಡ್ತಾರೆ.

ಕೋರಸ್ Chorus : ಸಮೂಹಗಾನ. ಈ ಹಾಡನ್ನು ಕೋರಸ್‌ನಲ್ಲಿ ಹಾಡಿದ್ದಾರೆ.

ಕ್ಯಾಪಿಟಲಿಸ್ಟ್ Capitalist : ಬಂಡವಾಳಗಾರ.

ಇದಕ್ಕೆಲ್ಲ ಹಣಾನ ಯಾರೋ ಒಬ್ಬ ಕ್ಯಾಪಿಟಲಿಸ್ಟ್ ಕೊಟ್ಟಿರ್‍ತಾನೆ.

ಡೌನ್ ಡೌನ್ Down Down : ಧಿಕ್ಕಾರವಾಚಕ ಪದ.

ಕಾರ್ಮಿಕರು ಫ್ಯಾಕ್ಟರಿಯಲ್ಲಿ ನಿಂತು ಡೌನ್ ಡೌನ್ ಎಂದು ಕೂಗಿದರು.

ಲೂಟ್ Loot : ಸೂರೆ ಮಾಡು, ಲೂಟಿ, ದರೋಡೆ. ಅಂಗಡಿಯನ್ನು ಲೂಟ್ ಮಾಡಿದ್ದಾರೆ.

ಲ್ಯಾಂಡ್ ಲಾರ್ಡ್ Land Lord : ಜಮೀನುದಾರ.

ಉತ್ತರ ಕರ್ನಾಟಕದಲ್ಲಿ ಲ್ಯಾಂಡ್ ಲಾರ್ಡ್‌ಗಳು ತುಂಬಾ ಇದಾರೆ.

ಆಫರ್ Offer ಆಫರ್‍ರು : ಕೊಡುಗೆ ೧) ಟೀವಿಗೆ ಗಡಿಯಾರ ಆಫರ್ ಇದೆ.

ಮದುವೆ ಪ್ರಸ್ತಾಪ– ೨) ನನಗೆ ಬೆಂಗಳೂರ್ ಕಂಪನಿಯಿಂದ ಆಫರ್ ಬಂದಿದೆ.

ಸಂಬಂಧ ಕೇಳಿಕೆ– ೩) ನಮ್ಮ ಹುಡುಗನಿಗೆ ಒಳ್ಳೆ ಕಡೆ ಆಫರ್ ಬಂದಿದೆ.

ಶೇರ್ ಮಾರ್ಕೇಟ್ Share Market : ಶೇರು ಪೇಟೆ.

ಈಗ ಶೇರ್ ಮಾರ್ಕೇಟ್‌ನಲ್ಲಿ ಯಾರಿಗೂ ಏನೂ ಆಸಕ್ತಿ ಇಲ್ಲ.

ಸ್ಟ್ರಗಲ್ Struggle : ಹೋರಾಟ, ಸಂಘರ್ಷ. ಅವರ ಲೈಫೆಲ್ಲ ಬರೀ ಸ್ಟ್ರಗಲ್ ಮಾಡೋದೆ ಆಯಿತು.

ಸ್ಟ್ರೈಕ್ Strike ಸ್ಟ್ರೈಕು : ಚಳುವಳಿ, ಮುಷ್ಕರ.

ಪೋಸ್ಟಲ್ ಡಿಪಾರ್ಟ್‌ಮೆಂಟನವರು ನಾಳೆಯಿಂದ ಸ್ಟ್ರೈಕ್ ಮಡ್ತಾರಂತೆ.

ಯೂನಿಟ Unit : ಒಗ್ಗಟ್ಟು, ಏಕತೆ.

ನಮ್ಮ ನಮ್ಮಲ್ಲೆ ಯೂನಿಟಿ ಇಲ್ಲ, ಇನ್ನು ಸರ್ಕಾರಾನ ಯಾಕೆ ಬ್ಲೇಮ್ ಮಾಡ್ಬೇಕು.

ಯೂನಿಯನ್ Union : ಸಂಘಟನೆ, ಒಕ್ಕೂಟ. ನಮ್ಮ ಯೂನಿಯನ್ನಿನವರು ಈ ಸ್ಟ್ರೈಕಿಗೆ ಸೇರೋದಿಲ್ಲ.

ಅಧ್ಯಾಯ–೧೧

ಉಪಸಂಹಾರ

ಅಧ್ಯಾಯ-೧೧

ಉಪಸಂಹಾರ

ಪರಿಭಾಷೆ ಎಂದರೆ ಪ್ರತಿಯೊಂದು ಜ್ಞಾನಕ್ಷೇತ್ರದಲ್ಲೂ ವಿಶೇಷವೂ, ವಿಶಿಷ್ಟವೂ ಆಗಿರುವಂತ ಪದಗಳೂ ಬಳಕೆಯಾಗುತ್ತಿರುತ್ತವೆ. ಇದು ಒಂದು ರೀತಿಯಲ್ಲಿ ಸಾಂದರ್ಭಿಕ ಭಾಷೆಯು (ರಿಜಿಸ್ಟರ್) ಹೌದು. ಸಾಮಾನ್ಯವಾಗಿ ಪರಿಭಾಷೆಯ ಪದಗಳು ಸಾಮಾನ್ಯವಾದ ಅರ್ಥಕ್ಕಿಂತ ವಿಶೇಷವಾದ ಅರ್ಥ ವಿಸ್ತಾರತೆಯನ್ನು ತನ್ನ ಪದರಚನೆಯಲ್ಲಿ ಇಟ್ಟುಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಹೋರಾಟಕ್ಕು ಒಂದು ಬಗೆಯ ಪರಿಭಾಷೆಗಳು ರೂಪಗೊಂಡಿರುತ್ತವೆ. ಹಾಗೆ ರೂಪಗೊಳ್ಳುವಾಗ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷವನ್ನು, ಒತ್ತಡವನ್ನು ಹೊತ್ತುಕೊಂಡು ರೂಪಗೊಂಡಿರುತ್ತವೆ. ಪರಿಭಾಷೆಯ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದಾಗ ಹಳೇ ಪರಿಭಾಷೆಗಳು ಹಿಂದಕ್ಕೆ ಬಿದ್ದು ಹೊಸ ಪರಿಭಾಷೆಗಳು ರೂಪಗೊಂಡಿರುವುದೂ ಉಂಟು. ಅಥವಾ ಕೆಲವು ಹಳೆಯ ಪರಿಭಾಷೆಗಳು ಹೊಸ ಅರ್ಥದ ಹಿನ್ನೆಲೆಯಲ್ಲಿ ಬಳಕೆಯಾಗಿರುವುದು ಉಂಟು. ಹೀಗಾಗಿ ಪಾರಿಭಾಷಿಕ ಪದಗಳ ಚರಿತ್ರೆ ಕುರಿತಾದ ಅಧ್ಯಯನ ತುಂಬಾ ಕುತೂಹಲವನ್ನುಂಟು ಮಾಡುತ್ತದೆ.

ಪ್ರಸ್ತುತ ಅಧ್ಯಯನವು ಪರಿಭಾಷೆ ಎಂದರೆ ತಾಂತ್ರಿಕ ಪದಪ್ರಯೋಗಗಳ ಹಿನ್ನೆಲೆಯನ್ನು ಅರ್ಥ ಮಾಡಿಸುವ ಪ್ರಯತ್ನವಲ್ಲ. ಅದಕ್ಕಿಂತ ಭಿನ್ನವಾದ ಉದ್ದೇಶವೊಂದಿದೆ. ಆ ಉದ್ದೇಶ ಪದಗಳ ಅರ್ಥ ಪರಿಕಲ್ಪನೆಗಳನ್ನು ವಿವರಣಾತ್ಮಕವಾಗಿ ವಿವರಿಸದೆ ಅವುಗಳ ಹಿಂದಿನ ಸೂಕ್ಷ್ಮ ಸಾಂಸ್ಕೃತಿಕ ರಾಜಕಾರಣವನ್ನು ಅನಾವರಣಗೊಳಿಸುವುದಾಗಿದೆ. ಅಂದರೆ ವಿವಿಧ ಹೋರಾಟಗಳಲ್ಲಿ ಪರಿಭಾಷೆಗಳ ಸ್ವರೂಪ ಅವುಗಳು ನಿರ್ಮಾಣವಾಗುವ ಬಗೆ, ಬಳಕೆಯ ಸಂದರ್ಭ ಮತ್ತು ಉದ್ದೇಶಗಳನ್ನು ಮೊದಲನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯ ದಲಿತ ಹೋರಾಟದಲ್ಲಿ ದಲಿತ ಪದದ ನಿಷ್ಪತ್ತಿ, ದಲಿತ ಹೋರಾಟ ಪರಿಭಾಷೆಯ ಸ್ವರೂಪವನ್ನು ಹೇಳಲಾಗಿದೆ. ದಲಿತ ಹೋರಾಟ ಪರಿಭಾಷೆ ಸೂಚಕ ಪದಗಳಲ್ಲಿ ರಾಜಕೀಯವಾಗಿ, ದಲಿತರ ಏಳ್ಗೆಗಾಗಿ, ಧಾರ್ಮಿಕ ವಲಯದಲ್ಲಿ, ದಲಿತ ಸಂಘ-ಸಂಸ್ಥೆಗಳು ಹಾಗೂ ದಲಿತ ಚಳುವಳಿಯ ಹಿನ್ನೆಲೆಯಲ್ಲಿ ರೂಪಗೊಂಡ ಪದಗಳನ್ನು ಸಂಗ್ರಹಿಸಿ ಕೊಡಲಾಗಿದೆ. ದಲಿತ ಹೋರಾಟದ ಪರಿಭಾಷೆ ಸಾಂದರ್ಭಿಕ ಭಾಷೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ. ದಲಿತ ಹೋರಾಟದ ಹಾಡುಗಳಲ್ಲಿ, ಘೋಷಣೆಗಳಲ್ಲಿ ಪರಿಭಾಷೆಯನ್ನು ಗುರುತಿಸಲಾಗಿದೆ.

ಮೂರನೆ ಅಧ್ಯಾಯವಾದ ರೈತ ಚಳುವಳಿಯಲ್ಲಿ ರೈತ ಹೋರಾಟದ ಪರಿಭಾಷೆಯ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ರೈತ ಹೋರಾಟದ ಪರಿಭಾಷೆ ಸೂಚಕ ಪದಗಳನ್ನು ಕೊಡಲಾಗಿದೆ. ಈ ಪದಗಳು ರೈತ ಚಳುವಳಿಯ ಪಾರಿಭಾಷಿಕ ಪದಗಳಾಗಿ ಬಳಕೆಯಾಗುತ್ತವೆ. ಹೋರಾಟದ ಸಂದರ್ಭ, ವಸ್ತು, ವಿಷಯವನ್ನಾಧರಿಸಿ ಈ ಪಾರಿಭಾಷಿಕ ಪದಗಳು ರೂಪತಾಳುತ್ತವೆ. ಹೋರಾಟದ ಪರಿಭಾಷೆ ಸಾಂದರ್ಭಿಕ ಭಾಷೆಯಾಗಿರುತ್ತದೆ. ರೈತ ಹೋರಾಟಗಳ ಹಿನ್ನೆಲೆಯಲ್ಲಿ

ಹುಟ್ಟಿಕೊಂಡ ಹಾಡುಗಳು ಮತ್ತು ಘೋಷಣೆಗಳಲ್ಲಿಯ ಪರಿಭಾಷೆಯನ್ನು ಕುರಿತು ಹೇಳಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಹಿಳಾ ಹೋರಾಟದ ವಿಷಯಗಳನ್ನು ಗುರುತಿಸಲಾಗಿದೆ. ಸ್ತ್ರೀವಾದದ ಹಿನ್ನೆಲೆಯಲ್ಲಿ ರಚನೆಯಾದ ಪಾರಿಭಾಷಿಕ ಪದಗಳನ್ನು ಕೊಡಲಾಗಿದೆ. ಮಹಿಳಾ ಹೋರಾಟದ ಪರಿಭಾಷೆ ಸಾಂದರ್ಭಿಕ ಭಾಷೆಯಾಗಿರುತ್ತದೆ ಎಂಬುದನ್ನು ಮಹಿಳಾ ಚಳುವಳಿಯಲ್ಲಿ ಹುಟ್ಟಿಕೊಂಡ ಹಾಡುಗಳನ್ನು ಮತ್ತು ಘೋಷಣೆಗಳನ್ನು ದಾಖಲಿಸಿ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಕಾರ್ಮಿಕ ಚಳುವಳಿಯ ಪರಿಭಾಷೆಯ ಸ್ವರೂಪ ಕುರಿತು ಚರ್ಚಿಸಲಾಗಿದೆ. ಕಾರ್ಮಿಕರ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಪಾರಿಭಾಷಿಕ ಪದಗಳನ್ನು ದಾಖಲಿಸಲಾಗಿದೆ. ಕಾರ್ಮಿಕ ಹೋರಾಟದ ಪರಿಭಾಷೆ ಸಾಂದರ್ಭಿಕ ಭಾಷೆ ಎಂಬುದನ್ನು ಕಾರ್ಮಿಕ ಹೋರಾಟದಲ್ಲಿ ಹುಟ್ಟಿಕೊಂಡ ಹಾಡುಗಳನ್ನು ಮತ್ತು ಘೋಷಣೆಗಳನ್ನು ದಾಖಲಿಸಿ ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ವಿದ್ಯಾರ್ಥಿ ಹೋರಾಟದ ಪರಿಭಾಷೆಯ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ವಿದ್ಯಾರ್ಥಿ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ವಿದ್ಯಾರ್ಥಿ ಸಂಘ ಸಂಸ್ಥೆಗಳು ಬಳಸುವ ಪರಿಭಾಷೆಗಳನ್ನು ದಾಖಲಿಸಲಾಗಿದೆ. ವಿದ್ಯಾರ್ಥಿ ಚಳುವಳಿಯ ಧ್ಯೇಯೋದ್ದೇಶಗಳನ್ನು ಹೇಳಲಾಗಿದೆ. ವಿದ್ಯಾರ್ಥಿ ಚಳುವಳಿಯಲ್ಲಿ ಹುಟ್ಟಿಕೊಂಡ ಪರಿಭಾಷೆ ಸೂಚಕ ಪದಗಳನ್ನು ದಾಖಲಿಸಲಾಗಿದೆ. ವಿದ್ಯಾರ್ಥಿ ಚಳುವಳಿಯ ಪರಿಭಾಷೆ ಸಾಂದರ್ಭಿಕ ಭಾಷೆಯಾಗಿದೆ ಎಂಬುದನ್ನು ವಿದ್ಯಾರ್ಥಿ ಚಳುವಳಿಯ ಘೋಷಣೆಗಳಿಂದ ಕಂಡುಕೊಳ್ಳಲಾಗಿದೆ.

ಏಳನೆಯ ಅಧ್ಯಾಯದಲ್ಲಿ **'ಹೋರಾಟದ ಪರಿಭಾಷೆ'** ವಿಷಯದಡಿಯಲ್ಲಿ ಆಯ್ದುಕೊಳ್ಳಲಾದ ದಲಿತ, ರೈತ, ಮಹಿಳೆ, ಕಾರ್ಮಿಕ ಮತ್ತು ವಿದ್ಯಾರ್ಥಿ ಚಳುವಳಿಗಳಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳ ತೌಲನಿಕ ಪದಪಟ್ಟಿಯನ್ನು ಕೊಡಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಪದಕೋಶ ಪಲ್ಲಟದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಹೋರಾಟದ ಪರಿಭಾಷೆ ಸಾಂದರ್ಭಿಕ ಭಾಷೆಯಾಗಿದೆ. ವಿವಿಧ ಹೋರಾಟದ ವಲಯಗಳಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳು ಒಂದು ಹೋರಾಟದಿಂದ ಮತ್ತೊಂದು ಹೋರಾಟದಲ್ಲಿ ಸಾಂದರ್ಭಿಕವಾಗಿ ಹುಟ್ಟಿಕೊಳ್ಳುವ ಪದಕೋಶ ಪಲ್ಲಟಗೊಳ್ಳುತ್ತದೆ. ಪದಕೋಶ ಪಲ್ಲಟದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಒಂಭತ್ತನೆಯ ಅಧ್ಯಾಯದಲ್ಲಿ ಪರಿಭಾಷೆಯ ಸಾಮಾಜಿಕ ಸಂವಹನವನ್ನು ಕುರಿತು ಚರ್ಚಿಸಲಾಗಿದೆ. ಈ ಪರಿಭಾಷೆಯ ಸಂವಹನವು ಪ್ರತಿಭಟನಕಾರ ಮತ್ತು ಅಧಿಕಾರಿ ವರ್ಗದ ನಡುವೆ ನಡೆಯುತ್ತದೆ. ಪ್ರತಿಭಟನಕಾರರ ಭಾಷೆಯನ್ನು ಅವರು ಕೂಗುವ ಘೋಷಣೆಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಅಧಿಕಾರಿ ವರ್ಗದ ಭಾಷೆ ಆಶ್ವಾಸನೆ ಮತ್ತು ಭರವಸೆಯಿಂದ ಕೂಡಿರುತ್ತದೆ. ಹತ್ತನೆಯ ಅಧ್ಯಾಯದಲ್ಲಿ ವಿವಿಧ ಹೋರಾಟಗಳ ಹೊಸ ಪರಿಭಾಷೆಯ ರಚನೆಯ ಸ್ವರೂಪವನ್ನು ಹೇಳುತ್ತ ಹೊಸಪದಗಳನ್ನು ದಾಖಲಿಸಲಾಗಿದೆ. ವಿವಿಧ ಹೋರಾಟಗಳಲ್ಲಿ ಬಳಕೆಯಾಗುವ ಅನ್ಯಭಾಷಾ ಪದಗಳನ್ನು ದಾಖಲಿಸಲಾಗಿದೆ. ಒಟ್ಟಾರೆಯಾಗಿ ಮಾಹಿತಿ ತಂತ್ರಜ್ಞಾನದ ಪ್ರಭಾವದಿಂದ ಇತ್ತೀಚಿನ ದಿನಗಳಲ್ಲಿ ಕನ್ನಡದ ಬಳಕೆಯು ಮಾಧ್ಯಮಗಳಲ್ಲಿ ಹೊಸ ಹೊಸದಾಗಿ ಬಳಕೆಯಾಗುತ್ತವೆ. ಅಂತಹ ಹಲವು ಪದಗಳನ್ನು ಗುರುತಿಸಲಾಗಿದೆ.

ಕನ್ನಡದಲ್ಲಿ ಹೋರಾಟದ ಪರಿಭಾಷೆಗಳನ್ನು ಕುರಿತು ಈವರೆಗೂ ಅಧ್ಯಯನಗಳು ನಡೆದಿಲ್ಲ. ಪ್ರಸ್ತುತ ಅಧ್ಯಯನವು ವಿವಿಧ ಹೋರಾಟಗಳ ಪರಿಭಾಷೆಯ ಹಲವಾರು ನೆಲೆಗಳನ್ನು ಅನಾವರಣಗೊಳಿಸುತ್ತದೆ. ಪ್ರಸ್ತುತ ಅಧ್ಯಯನವು ಪರಿಭಾಷೆಗಳಿಗೆ ಹೊಸ ಅರ್ಥವನ್ನು ನಿರ್ವಹಿಸುವ ಕೆಲಸ ಮಾಡಿದೆ. ಅಲ್ಲದೆ ಸಮಕಾಲೀನ ಸಂದರ್ಭದಲ್ಲಿ ಶೈಕ್ಷಣಿಕವಾಗಿ ಇವುಗಳ ಪಾತ್ರ ಮಹತ್ತರವಾಗಿದೆ. ಇದೊಂದು ಮೊದಲ ಪ್ರಯತ್ನವಾಗಿರುವುದರಿಂದ ಮುಂದಿನ ಅಧ್ಯಯನಕಾರರಿಗೆ ಇದೊಂದು ದಾರಿದೀಪವಾಗುವುದರಲ್ಲಿ ಅನುಮಾನವಿಲ್ಲ. ಇನ್ನೂ ಹೆಚ್ಚು ಹೆಚ್ಚು ಇದರ ಬಗ್ಗೆ ಆಳವಾದ ಅಧ್ಯಯನ ಆಗಬೇಕಾಗಿದೆ.

ಪರಾಮರ್ಶನ ಗ್ರಂಥಗಳು

ಕನ್ನಡ ಗ್ರಂಥಗಳ ಪಟ್ಟಿ

೧) ಅನುವಾದ : ಜ.ಹೂ. ನಾರಾಯಣಸ್ವಾಮಿ, ೨೦೦೦, ಭಾರತ ರೈತ ಮತ್ತು ಇತರ ಲೇಖನಗಳು, ನೆಲಮನೆ ಪ್ರಕಾಶನ ರಂಗನಾಥ ನಗರ ಶ್ರೀರಂಗಪಟ್ಟಣ.

೨) ಆಡಳಿತ ಕನ್ನಡ ಪಾರಿಭಾಷಿಕ ಪದರಚನೆ, ಅನುವಾದ ಹಾಗೂ ಕಂಪ್ಯೂಟರ್ ಬಳಕೆ, ೨೦೦೨, ದೂರಶಿಕ್ಷಣ ಕೇಂದ್ರ, ಕ.ವಿ.ವಿ. ಹಂಪಿ.

೩) ಉಜ್ವಲಾ ಹಿರೇಮಠ, ೧೯೯೫, ಮಹಿಳೆಯರ ಪ್ರಗತಿ ಸಂಪನ್ಮೂಲಗಳ ಕ್ರೂಢೀಕರಣ, ಪ್ರಗು.ವಿ.ವಿ. ಗುಲ್ಬರ್ಗ.

೪) ಎಚ್.ವಿ. ನಾಗೇಶ್, ಎ.ಇ. ಪುನೀತ, ೧೯೮೪, ಭಾರತದಲ್ಲಿ ರೈತ ಹೋರಾಟಗಳು, ಚಂದ್ರನಾಥ ಪ್ರಕಾಶನ ಧಾರವಾಡ.

೫) ಎನ್.ಪಿ. ಶಂಕರನಾರಾಯಣರಾವ್, ೨೦೦೬, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೬) ಓ.ಎಲ್. ನಾಗಭೂಷಣಸ್ವಾಮಿ, ೧೯೯೮, ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು.

೭) ಕುಮಾರ ಕಕ್ಕಯ್ಯ ಪೋಳ, ೧೯೯೭, ಚಾತುರ್ವರ್ಣ ಧರ್ಮದರ್ಶನ, ಲೋಹಿಯಾ ಪ್ರಕಾಶನ 'ಕ್ಷಿತಿಜ' ಕಪ್ಪಗಲ್ ರಸ್ತೆ, ಗಾಂಧಿನಗರ, ಬಳ್ಳಾರಿ.

೮) ಕೃಷಿ ಪದಕೋಶ, ೧೯೯೯, ಕ.ವಿ.ವಿ.ಹಂಪಿ.

೯) ಚಾಂಡಾಳ, ೨೦೦೨, ಕರ್ನಾಟಕ ದಲಿತ ಚಳುವಳಿ ಮತ್ತು ಡಾ॥ ಅಂಬೇಡ್ಕರ್ ಪ್ರಭಾವ, ಚೈತ್ರ ಪ್ರಕಾಶನ ಚಿಕ್ಕ ತಿರುಪತಿ.

೧೦) ಜನಧ್ವನಿ (ಜನಜಾಗೃತಿ ಹಾಗೂ ಹೋರಾಟದ ಹಾಡುಗಳು), ೨೦೦೮, ಇಪ್ಪಾ ಪ್ರಕಾಶನ, ಬಿ.ಸಿ.ರೋಡು, ಜೋಡುಮಾರ್ಗ, ಬಂಟ್ವಾಳ ತಾಲೂಕು.

೧೧) ಜೋತ್ಸ್ನ ಕಾಮತ್, ೧೯೯೯, ಮಹಿಳೆ ಒಂದು ಅಧ್ಯಯನ, ನವಕರ್ನಾಟಕ ಪ್ರಕಾಶನ ಬೆಂಗಳೂರು.

೧೨) ಟಿ.ಆರ್. ಚಂದ್ರಶೇಖರ, ೧೯೮೪, ಕಬ್ಬು ಬೆಳೆಗಾರರ ಹೋರಾಟ, ರೈತ ಸಂಘ ಹೋರಾಟ, ಹೊಸಪೇಟೆ.

೧೩) ಡಾ. ಸಿ.ಆರ್. ಗೋವಿಂದರಾಜು, ೧೯೯೯, ಕನ್ನಡ ಚಳುವಳಿಗಳು, ಸಂಪುಟ ೪, ಪ್ರಕ.ವಿ.ವಿ. ಹಂಪಿ.

೧೪) ಡಾ. ಅಕ್ಕಿ ಮಣಿಪಾಲ, ೧೯೯೭, ಸಾಮಾಜಿಕ ಚಳುವಳಿಗಳು, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೧೫) ಡಾ. ಎಸ್. ಚಂದ್ರಶೇಖರ್, ಕನ್ನಡಕ್ಕೆ ಸಿ. ನಾಗಣ್ಣ, ೨೦೦೦, ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರ.ಕ.ವಿ.ವಿ. ಹಂಪಿ.

೧೬) ಡಾ. ಎಂ. ಉಷಾ, ೨೦೦೪, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರ.ಕ.ವಿ.ವಿ. ಹಂಪಿ.

೧೭) ಡಾ. ಡಿ. ಮಂಗಳ ಪ್ರಿಯದರ್ಶಿನಿ, ೨೦೦೭, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಮ.ಅ.ಕೇ.ಕ.ವಿ.ವಿ. ಹಂಪಿ.

೧೮) ಡಾ. ಪ್ರೀತಿ ಶುಭಚಂದ್ರ, ೨೦೦೨, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರ.ಕ.ವಿ.ವಿ. ಹಂಪಿ.

೧೯) ಡಾ. ಸಾಂಬಮೂರ್ತಿ, ೨೦೦೧, ದಿನದಿನ ೨, ಪ್ರ.ಕ.ವಿ.ವಿ. ಹಂಪಿ.

೨೦) ಡಾ. ಪಿ. ಮಹಾದೇವಯ್ಯ, ೨೦೦೬ ದಿನ ದಿನ ೩, ಪ್ರ.ಕ.ವಿ.ವಿ. ಹಂಪಿ.

೨೧) ಡಿ.ಎಸ್. ವೀರಯ್ಯ ೨೦೦೫, ದಲಿತ ಚಿಂತನೆ (ವೈಚಾರಿಕ ಲೇಖನಗಳ ಸಂಕಲನ) ಸಪ್ನ ಬುಕ್‌ಹಾಸ್ ಬೆಂಗಳೂರು.

೨೨) ಪ್ರಹಲ್ಲಾದ ಅಗಸನ ಕಟ್ಟೆ, ೨೦೦೮, ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಹರ್ಷ ಪ್ರಕಾಶನ ಹುಬ್ಬಳ್ಳಿ.

೨೩) ಬೀಡಿ ಕಾರ್ಮಿಕರಿಗೆ ಒಂದು ಕೈಪಿಡಿ, ೨೦೦೬, ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟ, ಬೆಂಗಳೂರು.

೨೪) ಭಾರತ ವಿದ್ಯಾರ್ಥಿ ಫೆಡರೇಷನ್, ೨೦೦೫, ಕರ್ನಾಟಕ ರಾಜ್ಯ ಸಮಿತಿ ಬೆಂಗಳೂರು.

೨೫) ಸಂಕಲನ : ಕೆ.ವಿ. ನಾರಾಯಣ, ಬಿ. ಸುಜ್ಞಾನಮೂರ್ತಿ, ಅಶೋಕಕುಮಾರ ರಂಜೇರೆ, ೧೯೯೭ ದಿನದಿನ, ಪ್ರ.ಕ.ವಿ.ವಿ. ಹಂಪಿ.

೨೬) ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ೨೦೦೧, ಮೂರನೆಯ ಮುದ್ರಣ, ಕ.ಸಾ.ಪ.ಬೆಂಗಳೂರು.

೨೭) ಸಂಪಾದಕ : ಡಾ. ಪಿ. ಮಹಾದೇವಯ್ಯ, ೨೦೦೬, ದಲಿತರು ಭಾಷೆ ಮತ್ತು ಸಮಾಜ, ಪ್ರ.ಕ.ವಿ.ವಿ. ಹಂಪಿ.

೨೮) ಸಂಪಾದಕ : ಡಾ. ಪಿ. ಮಹಾದೇವಯ್ಯ, ೨೦೦೫, ದಲಿತರು ಮತ್ತು ಪರ್ಯಾಯ ರಾಜಕಾರಣ, ಪ್ರ.ಕ.ವಿ.ವಿ. ಹಂಪಿ.

೨೯) ಸಂಪಾದಕ : ಟಿ.ಆರ್. ಚಂದ್ರಶೇಖರ, ೨೦೦೫, ದಲಿತ ಅಧ್ಯಯನ, ಪ್ರ.ಕ.ವಿ.ವಿ. ಹಂಪಿ.

೩೦) ಸಂಪಾದಕರು : ಬರಗೂರು ರಾಮಚಂದ್ರಪ್ಪ, ೧೯೯೦, ಬಂಡಾಯ ಕಾವ್ಯ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.

೩೧) ಸಿ. ನಂಜುಂಡಪ್ಪ, ೧೯೯೮, ಕಾರ್ಮಿಕ ಚಳುವಳಿಯ ಕುರಿತು, ಭಾರತಿ ಪ್ರಕಾಶನ ಸರಸ್ವತಿ ಪುರಂ, ಮೈಸೂರು-೯.

೩೨) ಹೋರಾಟದ ಹಾಡುಗಳು. ಮೇ ೨೦೦೧, ಪ್ರಕಟಣೆ: ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು.

ಕನ್ನಡ ಲೇಖನಗಳ ಪಟ್ಟಿ

೧) ಡಾ. ಪಿ. ಮಹಾದೇವಯ್ಯ, ೨೦೦೮, ರಾಜಕೀಯ ಪರಿಭಾಷೆ. ಕನ್ನಡ ಟೈಮ್ಸ್ ವಾರಪತ್ರಿಕೆ, ಬೆಂಗಳೂರು.

೨) ಡಾ. ಧರಣೀದೇವಿ ಮಾಲಗತ್ತಿ, ಶಿಕ್ಷಣದ ಹೊಸ ಪರಿಭಾಷೆ, ೧೩-೧೨-೨೦೦೪ ಪ್ರಜಾವಾಣಿ ದಿನಪತ್ರಿಕೆ.

೩) ಪ್ರೊ. ಮಲ್ಲೇಪುರಂ ಜಿ ವೆಂಕಟೇಶ, ಜನವರಿ-ಮಾರ್ಚ್ ೨೦೦೮, ಜ್ಞಾನ ಕ್ಷೇತ್ರವನ್ನು ವಿಸ್ತರಿಸುವ ಪಾರಿಭಾಷಾಕೋಶ, ಪುಸ್ತಕ ಮಾಹಿತಿ, ಸಂಪುಟ ೧೬, ಸಂಚಿಕೆ ೧, ಪ್ರ.ಕ.ವಿ.ವಿ. ಹಂಪಿ.

೪) ಪ್ರೊ. ಮಲ್ಲೇಪುರಂ ಜಿ ವೆಂಕಟೇಶ, ಅಕ್ಟೋಬರ್-ಡಿಸೆಂಬರ್ ೨೦೦೭, ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಪುಸ್ತಕ ಮಾಹಿತಿ, ಪ್ರ.ಕ.ವಿ.ವಿ. ಹಂಪಿ.

೫) ಮೇಟಿ ಮಲ್ಲಿಕಾರ್ಜುನ : ಪಾರಿಭಾಷಿಕ ಪದಗಳ ರಚನೆ ಮತ್ತು ಬಳಕೆ; ಕೆಲವು ಸೈದ್ಧಾಂತಿಕ ವಿಚಾರಗಳು.

ನಿಯತಕಾಲಿಕೆಗಳು

೧) ಪ್ರಜಾವಾಣಿ : ೧೧-೦೬-೨೦೦೮ ರಿಂದ ೨೫-೦೬-೨೦೦೮ ವರೆಗೆ.

೨) ವಿಜಯ ಕರ್ನಾಟಕ : ೧೧-೦೬-೨೦೦೮ ರಿಂದ ೨೫-೦೬-೨೦೦೮ ವರೆಗೆ.

೩) ಸಂಯುಕ್ತ ಕರ್ನಾಟಕ : ೧೧-೦೬-೨೦೦೮ ರಿಂದ ೨೫-೦೬-೨೦೦೮ ವರೆಗೆ.